# ಅಧ್ಯಾಪಕ ಪಠ್ಯ

# TEACHER TEXT

## ಕನ್ನಡ

## KANNADA

ತರಗತಿ

**V**

ಕೇರಳ ಸರಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2024

# 1. ಕೃಷಿ ಸಂಪದ

ಕೃಷಿ ದೇಶದ ಜೀವನಾಡಿ ಎಂದರೆ ತಪ್ಪಾಗಲಾರದು. ನಮ್ಮ ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಕೃಷಿ ನಮ್ಮ ಭಾಷೆ ಮತ್ತು ಸಂಸ್ಕೃತಿಯ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿದೆ. ಒಂದು ಪ್ರದೇಶದ ಭಾಷೆಯನ್ನು ಸಮಗ್ರವಾಗಿ ನೋಡುವಾಗ ಅದರಲ್ಲಿ ಕೃಷಿಗೆ, ವಿಶೇಷವಾಗಿ ಬೇಸಾಯಕ್ಕೆ ಸಂಬಂಧಿಸಿದ ಭಾಷಾ ಪ್ರಯೋಗಗಳನ್ನು ಸಾಕಷ್ಟು ಕಾಣಬಹುದು. ವ್ಯಾವಹಾರಿಕವಾದ ಭಾಷೆಯಲ್ಲಿ ಇದು ಮತ್ತಷ್ಟು ಎದ್ದು ಕಾಣುತ್ತದೆ. ಕೃಷಿಯು ಒಂದು ಭಾಷೆಯ ಶಬ್ದ ಭಂಡಾರವನ್ನು ಶ್ರೀಮಂತಗೊಳಿಸುವುದಲ್ಲದೆ ಸಂಸ್ಕೃತಿಯ ವಿಕಾಸದಲ್ಲಿಯೂ ಪ್ರಧಾನ ಪಾತ್ರ ವಹಿಸುತ್ತದೆ. ಕೃಷಿಯು ಅವನತಿ ಹೊಂದಿದರೆ ಕೃಷಿ ಸಂಬಂಧವಾದ ಪದಗಳು, ಆಚರಣೆಗಳು ಮರೆಯಾಗುತ್ತಾ ಹೋಗುತ್ತವೆ.ನಮ್ಮ ಭಾಷೆ ಮತ್ತು ಸಂಸ್ಕೃತಿಯು ಕೃಷಿಯಿಂದ ಯಾವ ರೀತಿಯಲ್ಲಿ ಪ್ರಭಾವಿತಗೊಂಡಿದೆ ಎಂಬ ಅರಿವನ್ನು ಮಕ್ಕಳಲ್ಲಿ ಮೂಡಿಸುವುದಕ್ಕಾಗಿ ಈ ಘಟಕವನ್ನು ಪಠ್ಯ ಪುಸ್ತಕದಲ್ಲಿ ಅಳವಡಿಸಲಾಗಿದೆ. ಕೃಷಿ ವಸ್ತುವಾಗಿರುವ ಸಾಹಿತ್ಯ ರಚನೆಗಳನ್ನು ಓದಿ ಆಸ್ವಾದಿಸುವುದು, ಕೃಷಿಗೆ ಸಂಬಂಧಪಟ್ಟ ನಾಣ್ಣುಡಿಗಳನ್ನು, ನುಡಿಗಟ್ಟುಗಳನ್ನು ವ್ಯವಹಾರ ರೂಪದಲ್ಲಿ ಅಳವಡಿಸಿಕೊಳ್ಳುವುದು ಮೊದಲಾದ ಸಾಮರ್ಥ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಂತೆ ಈ ಘಟಕದಲ್ಲಿ ಪಾಠ ಭಾಗಗಳನ್ನು ನೀಡಲಾಗಿದೆ. ಘಟಕದ ಪ್ರಾರಂಭದಲ್ಲಿ ಅನ್ನದಾತ ಎಂಬ ಕವಿತೆ, ಕಾಯಕನಿಷ್ಠೆ ಎಂಬ ಕಥೆ, ಮತ್ತು ಜೇನು ಕೃಷಿಯ ಬಗ್ಗೆ ಒಂದು ಲೇಖನವನ್ನು ನೀಡಲಾಗಿದೆ.

ಈ ಘಟಕದ ಒಟ್ಟು ಆಶಯವನ್ನು ತಿಳಿದುಕೊಳ್ಳಲು ಪ್ರಾರಂಭದಲ್ಲಿ ಆಧುನಿಕ ಕೃಷಿ ಮತ್ತು ಹಳೆಯ ಕೃಷಿ ಸಂಪ್ರದಾಯವನ್ನು ಸೂಚಿಸುವ ಒಂದು ಚಿತ್ರವನ್ನು ಕೊಟ್ಟು ಚಿತ್ರದ ಕುರಿತು ಟಿಪ್ಪಣಿ ಬರೆಯಲು ಸೂಚಿಸಲಾಗಿದೆ. ಕೃಷಿಗೆ ಸಂಬಂಧಿಸಿದ ಪ್ರಸನ್ನಾ ವಿ ಚಕ್ಕೆಮನೆ ಯವರು ಬರೆದ ಅನ್ನದಾತ ಎಂಬ ಹಾಡೊಂದನ್ನು ನೀಡಲಾಗಿದೆ . ಈ ಕವಿತೆಯಲ್ಲಿ ಭತ್ತದ ಕೃಷಿಯ ವಿವಿಧ ಹಂತಗಳನ್ನು ವಿವರವಾಗಿ ನೀಡಲಾಗಿದೆ.

ಎರಡನೇ ಪಾಠ ಭಾಗವಾಗಿ 'ಕಾಯಕನಿಷ್ಠೆ' ಎಂಬ ಕಥೆಯನ್ನು ನೀಡಲಾಗಿದೆ. ಈ ಕಥೆಯಲ್ಲಿ ದುಡಿಮೆಯ ಮಹತ್ವವು ಪ್ರಧಾನ ವಾದ ಆಶಯವಾಗಿದೆ. ಮೂರನೇ ಪಾಠ ಜೇನು ಕೃಷಿಯ ಕುರಿತಾಗಿದೆ. ಇದರಲ್ಲಿ ಜೇನು ಕೃಷಿಯ ವಿವಿಧ ಹಂತಗಳನ್ನು ಸವಿವರವಾಗಿ ನೀಡಲಾಗಿದೆ. ಈ ಎಲ್ಲಾ ಪಾಠ ಭಾಗಗಳಲ್ಲಿ ಮಕ್ಕಳ ಆಶಯ ಗ್ರಹಣಕ್ಕೆ ಸಂಬಂಧಪಟ್ಟ ಸಾಕಷ್ಟು ಚಟುವಟಿಕೆಗಳನ್ನು ನೀಡಲಾಗಿದೆ.

**ಕಲಿಕಾ ಉದ್ದೇಶಗಳು**

- ಕೃಷಿಯು ವಸ್ತುವಾಗಿರುವ ಸಾಹಿತ್ಯ ರಚನೆಗಳನ್ನು ಓದಿ ಆಸ್ವಾದಿಸುವುದು.
- ಕನ್ನಡ ಸಾಹಿತ್ಯದ ಮೇಲೆ ಕೃಷಿಯ ಪ್ರಭಾವವನ್ನು ಕಂಡುಕೊಳ್ಳುವುದು.
- ಕೃಷಿಗೆ ಸಂಬಂಧಿಸಿದ ಕಥೆ, ಕವನ, ಲೇಖನಗಳನ್ನು ಓದಿ ಆಸ್ವಾದಿಸುವುದು.
- ಕವನಗಳನ್ನು ರಾಗ, ತಾಳ, ಲಯಬದ್ಧವಾಗಿ ಹಾಡುವುದನ್ನು ತಿಳಿದುಕೊಳ್ಳುವುದು.
- ಕೃಷಿಗೆ ಸಂಬಂಧಿಸಿದ ಗಾದೆಗಳು, ನಾಣ್ಣುಡಿಗಳು, ನುಡಿಗಟ್ಟುಗಳು, ಮೊದಲಾದ ಭಾಷಾ ಪ್ರಯೋಗಗಳ ಔಚಿತ್ಯವನ್ನು ತಿಳಿದುಕೊಳ್ಳುವುದು.
- ಕೃಷಿಯ ಕುರಿತಾದ ಲೇಖನಗಳನ್ನು ಓದುವ ಮೂಲಕ ಕೃಷಿಯಲ್ಲಿ ಆಸಕ್ತಿ ವಹಿಸುವಂತೆ ಮಾಡುವುದು.
- ದೇಶದ ಬೆನ್ನೆಲುಬಾಗಿರುವ ರೈತರು ನಮ್ಮ ಅನ್ನದಾತರು ಎಂದು ತಿಳಿದು ಅವರನ್ನು ಗೌರವಿಸುವುದು ಮತ್ತು ಅವರ ಬದುಕು ನೆಮ್ಮದಿ ಕಾಣುವಂತಾಗಲು ಸಹಕರಿಸುವುದು.

# ಯುನಿಟ್ ಗ್ರಿಡ್

**ತರಗತಿ - 5 (AT) ಮುಂದುವರಿದ ಪಠ್ಯ**

**ಘಟಕದ ಹೆಸರು :** ಕೃಷಿ ಸಂಪದ

**ಆಶಯ (Theme) :** ಕೃಷಿ

**ತರಗತಿ : 5**

**ಸಮಯ :18**

| ಉಪ ಆಶಯಗಳು | ತಿಳುವಳಿಕೆಗಳು | ಸಾಹಿತ್ಯ ರೂಪಗಳು | ಸಾಮರ್ಥ್ಯಗಳು / ಕೌಶಲಗಳು | ಮೌಲ್ಯಗಳು/ ಮನೋಭಾವಗಳು | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು (ಚಟುವಟಿಕೆಗಳು) | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| ಕೃಷಿ ಮತ್ತು ಸಂಸ್ಕೃತಿ<br><br>ನಿತ್ಯ ಜೀವನದಲ್ಲಿ ಕೃಷಿ<br><br>ಕೃಷಿ ವಿಧಾನಗಳು | ಕೃಷಿಯ ವಿವಿಧ ಹಂತಗಳನ್ನು ತಿಳಿಯುವುದು.<br><br>ಪ್ರಾಚೀನ ಕಾಲದಿಂದಲೂ ಕೃಷಿಯು ಸಂಸ್ಕೃತಿಯ ಭಾಗವಾಗಿದೆ ಎಂದು ತಿಳಿಯುವುದು.<br><br>ಕೃಷಿಯು ವಸ್ತುವಾಗಿರುವ ಅನೇಕ ಸಾಹಿತ್ಯ ಕೃತಿಗಳು ಕನ್ನಡದಲ್ಲಿವೆ ಎಂದು ತಿಳಿಯುವುದು. | ಕವಿತೆ (ಅನ್ನದಾತ)<br><br>ಕಥೆ (ಕಾಯಕ ನಿಷ್ಠೆ)<br><br>ಲೇಖನ (ಜೇನು ಕೃಷಿ) | • ಹಾಡುವುದು.<br>• ಆಲಿಸುವುದು<br>• ಬರೆಯುವುದು<br>• ಓದುವುದು.<br>• ಓದಿದ ವಿಷಯವನ್ನು ತರ್ಕಬದ್ಧವಾಗಿ ವಿಶ್ಲೇಷಿಸುವುದು. | • ಕೃಷಿಯು ವಸ್ತುವಾಗಿರುವ ಸಾಹಿತ್ಯ ರಚನೆಗಳನ್ನು ಓದಿ ಆಸ್ವಾದಿಸುವುದು.<br>• ಕೃಷಿಯಲ್ಲಿ ಆಸಕ್ತಿಯನ್ನು ಮೂಡಿಸುವುದು.<br>• ಕೃಷಿಯು ವಸ್ತುವಾಗಿರುವ ಸಾಹಿತ್ಯ ರಚನೆಗಳನ್ನು ಓದಿ ಆಸ್ವಾದಿಸುವುದು.<br>• ಬೇಸಾಯಕ್ಕೆ ಸಂಬಂಧಿಸಿದ ನುಡಿಗಟ್ಟುಗಳು, ಗಾದೆಗಳು, ಮೊದಲಾದವುಗಳ ಔಚಿತ್ಯವನ್ನು ತಿಳಿದು ವ್ಯವಹಾರ ರೂಪದಲ್ಲಿ ಬಳಸಿಕೊಳ್ಳುವುದು.<br>• ವಿವಿಧ ಕೃಷಿ ಪಠ್ಯಗಳ ಬಗ್ಗೆ ತಿಳಿದುಕೊಳ್ಳುವುದು. | • ಪ್ರಾಸಪದ ಗುರುತಿಸುವುದು.<br>• ಸರ್ವನಾಮ ಗಳನ್ನು ಗುರುತಿಸುವುದು.<br>• ನುಡಿಗಟ್ಟುಗಳು<br>• ವಾಕ್ಯ ರಚನೆ<br>• ವಿಂಗಡಿಸಿ ಬರೆಯುವುದು. | • ಟಿಪ್ಪಣಿ ಬರೆಯುವುದು.<br>• ಕಾರಣ ಬರೆಯುವುದು.<br>• ಅಭಿನಂದನ ಪತ್ರ<br>• ಸಂಭಾಷಣೆ ಬರೆಯುವುದು.<br>• ಪಾತ್ರ ಚಿತ್ರಣ.<br>• ಕಥೆಯನ್ನು ಮುಂದುವರಿಸಿ ಬರೆಯುವುದು.<br>• ಸಂದರ್ಶನ ಪ್ರಶ್ನಾವಳಿ<br>• ಪ್ರಬಂಧ | • ಗದ್ದೆ ಬೇಸಾಯದ ವಿವಿಧ ಹಂತಗಳನ್ನು ತಿಳಿಸುವ ವೀಡಿಯೋ<br>• ವ್ಯಾಕರಣಕ್ಕೆ ಸಂಬಂಧಿಸಿದ ಚಾರ್ಟುಗಳು<br>• ಜೇನು ಕೃಷಿಯ ಕುರಿತಾದ ವೀಡಿಯೋ<br>• ಕೃಷಿಕರೊಂದಿಗೆ ನಡೆಸುವ ಸಂದರ್ಶನಗಳ ವೀಡಿಯೋ | • ಪದ್ಯವನ್ನು ರಾಗವಾಗಿ ಹಾಡುವುದು.<br>• ಕೃಷಿ, ದುಡಿಮೆ (ಕಾಯಕ ನಿಷ್ಠೆಯ ಕುರಿತು) ಟಿಪ್ಪಣಿ ಬರೆಯುವುದು.<br>• ಇಷ್ಟವಾದ ಸಾಲುಗಳ ಕುರಿತು ಟಿಪ್ಪಣಿ ಬರೆಯುವುದು.<br>• ವಾಕ್ಯಗಳ ಆಶಯದ ಚರಣಗಳನ್ನು ಹುಡುಕಿ ಬರೆಯುವುದು.<br>• ಅಭಿನಂದನಾ ಪತ್ರ ಬರೆಯುವುದು.<br>• ಪದಗಳನ್ನು ಬರೆಯುವುದು.<br>• ಕೃಷಿಗೆ ಸಂಬಂಧಿಸಿದ ಹಾಡುಗಳನ್ನು ಬರೆಯುವುದು.<br>• ಸರಳ ಪ್ರಶ್ನೆಗಳಿಗೆ ಉತ್ತರಿಸುವುದು. |

| 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|
| | ಕೃಷಿಯನ್ನು ಒಂದು ಉದ್ಯೋಗ ವಾಗಿಯೂ ವ್ಯವಸಾಯ ವಾಗಿಯೂ ನಡೆಸಬಹುದು ಎಂಬುದನ್ನು ತಿಳಿಯುವುದು. | | | • ಬೇಸಾಯಕ್ಕೆ ಸಂಬಂಧಿಸಿದ ನುಡಿಗಟ್ಟುಗಳು, ಗಾದೆಗಳು, ಮೊದಲಾದವುಗಳ ಔಚಿತ್ಯವನ್ನು ತಿಳಿದು ವ್ಯವಹಾರ ರೂಪದಲ್ಲಿ ಬಳಸಿಕೊಳ್ಳುವುದು. | | | | • ಕೊಟ್ಟಿರುವ ವಾಕ್ಯಗಳನ್ನು ಆಶಯ<br>• ಸರಳ ಪ್ರಶ್ನೆಗಳಿಗೆ ಉತ್ತರಿಸುವುದು.<br>• ಯಾವುದಾದರೂ ಒಂದು ಕೃಷಿಯ ಬಗ್ಗೆ ಟಿಪ್ಪಣಿ ಬರೆಯುವುದು.<br>• ಹೈನುಗಾರಿಕೆಯ ಕುರಿತು ಪ್ರಬಂಧ ರಚಿಸುವುದು.<br>• ವಿರುದ್ಧಾರ್ಥಕ ಪದಗಳನ್ನು ಕಂಡುಕೊಂಡು ವಾಕ್ಯ ರಚಿಸುವುದು.<br>• ವಿಂಗಡಿಸಿ ಬರೆಯುವುದು. ವ್ಯತ್ಯಾಸವಾಗದಂತೆ ಕ್ರಮೀಕರಿಸಿ ಬರೆಯುವುದು.<br>• ಪಾತ್ರ ವರ್ಗಗಳನ್ನು ಕಂಡುಕೊಂಡು ಸಂಭಾಷಣೆ ಬರೆಯುವುದು. |

**ಪಾಠ ಪ್ರವೇಶ**

" ಕೃಷಿ ಸಂಪದ " ಘಟಕದಲ್ಲಿ ಕೃಷಿಗೆ ಸಂಬಂಧಿಸಿದ ಎರಡು ಪಾಠ ಭಾಗಗಳು ಮತ್ತು ಒಂದು ಪದ್ಯವನ್ನು ನೀಡಲಾಗಿದೆ .ಘಟಕದ ಪ್ರಾರಂಭದಲ್ಲಿ ಕೊಟ್ಟಿರುವ ಚಿತ್ರವನ್ನು ಗಮನಿಸಲು ಹೇಳುವುದು. ಅನಂತರ ಕೆಲವು ಸರಳವಾದ ಪ್ರಶ್ನೆಗಳನ್ನು ಕೇಳುವ ಮೂಲಕ ಪದ್ಯದ ಕಡೆಗೆ ಹೋಗುವುದು .

- ಈ ಚಿತ್ರವು ಯಾವುದಕ್ಕೆ ಸಂಬಂಧಿಸಿದ್ದು?
- ಚಿತ್ರದಲ್ಲಿ ಏನನ್ನೆಲ್ಲ ಕಾಣುತ್ತೀರಿ?
- ಗದ್ದೆ ಬೇಸಾಯ ಮಾಡುವ ಹಳೆ ವಿಧಾನ ಮತ್ತು ಹೊಸ ವಿಧಾನಗಳ ಬಗ್ಗೆ ತಿಳಿದಿರುವಿರಾ?

ಅನಂತರ ಚಿತ್ರದ ಕುರಿತಾಗಿ ಟಿಪ್ಪಣಿಯನ್ನು ಬರೆಯಲು ಹೇಳುವದು. ಅಗತ್ಯವಿರುವಲ್ಲಿ ಅಧ್ಯಾಪಕರು ಸಹಾಯವನ್ನು ಮಾಡುವುದು .

ಮಕ್ಕಳು ಈ ಹಾಡನ್ನು ವೈಯಕ್ತಿಕವಾಗಿಯೂ ಗುಂಪಿನಲ್ಲಿಯೂ ಹಾಡಲಿ. ಮಕ್ಕಳು ಹಾಡನ್ನು ಹಾಡುತ್ತ ಆಸ್ವಾದಿಸಲಿ. ಕೃಷಿಯ ಕುರಿತಾದ ಇಂತಹ ಹಾಡುಗಳ ಬಗ್ಗೆ ಆಸಕ್ತಿ ಮೂಡಿಸಲು ಈ ಕೆಳಗಿನ ಪ್ರಶ್ನೆಗಳನ್ನು ಕೇಳುವ ಮೂಲಕ ಪಾಠ ಪ್ರವೇಶವನ್ನು ಮಾಡುವುದು.

- ಈ ಹಾಡು ಯಾವುದಕ್ಕೆ ಸಂಬಂಧಿಸಿದೆ?
- ಈ ಹಾಡು ಇಷ್ಟವಾಯಿತೆ?
- ನಮ್ಮ ಪರಿಸರದಲ್ಲಿ ಭತ್ತದ ಕೃಷಿಯನ್ನು ಮಾಡುತ್ತಾರೆಯೇ?

ಈ ಮೇಲಿನ ಪ್ರಶ್ನೆಗಳಿಗೆ ಮಕ್ಕಳು ಬಾಯ್ದೆರೆಯಾಗಿ ಉತ್ತರಿಸಲಿ. ಮಕ್ಕಳಿಗೆ ಕೃಷಿಗೆ ಸಂಬಂಧಿಸಿದ ಇಂತಹ ಹಾಡುಗಳು ಗೊತ್ತಿದ್ದರೆ ಅವರಿಗೆ ಹಾಡಲು ಅವಕಾಶವನ್ನು ನೀಡುವುದು .

ಇದಕ್ಕೆ ಪೂರಕವಾದ ವಿಡಿಯೋಗಳನ್ನು ತೋರಿಸುವುದು .

ಭತ್ತದ ಕೃಷಿಯ ಬಗ್ಗೆ ಇರುವ ವಿವಿಧ ವಿಡಿಯೋಗಳನ್ನು ಪ್ರದರ್ಶಿಸಬಹುದು.

ಅಧ್ಯಾಪಕರು ಕೃಷಿಗೆ ಸಂಬಂಧಿಸಿದ ಒಂದು ಹಾಡನ್ನು ರಾಗವಾಗಿ ಹಾಡುವುದು.

# 1. ಅನ್ನದಾತ

**ಚಟುವಟಿಕೆಗಳು**

**ಓದುವಿಕೆ**

ಮೊದಲಿಗೆ ಮಕ್ಕಳು ವೈಯಕ್ತಿಕವಾಗಿ ಮೌನವಾಗಿ ಓದುವರು. ಪದ್ಯದಲ್ಲಿ ಬಂದಿರುವ ಕಠಿಣ ಪದಗಳ ಅರ್ಥವನ್ನು ಪದಕೋಶದ ಸಹಾಯದಿಂದ ಕಂಡುಹಿಡಿಯಲು ಅಧ್ಯಾಪಕರು ಸಹಕರಿಸುವುದು. ಹಾಗೆಯೇ ಪ್ರಾಸಪದಗಳು, ವಿರೋಧಾರ್ಥಪದಗಳನ್ನು ಗುರುತಿಸುವುದು. ಪದ್ಯವನ್ನು ಗಟ್ಟಿಯಾಗಿ ಓದಲು ಹೇಳುವುದು. ಈ ಮೂಲಕ ತಪ್ಪುಗಳನ್ನು ತಿದ್ದಲು ಸಹಕರಿಸುವುದು. ಪದ್ಯದ ಪ್ರಧಾನ ಆಶಯವಾದ ಗದ್ದೆ ಬೇಸಾಯದ ವಿವಿಧ ಹಂತಗಳ ಕುರಿತು ಮಾಹಿತಿಯನ್ನು ನೀಡುವ ವೀಡಿಯೋವನ್ನು ಪ್ರದರ್ಶನವನ್ನು ಮಾಡುವುದು.

✍ **ಹಾಡಿರಿ**

ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡುವುದು. ಗುಂಪಿನಲ್ಲಿ ಮೌನವಾಗಿ ಓದಲು ಹೇಳುವುದು. ಮಕ್ಕಳು ಗುಂಪುಗಳಲ್ಲಿ ಕುಳಿತು ಕವಿತೆಗೆ ಸೂಕ್ತವಾದ ರಾಗವನ್ನು ಹಾಕಲಿ. ಬಳಿಕ ಪ್ರತಿಯೊಂದು ಗುಂಪು ಕವನವನ್ನು ರಾಗ, ತಾಳ, ಲಯ, ಭಾವಗಳೊಂದಿಗೆ ಹಾಡಲಿ. ಗುಂಪುಗಳೊಂದಿಗೆ ಸರದಿಯಂತೆ ಹಾಡಲು ಹೇಳುವುದು. ಒಂದು ಗುಂಪು ಹಾಡುವಾಗ ಉಳಿದ ಗುಂಪುಗಳು ಮೌಲ್ಯ ಮಾಪನ ಮಾಡಲಿ. ಉತ್ತಮವಾಗಿ ಹಾಡಿದ ಗುಂಪನ್ನು ಅಭಿನಂದಿಸುವುದು. ಮಾದರಿಯಾಗಿ ಅಧ್ಯಾಪಕರೇ ಸ್ವತಃ ಹಾಡಬಹುದು.

**ಮೌಲ್ಯ ಮಾಪನ ಸೂಚಕಗಳು**

- ಎಲ್ಲರ ಭಾಗವಹಿಸುವಿಕೆ
- ರಾಗ, ತಾಳ, ಲಯಬದ್ಧವಾಗಿ ಹಾಡುವುದು.
- ಉಚ್ಚಾರ ಸ್ಪಷ್ಟತೆ

✍ **ಟಿಪ್ಪಣಿ ಬರೆಯಿರಿ**

ಮೊಳೆತಿಹ ಸಸಿಗಳ
ಕ್ರಮದಲಿ ನೆಡುತಲಿ
ಬೆವರಿಳಿಸುತಲಿ ದುಡಿಯುವನು

ಮೇಲೆ ನೀಡಿರುವ ಮೂರು ಸಾಲುಗಳಲ್ಲಿ ಯಾವುದರ ಬಗ್ಗೆ ವಿವರಿಸಲಾಗಿದೆ ಎಂದು ಚರ್ಚಿಸುವುದು.
ಭತ್ತದ ಕೃಷಿಯ ವಿವಿಧ ಹಂತಗಳ ಕುರಿತು ಚರ್ಚಿಸಿ ಕಂಡುಕೊಂಡ ವಿಚಾರಗಳನ್ನು ಕರಿಹಲಗೆಯಲ್ಲಿ ಬರೆಯುವುದು. ಅನಂತರ ಕ್ರೋಡಿಕರಿಸಿ ಟಿಪ್ಪಣಿ ಬರೆಯುವುದು.

**ಟಿಪ್ಪಣಿ ಹೇಗಿರಬೇಕು**

- ಪ್ರಧಾನ ಆಶಯವಿರಬೇಕು.
- ಉಪಆಶಯಗಳು ಸಂಕ್ಷಿಪ್ತವಾಗಿರಬೇಕು.
- ಭಾಷೆ, ಶೈಲಿ ಇತ್ಯಾದಿ ಅಂಶಗಳನ್ನು ಗಮನಿಸಬೇಕು.

**ಟಿಪ್ಪಣಿ ಹೀಗೂ ಇರಬಹುದಲ್ಲವೇ**

ಈ ಮೇಲಿನ ಮೂರು ಸಾಲುಗಳಲ್ಲಿ ಭತ್ತದ ಕೃಷಿಯನ್ನು ಮಾಡುವ ವಿಧಾನವನ್ನು ಸರಳವಾಗಿ ವಿವರಿಸಿದ್ದಾರೆ. ಮೊತ್ತ ಮೊದಲು ಗದ್ದೆಯನ್ನು ಉತ್ತು ಹದಗೊಳಿಸಿ, ಬೀಜಗಳನ್ನು ಬಿತ್ತಬೇಕು. ನಂತರ ಒಂದು ತಿಂಗಳ ಸಮಯವಾಗುವಾಗ ಮೊಳೆತಂತಹ ಸಸಿಗಳನ್ನು ಕಿತ್ತು ಅದನ್ನು ಉತ್ತು ಹದಗೊಳಿಸಿದ ಗದ್ದೆಯಲ್ಲಿ ಸಾಲಾಗಿ ನಡೆಬೇಕು. ಇದು ಹೆಚ್ಚಾಗಿ ಹಗಲು ಹೊತ್ತಿನಲ್ಲಿಯೇ ನಡೆಯುವ ಕೆಲಸವಾದುದರಿಂದ ಗದ್ದೆಯಲ್ಲಿ ಕೆಲಸ ಮಾಡುವವರೆಲ್ಲರೂ ಶ್ರಮವಹಿಸಿ ಬೆವರಳಿಸುತ್ತಾ ದುಡಿಯುತ್ತಾರೆ. ಭಾರತವು ಕೃಷಿ ಪ್ರಧಾನವಾದ ದೇಶವಾಗಿದ್ದು ಶೇಕಡಾ 85ರಷ್ಟು ಜನರು ಬೇಸಾಯವನ್ನೇ ಅವಲಂಬಿಸಿದ್ದಾರೆ. ಆದರೆ ಇತ್ತೀಚೆಗೆ ಹಳ್ಳಿಗಳು ಹೋಗಿ ನಗರ ಪ್ರದೇಶಗಳು ಬೆಳೆಯ ತೊಡಗಿವೆ. ಜನಸಂಖ್ಯೆ ಹೆಚ್ಚಾದಂತೆಲ್ಲ ಆಹಾರದ ಸಮಸ್ಯೆಯು ತಲೆದೋರುತ್ತದೆ. ಪೇಟೆಗಳು ಬೆಳೆದಂತೆಲ್ಲ ಆಹಾರ ಬೆಳೆಯುವ ಸ್ಥಳಗಳು ಕಡಿಮೆಯಾಗುತ್ತಾ ಹೋಗುತ್ತವೆ. ಮನುಷ್ಯ ಹೊಟ್ಟೆಗೆ ಆಹಾರವಿಲ್ಲದೆ ಬದುಕಲಾರ, ಆಹಾರ ದೊರೆಯಬೇಕಾದರೆ ಹೊಲದಲ್ಲಿ ನಿರಂತರವಾಗಿ ದುಡಿಯುತ್ತಿರಬೇಕು.

✍ **ಕಾರಣ ಬರೆಯಿರಿ**

ಮಕ್ಕಳು ತಮಗೆ ಇಷ್ಟವಾದ ಸಾಲುಗಳನ್ನು ಬರೆದು ಆ ಸಾಲುಗಳು ಇಷ್ಟವಾಗಲು ಕಾರಣವೇನೆಂದು ಬರೆಯಲಿ.

✍ **ಹುಡುಕಿ ಬರೆಯಿರಿ**

ಪದ್ಯವನ್ನು ಈಗಾಗಲೇ ಸಾಕಷ್ಟು ಬಾರಿ ಹಾಡಿರುವ ಮಕ್ಕಳು ಆಶಯವನ್ನು ತಿಳಿದಿರುತ್ತಾರೆ. ಚಟುವಟಿಕೆಯಲ್ಲಿ ಪಾಠ ಪುಸ್ತಕದಲ್ಲಿ ಕೊಟ್ಟವಾಕ್ಯಗಳ ಆಶಯವಿರುವ ಚರಣಗಳನ್ನು ಪದ್ಯ ಭಾಗದಿಂದ ಹುಡುಕಿ ಬರೆಯಲು ಮಕ್ಕಳಿಗೆ ತಿಳಿಸುವುದು.

1. ರೈತನು ಬೆಳೆಯನ್ನು ರಕ್ಷಿಸುತ್ತಾನೆ.
- ಕೃಷಿಯನು ನಾಶವ
  ಗೈಯಲು ಬರುವ
  ಪ್ರಾಣಿಗೆ ಕಾವಲು ಕೂರುವನು.
2. ನಿರಂತರ ದುಡಿಯುವ ರೈತನ ಬದುಕು ನಮಗೆ ಆದರ್ಶ ಪ್ರಾಯವಾಗಿದೆ.
- ಅವಿರತ ಶ್ರಮದ
  ಅನುಪಮ ನಿಷ್ಠೆಯ
  ರೈತನೆ ನಮಗೆ ಮಾದರಿಯು.

## ✍ ಅಭಿನಂದನ ಪತ್ರ, ಬರೆಯಿರಿ

ಮೊದಲಿಗೆ ಸಾಮಾನ್ಯ ಚರ್ಚೆಯ ಮೂಲಕ ಬೆಳೇರಿ ಸತ್ಯನಾರಾಯಣ ರವರಿಗೆ ಅಭಿನಂದನಾ ಪತ್ರ ಬರೆಯುವುದರ ಅಗತ್ಯವನ್ನು ಮಕ್ಕಳು ಮನಗಾಣಬೇಕು. ಅದಕ್ಕಾಗಿ ಚರ್ಚೆಯಲ್ಲಿ ಈ ಕೆಳಗಿನ ಪ್ರಶ್ನೆಗಳನ್ನು ಕೇಳಬಹುದು.

- ಕೃಷಿ ಕ್ಷೇತ್ರದಲ್ಲಿ ಬೆಳೇರಿಯವರು ಮಾಡಿದ ಸಾಧನೆಯೇನು?
- ಬೆಳೇರಿಯವರಿಗೆ ಈ ಸಾಧನೆ ಮಾಡಲು ಪ್ರೇರೇಪಿಸಿದ ವಿಚಾರಗಳು ಯಾವುವು?
- ಅವರಲ್ಲಿ ನೀವು ಕಂಡುಕೊಂಡ ಉತ್ತಮ ಗುಣಗಳು ಯಾವುವು?

ಚರ್ಚೆಯ ಬಳಿಕ ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ನಂತರ ಗುಂಪುಗಳಲ್ಲಿ ಚರ್ಚಿಸಿ, ಉತ್ತಮ ಪಡಿಸಿ ಮಂಡಿಸಲಿ. ಅಗತ್ಯವಿರುವಲ್ಲಿ ಅಧ್ಯಾಪಕರು ಸಹಾಯವನ್ನು ಮಾಡುವುದು. ಯಾವ ವಿಷಯದಲ್ಲಾಗಲಿ ಹೆಚ್ಚಿನ ಸಾಧನೆ ಮಾಡಿದವರನ್ನು ಗುರುತಿಸಿ ಮತ್ತಷ್ಟು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಅವರನ್ನು ಅಭಿನಂದಿಸಬೇಕಾದದು ನಮ್ಮೆಲ್ಲರ ಕರ್ತವ್ಯವಾಗಿದೆ. ಮಕ್ಕಳಾಗಲಿ -ದೊಡ್ಡವರಾಗಲಿ ,ಶ್ರೀಮಂತರಾಗಲಿ - ಬಡವರಾಗಲಿ ಅವರ ಸಾಧನೆಗಳನ್ನು ಒಪ್ಪಿಕೊಳ್ಳಲೇಬೇಕು. ಅಭಿನಂದನ ಪತ್ರ ಬರೆಯುವಾಗ ಸ್ಥಳ 'ತಾರೀಕು ಸಂಬೋಧನೆಗಳು ಅಗತ್ಯ. 2024ನೇ ವರ್ಷದಲ್ಲಿ ಭತ್ತದ ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕಾಸರಗೋಡು ಜಿಲ್ಲೆ ಬೆಳ್ಳೂರು ಪಂಚಾಯತಿನ ಸತ್ಯನಾರಾಯಣ ಬೆಳೇರಿಯವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿತು. ಈ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಿ ಬರೆದ ಅಭಿನಂದನ ಪತ್ರದ ಮಾದರಿಯನ್ನು ಕೆಳಗೆ ಕೊಡಲಾಗಿದೆ.

**ಅಭಿನಂದನ ಪತ್ರ ಹೇಗಿರಬೇಕು?**

- ಪತ್ರದ ಚೌಕಟ್ಟು ಇರಬೇಕು (ಸ್ಥಳ, ದಿನಾಂಕ, ಸಹಿ, ಸಂಬೋಧನೆ ಇತ್ಯಾದಿ)
- ಸಾಧನೆಗಳನ್ನು ಯೋಗ್ಯವಾದ ಪದ, ನುಡಿಗಟ್ಟು, ಉಪಮೆಗಳನ್ನು ಸೇರಿಸಿ ಅಭಿನಂದಿಸಿರಬೇಕು.
- ಆಶಯವು ಸ್ಪಷ್ಟವಾಗಿಯೂ ಕ್ರಮಬದ್ಧವಾಗಿಯೂ ಇರಬೇಕು.

**ಅಭಿನಂದನಾ ಪತ್ರ ಹೀಗೆಯೂ ಇರಬಹುದಲ್ಲವೇ?**

**ಅಭಿನಂದನ ಪತ್ರ**

ಕಾಸರಗೋಡು
1/3/ 2024

ಗೌರವಾನ್ವಿತ ಸತ್ಯನಾರಾಯಣ ಬೆಳೇರಿಯವರಿಗೆ ವಂದನೆಗಳು,

ಕಾಸರಗೋಡು ಜಿಲ್ಲೆಯ ಬೆಳ್ಳೂರು ಗ್ರಾಮ ಪಂಚಾಯಿತಿನ ನೆಟ್ಟಣಿಗೆ ಗ್ರಾಮದ ಸಾಧಾರಣ ಕೃಷಿ ಕುಟುಂಬದಲ್ಲಿ ಜನಿಸಿದ ನೀವು ಕಳೆದ 12 ವರ್ಷಗಳಿಂದ ಮರೆಯಾಗುತ್ತಿರುವ ದೇಸಿ ಭತ್ತದ ತಳಿಗಳ ಸಂರಕ್ಷಣೆ ಮತ್ತು ಸಂವರ್ಧನೆಯ ಮಹತ್ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದೀರಿ. ದಶಕಗಳ ಹಿಂದೆ ಚೇರ್ಕಾಡಿ ರಾಮಚಂದ್ರ ರಾಯರು ನೀಡಿದ ಒಂದು ಮುಷ್ಟಿ ರಾಜಕಯಮೆ ಎಂಬ ದೇಸಿ ಭತ್ತದ ತಳಿಯೊಂದಿಗೆ ಆರಂಭವಾದ ನಿಮ್ಮ ಕೆಲಸವು ಪ್ರಸ್ತುತ 650 ಕ್ಕೂ ಹೆಚ್ಚು ತಳಿಗಳ ಸಂರಕ್ಷಣೆವರೆಗೆ ತಲುಪಿದೆ .ಗಂಧಸಾಲೆ, ರಾಜಕಯಮೆ ,ಅತಿಕಾರ' ಸುಗ್ಗಿ, ಕಯಮೆಯೇ ಮುಂತಾದ ಮೈಸೂರು ರಾಜರುಗಳು ಬಳಸುತ್ತಿದ್ದ ತಳಿಗಳೊಂದಿಗೆ ದೇಶಿ ತಳಿಗಳನ್ನು ಸಂರಕ್ಷಣೆ ಮಾಡುತ್ತಿದ್ದೀರಿ. ಸ್ಥಳೀಯ ಬೀಜ ವೈವಿಧ್ಯವನ್ನು ಸಂರಕ್ಷಿಸುವ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಕೇಂದ್ರ ಕೃಷಿ ಇಲಾಖೆಯು ನೀಡುವ PLANT GENOME SAVIOUR FARMER REWARD ಎಂಬ ರಾಷ್ಟ್ರೀಯ ಪುರಸ್ಕಾರಕ್ಕೆ ನೀವು ಅರ್ಹರಾಗಿದ್ದೀರಿ. ಒಂದೂವರೆ ಲಕ್ಷ ರೂಪಾಯಿ, ಪ್ರಶಸ್ತಿ ಫಲಕ ಮತ್ತು ಪ್ರಮಾಣಪತ್ರವನ್ನು ಇದು ಒಳಗೊಂಡಿದ್ದು 2021 ನವಂಬರ್ 11ಕ್ಕೆ ಇದನ್ನು ನಿಮಗೆ ಪ್ರಧಾನ ಮಾಡಲಾಯಿತು.ಯಾವುದೇ ಕೃಷಿ ವಿಶ್ವವಿದ್ಯಾನಿಲಯಗಳು ಮಾಡುವ ಕೆಲಸಗಳನ್ನು ನೀವೊಬ್ಬರೇ ಮಾಡುತ್ತಿರುವುದು ಶ್ಲಾಘನೀಯವೇ ಸರಿ. ನಿಮ್ಮ ಸಾಧನೆಯನ್ನು ಮನಗಂಡು ಭಾರತ ಸರಕಾರವು 2024ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ ಎಂಬುದು ನಮಗೆಲ್ಲ ಅಭಿಮಾನದ ಸಂಗತಿ. ಮುಂದೆಯೂ ಕೃಷಿ ಜಗತ್ತಿಗೆ ನಿಮ್ಮಿಂದ ಇದಕ್ಕಿಂತ ಹೆಚ್ಚಿನ ಕೊಡುಗೆಗಳು ಲಭಿಸಲಿ ಎಂದು ಹಾರೈಸುತ್ತೇವೆ.

ಇತಿ ವಿದ್ಯಾರ್ಥಿಗಳು
5ನೇ ತರಗತಿ

✍ **ಹುಡುಕಿ ಬರೆಯಿರಿ**

ಪಟ್ಟಿಯಿಂದ ಅಕ್ಷರ ಜೋಡಿಸಿ, ಕೃಷಿಗೆ ಸಂಬಂಧಿಸಿದ ಪದ ಹುಡುಕಿ ಬರೆಯಿರಿ.

- ಗಂಧಸಾಲೆ
- ಒನಕೆ
- ಗೊರಬೆ
- ನೇಗಿಲು
- ನೊಗ
- ಕತ್ತಿ
- ಹಾರೆ
- ರೈತ
- ಉಳುಮೆ
- ಕಟ್ಟ

✍ **ಸಂಗ್ರಹಿಸಿ ಬರೆಯಿರಿ**

ಇದೇ ಆಶಯದ ಇತರ ಪದ್ಯಗಳನ್ನು ಸಂಗ್ರಹಿಸಿ ಬರೆಯಲಿ. ಇದಕ್ಕಾಗಿ ತರಗತಿ ಗ್ರಂಥಾಲಯ ಮತ್ತು ಶಾಲಾ ಗ್ರಂಥಾಲಯವನ್ನು ಬಳಕೆ ಮಾಡಲು ಅಧ್ಯಾಪಕರು ಪ್ರೋತ್ಸಾಹಿಸುವುದು.

## ಹಳ್ಳಿಯ ಕಸುಬು

ಹಳ್ಳಿಯಲ್ಲಿ ಹಲವು ಕಸುಬು
ತೋಟ ಗದ್ದೆ ಉಳುಮೆಯೊಲವು
ಬೆಳೆಸಿಕೊಂಡು ಕೃಷಿಯ ಮಾಡುವ
ದೇಶದ ಬೆನ್ನೆಲುಬು ಈ ರೈತನು

ಮಣ್ಣ ಮೆಟ್ಟುತ ಹದವ ಮಾಡಿ
ಬಾಗಿಸಿ ಉರುಳಿಸಿ ರೂಪವ ನೀಡಿ
ಮಡಕೆ ನಿರ್ಮಿಸಿ ಜಗಕೆ ನೀಡುವ
ಕಾಯಕ ಯೋಗಿಯೆ ಕುಂಬಾರನು

ಬಣ್ಣ ಬಣ್ಣದ ಬಟ್ಟೆ ಹೊಲಿದು
ಹೆಚ್ಚು ಕಡಿಮೆಯಾಗದಂತೆ
ಅಂಗಿ ಲಂಗ ಹೊಲಿದು ಕೊಡುವನು
ನಮ್ಮ ಊರಿನ ದರ್ಜಿಯು

ಕಡಿದ ಮರದ ತುಂಡ ಕೊರೆದು
ಬಿಡದೆ ಜೋಡಿಸಿ ಕಾರ್ಯ ಗೈದು
ಬೆಂಚು ಮಂಚ ಕುರ್ಚಿ ನಿರ್ಮಿಸಿ
ನೀಡುವವನೇ ಬಡಗಿಯು

ಚೊಕ್ಕವಾಗಿ ಬೋಳಿಸುವ ತಲೆಯನು
ಚಿಕ್ಕದಾಗಿ ಕತ್ತರಿಸಿ ಕೂದಲನು
ನಿಷ್ಠೆಯಿಂದಲಿ ದುಡಿದು ಲೋಕದ
ಮನವ ಗೆಲ್ಲುವ ಈ ಕ್ಷೌರಿಕನು

ಬಗೆ ಬಗೆ ಕಸುಬಿಗೂ ಒಂದೇ ಗೌರವ
ತೋರುವ ಜಗದಲಿ ಎಂದೂ ನಾವು
ಕಾಯಕವೇ ಕೈಲಾಸವೆನ್ನುವ ಸತ್ಯ
ಉಳಿಸಿ ಬೆಳೆಸುವ ಬದುಕಲಿ ನಿತ್ಯ

- ಶ್ರೀಮತಿ ಪ್ರಸನ್ನಾ ವಿ.ಚೆಕ್ಕೆಮನೆ

## ನೇಗಿಲ ಯೋಗಿ

ನೇಗಿಲ ಹಿಡಿದ, ಹೊಲದೊಳು ಹಾಡುತ,
ಉಳುವ ಯೋಗಿಯ ನೋಡಲ್ಲಿ.
ಫಲವನು ಬಯಸದ ಸೇವೆಯೇ ಪೂಜೆಯು,
ಕರ್ಮವೇ ಇಹಪರ ಸಾಧನವು.
ಕಷ್ಟದೊಳನ್ನವ ದುಡಿವನೆ ತ್ಯಾಗಿ,
ಸೃಷ್ಟಿನಿಯಮದೊಳಗವನೇ ಭೋಗಿ.
ಉಳುವ ಯೋಗಿಯ....

ಲೋಕದೊಳೇನೆ ನಡೆಯುತಲಿರಲಿ
ತನ್ನೀ ಕಾರ್ಯವ ಬಿಡನೆಂದೂ
ರಾಜ್ಯಗಳುದಿಸಲಿ, ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ ಮುಕುಟಗಳು,
ಮುತ್ತಿಗೆ ಹಾಕಲಿ ಸೈನಿಕರೆಲ್ಲ,
ಬಿತ್ತುಳುವುದನವ ಬಿಡುವುದೇ ಇಲ್ಲ.
ಉಳುವ ಯೋಗಿಯ....

ಯಾರೂ ಅರಿಯದ ನೇಗಿಲ ಯೋಗಿಯೇ
ಲೋಕಕೆ ಅನ್ನವನೀಯುವನು.
ಹೆಸರನು ಬಯಸದೆ ಅತಿಸುಖಕೆಳಸದೆ,
ದುಡಿವನು ಗೌರವಕಾಶಿಸದೆ.
ನೇಗಿಲ ಕುಲದೊಳಗಡಗಿದೆ ಕರ್ಮ,
ನೇಗಿಲ ಮೇಲೆಯೇ ನಿಂತಿದೆ ಧರ್ಮ.
ಉಳುವ ಯೋಗಿಯ....

- ಕುವೆಂಪು

# 2. ಕಾಯಕ ನಿಷ್ಠೆ

**ಪ್ರವೇಶ ಚಟುವಟಿಕೆ**

ಭಾಷೆ ಮತ್ತು ಸಂಸ್ಕೃತಿಯ ಮೇಲೆ ಕೃಷಿಯ ಪ್ರಭಾವ ಅನನ್ಯವಾದುದು. ನಮ್ಮ ಭಾಷೆ ಮತ್ತು ಸಂಸ್ಕೃತಿಯು ಕೃಷಿಯಿಂದ ಯಾವ ರೀತಿಯಲ್ಲಿ ಪ್ರಭಾವಿತವಾಗಿದೆ ಎಂಬುದನ್ನು ಕೃಷಿ ಸಾಹಿತ್ಯಗಳನ್ನು ಮಕ್ಕಳು ಓದಿ ಆಸ್ವಾದಿಸುವಂತೆ ಮಾಡುವುದು. ಅಧ್ಯಾಪಕರು ಕೆಲವು ಸರಳ ಪ್ರಶ್ನೆಗಳನ್ನು ಕೇಳುವ ಮೂಲಕ ಪಾಠ ಪ್ರವೇಶವನ್ನು ಮಾಡುವುದು. *ನಿಮ್ಮ ಊರಿನಲ್ಲಿ ಬೆಳೆಯುವ ಪ್ರಧಾನ ಕೃಷಿ ಬೆಳೆಗಳು ಯಾವುವು? *ಅದರಲ್ಲಿ ಆಹಾರದ ಬೆಳೆಗಳು ಯಾವುವು? *ವಾಣಿಜ್ಯ ಬೆಳೆಗಳು ಯಾವುವು ?
*ಪ್ರಧಾನ ಆಹಾರ ಬೆಳೆ ಯಾವುದು ?
* ನಿಮ್ಮ ಊರಿನಲ್ಲಿ ಈಗ ಭತ್ತವನ್ನು ಬೆಳೆಯುವ ಪ್ರದೇಶಗಳು ಇವೆಯೇ?
ಈ ರೀತಿಯ ಸರಳ ಪ್ರಶ್ನೆಗಳಿಗೆ ಬಾಯ್ದೆರೆಯಾಗಿ ಉತ್ತರಿಸಲಿ. ಭತ್ತದ ಕೃಷಿಯನ್ನು ಸಾಂಪ್ರದಾಯಿಕವಾಗಿ ಮಾಡುವ ಕಡೆಗಳಲ್ಲಿ ಎತ್ತು ಅಥವಾ ಕೋಣಗಳನ್ನು ಉಪಯೋಗಿಸಿ ಗದ್ದೆಯನ್ನು ಉಳುವ ಮೂಲಕ ಕೃಷಿಯನ್ನು ಮಾಡುತ್ತಾರೆ. ಪಾಠವನ್ನು ಒಂದೆರಡು ಸಲ ಅಧ್ಯಾಪಕರು ಗಟ್ಟಿಯಾಗಿ ಸ್ವರಭಾರದೊಂದಿಗೆ ಓದಬೇಕು , ನಂತರ ಮಕ್ಕಳಲ್ಲಿ ಮೌನವಾಗಿಯೂ ಗಟ್ಟಿಯಾಗಿಯೂ ಓದಲು ಹೇಳುವುದು, ತಪ್ಪುಗಳನ್ನು ತಿದ್ದಿ ಸರಿಪಡಿಸಲು ಗಟ್ಟಿ ಓದು ಸಹಾಯಕವಾಗಬಹುದು. ಕಥೆಯ ಇಷ್ಟವಾದ ಭಾಗವನ್ನು ಬರೆಯಲು ಹೇಳುವುದು ಮತ್ತು ಯಾಕೆ ಇಷ್ಟವಾಯಿತು ಎಂದು ಬಾಯ್ದೆರೆಯಾಗಿ ಮಕ್ಕಳು ಹೇಳಲಿ ಕಥೆಯಲ್ಲಿ ಬರುವ ವಿವಿಧ ಪಾತ್ರ ವರ್ಗಗಳ ಬಗ್ಗೆ ತಿಳಿಸುತ್ತಾ ಭೋಜರಾಜನ ಮತ್ತು ರೈತನ ಕಾಯಕ ನಿಷ್ಠೆಯನ್ನು ತಿಳಿಸುವುದು. ಕಠಿಣ ಪದಗಳ ಅರ್ಥ, ವಿರೋಧಾರ್ಥ ಪದಗಳು ಮತ್ತು ವ್ಯಾಕರಣಕ್ಕೆ ಸಂಬಂಧಪಟ್ಟ ಚಟುವಟಿಕೆಗಳನ್ನು ಮಾಡುವುದು.

**ಚಟುವಟಿಕೆಗಳು**

**ಓದುವಿಕೆ**

ಮೊದಲಿಗೆ ಮಕ್ಕಳು ವೈಯಕ್ತಿಕವಾಗಿ ಮೌನವಾಗಿ ಓದುವರು. ಪಾಠದಲ್ಲಿ ಬಂದಿರುವ ಕಠಿಣ ಪದಗಳ ಅರ್ಥವನ್ನು ಪದಕೋಶದ ಸಹಾಯದಿಂದ ಕಂಡುಹಿಡಿಯಲು ಅಧ್ಯಾಪಕರು ಸಹಕರಿಸುವುದು. ಹಾಗೆಯೇ ಸಮಾನಾರ್ಥಕ ಪದಗಳು, ವಿರೋಧಾರ್ಥಪದಗಳನ್ನು ಗುರುತಿಸುವುದು. ಪಾಠವನ್ನು ಗಟ್ಟಿಯಾಗಿ ಓದಲು ಹೇಳುವುದು. ಈ ಮೂಲಕ ತಪ್ಪುಗಳನ್ನು ತಿದ್ದಲು ಸಹಕರಿಸುವುದು. ಪಾಠದ ಪ್ರಧಾನ ಆಶಯವಾದ ಗದ್ದೆ ಬೇಸಾಯದ ವಿವಿಧ ಹಂತಗಳ ಕುರಿತು ಮಾಹಿತಿಯನ್ನು ನೀಡುವ ವೀಡಿಯೋವನ್ನು ಪ್ರದರ್ಶನವನ್ನು ಮಾಡುವುದು

✍ **ಉತ್ತರಿಸಿರಿ**

ಪಾಠದ ಆಶಯವನ್ನು ಮಕ್ಕಳು ಎಷ್ಟರ ಮಟ್ಟಿಗೆ ತಿಳಿದಿದ್ದಾರೆ ಎಂದು ತಿಳಿಯುವುದೇ ಈ ಚಟುವಟಿಕೆಯ ಉದ್ದೇಶ. ಆಶಯ ಗ್ರಹಣಕ್ಕಾಗಿ ನೀಡಿದ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರ ಬರೆಯಲಿ.

✍ **ಕ್ರಮೀಕರಿಸಿ ಬರೆಯಿರಿ**

ಪಠ್ಯದಲ್ಲಿ ಕೊಟ್ಟಿರುವ ವಾಕ್ಯಗಳನ್ನು ಓದಿ ಆಶಯವನ್ನು ತಿಳಿದುಕೊಳ್ಳಲಿ. ಅದರಲ್ಲಿ ಕ್ರಮಾನುಗತವಾಗಿ ಬರೆಯಲಿ.

1. ಅವನು ಪರಾಕ್ರಮಿಯಾಗಿದ್ದು; ತನ್ನ ರಾಜ್ಯದ ಎಲ್ಲೆಗಳನ್ನು ವಿಸ್ತರಿಸಿದ್ದನು.
2. ಒಬ್ಬ ರೈತ ನೊಗಕ್ಕೆ ಎರಡು ಎತ್ತುಗಳನ್ನು ಕಟ್ಟುವ ಬದಲು ಒಂದೇ ಎತ್ತನ್ನು ಕಟ್ಟಿ, ಹೊಲ ಉಳುತ್ತಿದ್ದನು.
3. ನಮ್ಮಲ್ಲಿ ಎರಡು ಎತ್ತುಗಳಿದ್ದವು, ಒಂದು ಇತ್ತೀಚೆಗೆ ತೀರಿ ಹೋಯಿತು.
4. ನೀವು ನಿಜಕ್ಕೂ ನನಗೆ ಸಹಾಯ ಮಾಡುವುದಿದ್ದರೆ, ಎತ್ತನ್ನು ಇಲ್ಲಿಗೆ ತನ್ನಿ.
5. ಅಯ್ಯಾ ನೀನು ನನ್ನ ಜೊತೆಗೆ ಬಾ, ನಿನಗೆ ಒಂದು ಎತ್ತು ಕೊಡುತ್ತೇನೆ.
6. ಅವನು ರಾಜನ ಕಾಲಿಗೆರಗಿ ಕ್ಷಮೆ ಕೇಳಿದನು.

✍ **ಸಂಭಾಷಣೆ ಬರೆಯಿರಿ**

ಅರಮನೆಯಲ್ಲಿ ಕಾರಭಾರಿ ಮತ್ತು ರಾಣಿಯ ನಡುವೆ ನಡೆದ ಸಂಭಾಷಣೆಯನ್ನು ಮಕ್ಕಳು ಸ್ವತಃ ಊಹಿಸಿ ಬರೆಯಲಿ.

**ಹಂತಗಳು:**

- ಮಕ್ಕಳು ಸಂಭಾಷಣೆ ರಚಿಸುವುದಕ್ಕೆ ಮೊದಲು ಅದಕ್ಕೆ ಪೂರಕವಾದ ಪ್ರಶ್ನೆಗಳನ್ನು ಕೇಳುವುದರ ಮೂಲಕ ಅವರನ್ನು ಸಿದ್ಧಪಡಿಸುವುದು.
- ಸಂಭಾಷಣೆ ಬರೆಯುವಾಗ ರಾಣಿ ಮತ್ತು ಕಾರಭಾರಿಯಲ್ಲಿ ಏನು ಹೇಳಿರಬಹುದು/ ಏನು ಕೇಳಿರಬಹುದು? ಎಂದು ಯೋಚಿಸಿದ ಬಳಿಕ ಮಕ್ಕಳು ಸಂಭಾಷಣೆಯನ್ನು ವೈಯಕ್ತಿಕವಾಗಿ ಊಹಿಸಿ ಬರೆಯಲಿ. ಕೆಲವರು ಮಂಡಿಸಲಿ.
- ಗುಂಪಿನಲ್ಲಿ ಚರ್ಚಿಸಿ ಉತ್ತಮ ಪಡಿಸಲಿ.

<u>**ಸಂಭಾಷಣೆಯನ್ನು ಬರೆಯುವಾಗ ಗಮನಿಸ ಬೇಕಾದ ಅಂಶಗಳು**</u>

- ☛ ಪಾಠದ ಆಶಯಕ್ಕೆ ಸಂಬಂಧಪಟ್ಟದ್ದು ಆಗಿರಬೇಕು.
- ☛ ಪಾತ್ರಗಳ ನಡುವೆ ನಡೆಯುವ ಮಾತುಕತೆ ಪರಸ್ಪರ ಸಂಬಂಧವಿರುವುದಾಗಿರಬೇಕು.
- ☛ ಸಂಭಾಷಣೆಯನ್ನು ಉತ್ತಮ ಪಡಿಸುವುದಕ್ಕಾಗಿ ಅಗತ್ಯವಾದ ಸಲಹೆ ಸೂಚನೆಗಳನ್ನು ಅಧ್ಯಾಪಕರು ನೀಡುವುದು.
- ☛ ಮಕ್ಕಳು ರಚಿಸಿದ ಸಂಭಾಷಣೆಯನ್ನು ಅಧ್ಯಾಪಕರು ಮೌಲ್ಯಮಾಪನ ಮಾಡುವುದು.

**ಸಂಭಾಷಣೆ ಹೀಗೂ ಇರಬಹುದಲ್ಲವೇ**

ಕಾರಭಾರಿ : ಮಹಾರಾಣಿಗೆ ವಂದನೆಗಳು

ರಾಣಿ : ಅಯ್ಯಾ, ಇವಳು ಯಾರು?

ಕಾರಭಾರಿ : ಹೊಲದಲ್ಲಿ ಕಷ್ಟಪಟ್ಟು ದುಡಿಯುತ್ತಿದ್ದ ರೈತನ ಹೆಂಡತಿ,

ರಾಣಿ : ಇವಳನ್ನು ಇಲ್ಲಿಗೆ ಕರೆದುಕೊಂಡು ಬಂದ ಉದ್ದೇಶವೇನು?

ಕಾರಭಾರಿ : ಇವಳ ಗಂಡ ಎರಡು ಎತ್ತುಗಳನ್ನು ಸಾಕಿ ಹೊಲವನ್ನು ಉತ್ತು ಬೇಸಾಯ ಮಾಡುತ್ತಿದ್ದನು. ಆದರೆ ಒಂದು ಎತ್ತು ಇತ್ತೀಚೆಗೆ ತೀರಿಕೊಂಡ ಕಾರಣ ಬೇರೆ ಎತ್ತನ್ನು ಕೊಳ್ಳಲು ಸಾಧ್ಯವಾಗದೇ ಎತ್ತಿನ ಬದಲು ಇವಳನ್ನು ನೊಗಕ್ಕೆ ಕಟ್ಟಿ ಹೊಲವನ್ನು ಉಳುತ್ತಿದ್ದನು.

ರಾಣಿ : ಹೌದೇ!ಛೇ, ಹೀಗಾಗಬಾರದಿತ್ತು. ನಮ್ಮ ಅರಮನೆಯ ಎತ್ತುಗಳು ಒಳ್ಳೆಯ ಆಹಾರ ತಿಂದು ಬಲಿಷ್ಠವಾಗಿ ಬೆಳೆದಿವೆ. ನೀನು ಒಂದು ಎತ್ತನ್ನು ಕೊಂಡು ಹೋಗುವ ಬದಲು, ಎರಡೂ ಎತ್ತುಗಳನ್ನು ಕೊಂಡೋಗಿ ಬೇಸಾಯ ಮಾಡು.

ಕಾರಭಾರಿ : ರಾಣಿಯವರಿಗೆ ಜಯವಾಗಲಿ.

✍ **ಪಾತ್ರ ಚಿತ್ರಣ ಬರೆಯಿರಿ**

ಪಾಠ ಪುಸ್ತಕದಲ್ಲಿ ನೀಡಿದ ಸ್ವಾಭಿಮಾನಿ ರೈತನ ಕಥೆಯನ್ನು ಓದಿ, ಅದರ ಸ್ವರೂಪವನ್ನು ತಿಳಿದುಕೊಂಡು ಈ ಕಥೆಯ ಪ್ರಧಾನ ಪಾತ್ರಗಳಲ್ಲಿ ಒಂದಾದ ಭೋಜರಾಜನ ಪಾತ್ರ ಚಿತ್ರಣವನ್ನು ಬರೆಯಲಿ.

ಪಾಠ ಭಾಗದಲ್ಲಿ ಬಂದಿರುವ ಭೋಜರಾಜನ ಪಾತ್ರದಲ್ಲಿ ಕಂಡುಕೊಂಡ ಸ್ವಭಾವ ವಿಶೇಷತೆಗಳನ್ನು ಮಕ್ಕಳು ಬಾಯ್ದೆರೆಯಾಗಿ ಹೇಳಲಿ. ತಾವು ಕಂಡುಕೊಂಡ ಮಾಹಿತಿಯ ಆಧಾರದಲ್ಲಿ ಪಾತ್ರಚಿತ್ರಣವನ್ನು ಬರೆದು ಮಂಡಿಸಲಿ.

- ☛ ರಾಜನ ಪರೋಪಕಾರದ ಗುಣ
- ☛ ಇತರರಿಗೆ ಕಷ್ಟಬಂದಾಗ ತನ್ನ ಕಷ್ಟವನ್ನು ಲೆಕ್ಕಿಸದೆ ತನ್ನಿಂದಾದ ಸಹಾಯವನ್ನು ಮಾಡುವ ಮನಸ್ಸು.
- ☛ ರೈತನು ಹೊಲವನ್ನು ಉಳುವಾಗ ಮಾರುವೇಷದಲ್ಲಿ ಬಂದ ಭೋಜರಾಜನು ತಾನೇ ನೊಗಕ್ಕೆ ಹೆಗಲು ಕೊಟ್ಟು ಉಳುಮೆಯನ್ನು ಮುಂದುವರಿಸಲು ಸಹಾಯ ಮಾಡುವುದು.
- ☛ ಅರಮನೆಯಲ್ಲಿ ಎತ್ತುಗಳನ್ನು ಕೊಟ್ಟು ಸಹಾಯ ಮಾಡಿದುದು.

**ಭೋಜರಾಜನ ಪಾತ್ರ ಚಿತ್ರಣ ಹೀಗೂ ಇರಬಹುದಲ್ಲವೇ**
ಕಾಯಕನಿಷ್ಠೆ ಎಂಬ ಕಥೆಯಲ್ಲಿ ಬಂದಿರುವ ನಾಲ್ಕು ಪ್ರಧಾನ ಪಾತ್ರಗಳು ರಾಜ, ರಾಣಿ, ರೈತ, ರೈತನ ಹೆಂಡತಿ. ಭೋಜರಾಜನು ಪ್ರಜೆಗಳ ಯೋಗಕ್ಷೇಮ, ಕಷ್ಟಕಾರ್ಪಣ್ಯಗಳನ್ನು ತಿಳಿಯುವುದಕ್ಕಾಗಿ ಮಾರುವೇಷದಲ್ಲಿ ತಿರುಗಾಡುತ್ತಾ ಒಂದು ಹಳ್ಳಿಗೆ ಹೋದನು.ಆಗ ಒಬ್ಬ ರೈತನು ನೊಗಕ್ಕೆ ಎರಡು ಎತ್ತುಗಳನ್ನು ಕಟ್ಟುವ ಬದಲು ಒಂದೇ ಎತ್ತನ್ನು ಕಟ್ಟಿ ಹೊಲವನ್ನು ಉಳುತ್ತಿದ್ದನು. ಇನ್ನೊಂದು ಎತ್ತು ಇರಬೇಕಾದಲ್ಲಿ ರೈತನ ಪತ್ನಿಯನ್ನು ಕಟ್ಟಿ ಎಳೆಯುತ್ತಿದ್ದ ದೃಶ್ಯವನ್ನು ನೋಡಿ ಭೋಜರಾಜನಿಗೆ ಹೃದಯವೇ ಬಾಯಿಗೆ ಬಂದಂತಾಯಿತು. ಇದರ ಕಾರಣವನ್ನು ತಿಳಿದು ಮರುಕಪಟ್ಟನು.
ಈ ಕರುಣಾಜನಕ ದೃಶ್ಯವನ್ನು ಕಂಡ ರಾಜನು ರೈತನಿಗೆ ಎತ್ತುಗಳನ್ನು ಕೊಟ್ಟು ಹೊಲವನ್ನು ಉಳಲು ಸಹಾಯ ಮಾಡಿದನು. ಪತ್ನಿಯ ಜಾಗದಲ್ಲಿ ರಾಜನೇ ನೊಗಕ್ಕೆ ಹೆಗಲು ಕೊಟ್ಟನು. ರೈತನ ಪತ್ನಿಯು ಅರಮನೆಗೆ ಕಳುಹಿಸಿ ಎರಡು ಎತ್ತುಗಳನ್ನು ತರುವ ವ್ಯವಸ್ಥೆಯನ್ನು ಮಾಡಿ, ರೈತನ ಬೇಸಾಯವನ್ನು ಮುಂದುವರಿಸಲು ಸಹಾಯ ಮಾಡಿದನು. ನೊಗಕ್ಕೆ ಹೆಗಲನ್ನು ಕೊಟ್ಟು ಗದ್ದೆ ಉಳಲು ಸಹಾಯ ಮಾಡಿದ ಮಹಾತ್ಮನು ರಾಜನೇ ಎಂದು ತಿಳಿದಾಗ ಪಶ್ಚಾತಾಪ ಪಟ್ಟು ರೈತನು ರಾಜನ ಕಾಲಿಗೆರಗಿ ನಮಸ್ಕರಿಸಿದನು. ನನ್ನಿಂದ ಮಹಾಪರಾಧವಾಯಿತು. ಇದಕ್ಕೆ ಯಾವ ಶಿಕ್ಷೆಯೂ ಕಡಿಮೆ ಎಂದು ಕಣ್ಣೀರು ಹಾಕಿದಾಗ ಅನ್ನದಾತ ನಾನಲ್ಲ ನೀನು ಎಂದು ಹೇಳಿ, ರೈತನ ಕಾಯಕ ನಿಷ್ಠೆಯನ್ನು ಕೊಂಡಾಡಿ ಏನೇ ಕಷ್ಟ ಬಂದರೂ ಯಾವ ಸಂಕೋಚವೂ ಇಲ್ಲದೆ ನನ್ನ ಬಳಿಗೆ ಬಾ ಎಂದು ರಾಜನು ರೈತನನ್ನು ಸಮಾಧಾನಿಸಿದನು.

✍ **ಕಥೆಯನ್ನು ಊಹಿಸಿ ಮುಂದುವರಿಸಿ ಬರೆಯಿರಿ**
ಕಥೆ ಮುಂದುವರಿಸಿ ಬರೆಯುವುದು ಕಥಾ ರಚನೆಯ ಒಂದು ತಂತ್ರವಾಗಿದೆ.ಭೋಜರಾಜ ಮತ್ತು ಕಾರಭಾರಿಯು ಹಳ್ಳಿಗೆ ಹೋದಾಗ ಅಲ್ಲಿ ರೈತನೊಬ್ಬನು ಹೊಲ ಉಳುವ ದೃಶ್ಯವನ್ನು ಕಾಣುತ್ತಾನೆ. ಒಂದು ಎತ್ತಿನ ಬದಲು ರೈತನು ತನ್ನ ಹೆಂಡತಿಯನ್ನೇ ನೊಗಕ್ಕೆ ಕಟ್ಟಿ ಉಳುವ ಕರುಣಾಜನಕ ದೃಶ್ಯವನ್ನು ಕಾಣುತ್ತಾನೆ.ಆಗ ರಾಜ ಮತ್ತು ರೈತನ ನಡುವೆ ಏನು ಮಾತುಕತೆ ನಡೆದಿರಬಹುದು ಎಂದೆಲ್ಲಾ ಊಹಿಸಲು ಅವಕಾಶ ಮಾಡಿಕೊಟ್ಟು ಮಕ್ಕಳು ಸ್ವತಂತ್ರವಾಗಿ ಕಥೆಯನ್ನು ಮುಂದುವರಿಸಿ ಬರೆಯಲು ಹೇಳುವುದು. ಬರೆದು ಸಿದ್ಧಪಡಿಸಿದ ಕಥೆಯನ್ನು ತರಗತಿಯಲ್ಲಿ ಮೌಲ್ಯಮಾಪನಕ್ಕೆ ಒಳಪಡಿಸುವುದು. ಅಗತ್ಯ ಸೂಚಕಗಳ ಸಹಾಯದಿಂದ ಯಾವ ಕಥೆ ಉತ್ತಮವಾಗಿದೆ, ಯಾಕೆ ಎಂದು ವಿದ್ಯಾರ್ಥಿಗಳೇ ಕಂಡುಕೊಳ್ಳಲಿ. ಅಧ್ಯಾಪಕರು ಅಗತ್ಯವಾದ ತಿದ್ದುಪಡಿಗಳೊಂದಿಗೆ ಮಕ್ಕಳ ಉತ್ಪನ್ನವನ್ನು ಉತ್ತಮಪಡಿಸುವುದು.

**ಕಥೆಯ ಗುಣಮಟ್ಟವನ್ನು ನಿರ್ಧರಿಸುವ ಮಾನದಂಡಗಳು**

- ಶೀರ್ಷಿಕೆ
- ಆರಂಭ, ಬೆಳವಣಿಗೆ, ಮುಕ್ತಾಯ
- ನಿರೂಪಣ ಶೈಲಿ
- ಪಾತ್ರಗಳ ಪೋಷಣೆ
- ಕಥಾ ವಸ್ತು
- ಕುತೂಹಲಕಾರಿ ಬೆಳವಣಿಗೆ, ಅನಿರೀಕ್ಷಿತ ತಿರುವು
- ಮನಮುಟ್ಟುವ ಸನ್ನಿವೇಶಗಳು

**ಕಥೆ ಹೀಗೂ ಮುಂದುವರಿಯಬಹುದಲ್ಲವೇ**
ಒಂದು ದಿನ ಭೋಜರಾಜನು ಮಾರುವೇಷದಲ್ಲಿ ತನ್ನ ಕಾರಭಾರಿಯೊಂದಿಗೆ ತಿರುಗಾಡುತ್ತಾ ಒಂದು ಹಳ್ಳಿಗೆ ಹೋಗಿದ್ದನು. ಒಬ್ಬ ರೈತ ಎರಡು ಎತ್ತುಗಳಲ್ಲಿ ಒಂದು ಎತ್ತಿನ ಬದಲು ತನ್ನ ಪತ್ನಿಯನ್ನು ಕಟ್ಟಿ ಉಳುವ ದೃಶ್ಯವನ್ನು ಕಂಡನು. ಮಹಿಳೆಯನ್ನು ಎತ್ತಿನಂತೆ ದುಡಿಸುವ ಆ ರೈತನ ವರ್ತನೆಯನ್ನು ಕಂಡು ರಾಜನು ಕೋಪದಿಂದ ಕಿಡಿಕಿಡಿಯಾದನು ಆ ರೈತನನ್ನು ಬಂಧಿಸಿ ತರಲು ಕಾರಭಾರಿಗೆ ಆಜ್ಞಾಪಿಸಿದನು. ಕಾರಭಾರಿಯು ರೈತನನ್ನು ಬಂಧಿಸಲು ಅವನ ಬಳಿಗೆ ಹೋದನು. ತನ್ನನ್ನು ಬಂಧಿಸಲು ಬಂದ ಕಾರಭಾರಿಯನ್ನು ಕಂಡಾಗ ರೈತನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಮನಸ್ಸಿಲ್ಲದ ಮನಸ್ಸಿನಿಂದ ರೈತನು ಕಾರಭಾರಿಯೊಂದಿಗೆ ಅರಮನೆಗೆ ತೆರಳಿದನು. ಭೋಜರಾಜನು ರೈತನ ಸಮಸ್ಯೆಯನ್ನು ತಿಳಿದಾಗ ಪಶ್ಚಾತಾಪ ಪಟ್ಟು ರೈತನಿಗೆ

ಸಹಾಯ ಮಾಡಲು ಮುಂದಾದನು. ಕೂಡಲೇ ತನ್ನ ಸೇವಕರನ್ನು ಕರೆದು ಎರಡು ಎತ್ತುಗಳನ್ನು ರೈತನೊಂದಿಗೆ ಕಳುಹಿಸಿ ಕೊಡಲು ಆಜ್ಞಾಪಿಸಿದನು. ಇದರಿಂದ ಸಂತೋಷಗೊಂಡ ರೈತನು ಮರಳಿ ಹಳ್ಳಿಗೆ ಹೋಗಿ ರಾಜನು ಕೊಟ್ಟ ಎತ್ತುಗಳ ಸಹಾಯದಿಂದ ಗದ್ದೆಯನ್ನು ಉತ್ತು ಬೀಜವನ್ನು ಬಿತ್ತಿದನು. ಕಾಲಕ್ಕೆ ಸರಿಯಾಗಿ ಮಳೆ ಬಂದು ಅವನ ಹೊಲದಲ್ಲಿ ಹುಲುಸಾಗಿ ಫಸಲು ಬೆಳೆಯಿತು. ಅವನು ಬೆಳೆಯನ್ನು ಕಟಾವು ಮಾಡಿದನು. ರೈತನು ತಾನು ಬೆಳೆದ ಬೆಳೆಯಲ್ಲಿ ಒಂದು ಪಾಲನ್ನು ಅರಮನೆಗೆ ಕೊಂಡೊಯ್ಯುತ್ತಾನೆ. “ಮಹಾರಾಜ! ನನ್ನ ಕಷ್ಟಕಾಲದಲ್ಲಿ ಸಹಾಯ ಮಾಡಿದಿರಿ. ಈ ವರ್ಷ ನನಗೆ ಒಳ್ಳೆಯ ಫಸಲು ಸಿಕ್ಕಿದೆ. ನಿಮ್ಮ ಪಾಲನ್ನು ನಿಮಗೆ ಒಪ್ಪಿಸಲು ಬಂದಿದ್ದೇನೆ. ” ಎಂದನು. ಇದನ್ನು ಕಂಡಾಗ ರಾಜ ಮತ್ತು ಆಸ್ಥಾನಿಕರು ಆಶ್ಚರ್ಯದಿಂದ ದಂಗಾದರು . ರಾಜನು ಇದನ್ನು ಕಂಡು “ಅಯ್ಯಾ, ಈ ಬೆಳೆಯು ನಿನ್ನ ಹೊಲದಲ್ಲಿ ಬೆಳೆದಿದೆ. ಇದು ನಿನಗೇ ಸೇರಬೇಕು. ಇದರಲ್ಲಿ ನನ್ನ ಪಾತ್ರವೇನೂ ಇಲ್ಲ. ಇವನ್ನು ನೀನೇ ಇಟ್ಟುಕೊ” ಎಂದನು. ಆಗ ರೈತನು , “ ನಾನು ಬಿತ್ತಿದ ಫಲವು ನನಗೆ ಸಿಕ್ಕಿದೆ. ನಿಮ್ಮ ಸಹಾಯದಿಂದಾಗಿ ನನಗೆ ಗದ್ದೆಯಲ್ಲಿ ಬೇಸಾಯ ಮಾಡಲು ಸಾಧ್ಯವಾಯಿತು. ದಯವಿಟ್ಟು ಇದನ್ನು ತೆಗೆದುಕೊಳ್ಳಿ, ನೀವೇ ಇದನ್ನು ಜನ ಹಿತಕ್ಕೆ ಬಳಸಬಹುದು” ಎಂದರು. ಆಗ ರಾಜನ ಬಾಯಿ ಕಟ್ಟಿತು. ರೈತನು ತಂದ ಧಾನ್ಯದ ಕಾಣಿಕೆಯನ್ನು ಗೌರವಪೂರ್ವಕವಾಗಿ ಸ್ವೀಕರಿಸಿದನು. ರೈತನಿಗೆ ಯಥೋಚಿತವಾಗಿ ಸತ್ಕರಿಸಿ ಕಳುಹಿಸಿದನು.

## ✍ ನುಡಿಗಟ್ಟುಗಳು

ಒಂದು ಭಾಷೆಯನ್ನಾಡುವ ಜನರು ತಮ್ಮ ನಿತ್ಯ ಜೀವನದಲ್ಲಿ ನುಡಿಗಟ್ಟುಗಳನ್ನು ಸಾಕಷ್ಟು ಬಳಸುವುದನ್ನು ಕಾಣುತ್ತೇವೆ ನುಡಿಗಟ್ಟುಗಳು ಒಂದು ಭಾಷೆಯನ್ನು ಆಡುವ ಜನರ ಅನುಭವ, ಅಗತ್ಯ, ಸಂದರ್ಭಕ್ಕೆಅನುಸಾರವಾಗಿ ರೂಪುಗೊಳ್ಳುತ್ತವೆ. ಆಕರ್ಷಕವಾಗಿ ಮತ್ತು ಸಶಕ್ತವಾಗಿದ್ದಲ್ಲಿ ಬಹುಕಾಲ ನೆಲೆ ನಿಲ್ಲುತ್ತವೆ.

ಅಧ್ಯಾಪಕರು ತರಗತಿಯಲ್ಲಿ ಮಕ್ಕಳಿಗೆ ನುಡಿಗಟ್ಟುಗಳ ಪ್ರಾಧಾನ್ಯತೆಯನ್ನು ತಿಳಿಸಬೇಕು. ನುಡಿಗಟ್ಟುಗಳು ಗಾದೆ ಮಾತುಗಳಂತೆಯೇ ನಮ್ಮ ಭಾಷೆಯನ್ನು ಶ್ರೀಮಂತ ಗೊಳಿಸಲು ಸಹಾಯ ಮಾಡುತ್ತವೆ ಎಂಬುದನ್ನು ತಿಳಿಸಬೇಕು. ಉದಾಹರಣೆಗೆ

- ಹುಳಿ ಹಿಂಡು - ವಿರಸವನ್ನುಂಟು ಮಾಡು
- ಹೊಟ್ಟೆ ಹೊರೆ - ಜೀವನ ಸಾಗಿಸು
- ತಲೆ ಮೇಲೆ ಕೈ ಇಡು - ವಂಚಿಸು
- ಕತ್ತಿಮಸೆಯು - ಪರಸ್ಪರ ಹಗೆತನ ಬೆಳೆಸುವುದು.

ಇತ್ಯಾದಿ.

## ✍ ಸರ್ವನಾಮಗಳು

ನಾಮ ಪದಕ್ಕೆ ಬದಲಾಗಿ ಬರುವ ಪದಗಳನ್ನು ‘ಸರ್ವನಾಮಗಳು’ ಎನ್ನುವರು. ಉದಾಹರಣೆಗೆ ಬೆಂಗಳೂರು ಉದ್ಯಾನವನಗಳ ನಗರ ಎಂದು ಪ್ರಸಿದ್ಧಿಯಾಗಿದೆ. ಬೆಂಗಳೂರು ಕರ್ನಾಟಕದ ರಾಜಧಾನಿ ಮೇಲಿನ ವಾಕ್ಯಗಳಲ್ಲಿ ‘ಬೆಂಗಳೂರು’ ಎಂಬ ನಾಮಪದವು ಪದೇ ಪದೇ ಬಂದಿದೆ. ಎಲ್ಲಾ ವಾಕ್ಯಗಳಲ್ಲಿ ಹೀಗೆ ಬರೆಯುವಾಗ ಓದಲು ಕೇಳಲು ಅಷ್ಟು ಸರಿಯಾಗುವುದಿಲ್ಲ. ಮೊದಲಿನ ವಾಕ್ಯದಲ್ಲಿ ‘ಬೆಂಗಳೂರು ಕರ್ನಾಟಕದ ರಾಜಧಾನಿ’ ಎಂದು ಬರೆದು ನಂತರದ ವಾಕ್ಯದಲ್ಲಿ ‘ಬೆಂಗಳೂರು’ ಎಂಬ ಪದಕ್ಕೆ ಬದಲಾಗಿ ಅದು ‘ಸುಂದರವಾದ ಪಟ್ಟಣ’, ‘ಅದು ಉದ್ಯಾನನಗರ’ ಎಂದು ಹೆಸರಾಗಿದೆ. ಹೀಗೆ ‘ಅದು, ಇದು, ಅವನು, ಅವಳು, ಅವು, ಅವರು, ಅವುಗಳು, ಇವು, ನಾನು, ನಾವು, ನೀನು, ತಾವು, ಅದು, ಇದು, ಯಾರು, ಯಾವುದು ಇವೆಲ್ಲವೂ ಸರ್ವನಾಮದ ಪದಗಳಾಗಿವೆ.ಅಧ್ಯಾಪಕರು ಪಾಠದ ಕೊನೆಯಲ್ಲಿ ‘ಕಾಯಕನಿಷ್ಠೆ’ ಪಾಠದಲ್ಲಿ ಬಂದ ಸರ್ವನಾಮ ಪದಗಳನ್ನು ಪಟ್ಟಿ ಮಾಡಲು ಮಕ್ಕಳಿಗೆ ತಿಳಿಸುವುದು.
ಮಕ್ಕಳು ಕಂಡುಕೊಂಡ ಸರ್ವನಾಮ ಪದಗಳನ್ನು ಕರಿಹಲಗೆಯಲ್ಲಿ ಬರೆಯುವುದು.

**ಪೂರಕ ಓದಿಗೆ**

## ದುಡಿಮೆಯ ಮಹತ್ವ

ಒಂದು ಊರಿನಲ್ಲಿ ಗೋವಿಂದನೆಂಬ ರೈತನಿದ್ದ. ಆತನ ಹೆಂಡತಿ ಸುಬ್ಬಿ. ಇವರಿಬ್ಬರಿಗೂ ಮೂವರು ಮಕ್ಕಳಿದ್ದರು. ಆದರೆ ಇಬ್ಬರು ಮಕ್ಕಳು ಕಾಯಿಲೆ ಬಂದು ತೀರಿಕೊಂಡಿದ್ದರು. ಮೂರನೆಯವ ವೀರೇಶ. ತಮ್ಮ ಕರುಳ ಕುಡಿಯಾಗಿ ಉಳಿದುಕೊಂಡ ಒಬ್ಬನೇ ಮಗನನ್ನು ಗೋವಿಂದ ಮತ್ತು ಸುಬ್ಬಿ ತುಂಬಾ ಮುದ್ದಿನಿಂದ ಸಾಕಿದ್ದರು.ವೀರೇಶನೋ ತುಂಬಾ ಉಡಾಳ ಬುದ್ದಿಯವನಾಗಿದ್ದ. ಸಿಕ್ಕಿದ್ದೆಲ್ಲ ಬೇಕು. ಹಠದ ಸ್ವಭಾವ. ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಎನ್ನುವ ಆಲೋಚನೆಯನ್ನೂ ಮಾಡದೆ ದುಡುಕಿ ಏನಾದರೊಂದು ಅವಗಡ ಮಾಡಿಬಿಡುತ್ತಿದ್ದ. ಗೋವಿಂದ ವೀರೇಶನನ್ನು ಶಾಲೆಗೆ ಸೇರಿಸಿದ್ದರೂ ಅಲ್ಲಿಂದಲೂ ಏನಾದರೂ ದೂರು ಬಂದೆ ಬರುತ್ತಿತ್ತು. ಬೈದು ಬುದ್ದಿ ಹೇಳಿದರೆ ಮಗ ಕೋಪ ಮಾಡಿಕೊಳ್ಳುತ್ತಾನ, ಬೇಸರ ವ್ಯಕ್ತಪಡಿಸುತ್ತಾನೆ. ಇದ್ದೊಬ್ಬ ಮಗ ನಾಳೆ ಏನಾದರೂ ಜೀವಕ್ಕೆ ಅಪಾಯ ತಂದುಕೊಂಡರೆ ಎಂಬ ಭಯ. ಗೋವಿಂದ ಮತ್ತು ಸುಬ್ಬಿಗೆ ಏನು ಮಾಡಬೇಕೆಂಬುದೇ ತೋಚುತ್ತಿರಲಿಲ್ಲ. ಒಮ್ಮೆ ಏನಾಯಿತೆಂದರೆ ಗೋವಿಂದ ತನ್ನ ತೋಟದಲ್ಲಿ ಒಂದಿಷ್ಟು ಬಾಳೆ ಸಸಿಗಳನ್ನು ನೆಟ್ಟು ಬಂದಿದ್ದ. ಅವುಗಳನೆಲ್ಲಾ ಚೆನಾಗಿ ನೀರು ಗೊಬ್ಬರ ಹಾಕಿ ಆರೈಕೆ ಮಾಡಿದ್ದ ಕೂಡ. ಕಷ್ಟ ಪಟ್ಟು ಬೆವರು ಸುರಿಸಿ ನೆಟ್ಟಿದ್ದು ಫಲ ಬಂದ ಮೇಲೆ ಅದನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಮನೆ ಖರ್ಚನ್ನು ನಿಭಾಯಿಸುವುದಕ್ಕೆ ಅನುಕೂಲವಾಗುತ್ತದೆ ಎಂಬುದು ಅವನ ಆಲೋಚನೆ. ಕೆಲವೇ ದಿವಸಗಳಲ್ಲಿ ಸಸಿಗಳೆಲ್ಲ ಸೊಂಪಾಗಿ ಬೆಳೆದು ಸುಂದರ ಗೊಂಬೆಗಳಂತೆ ಕಾಣುತ್ತಿದ್ದವು. ಗೋವಿಂದನಿಗೆ ಖುಷಿಯಾಗಿತ್ತು.

ಒಂದು ದಿನ ತೋಟದಿಂದ ಬಂದ ಗೋವಿಂದ ಕೈಯಲ್ಲಿದ್ದ ಕತ್ತಿಯನ್ನು ಮನೆಯ ಜಗುಲಿಯ ಒಂದು ಮೂಲೆಯಲ್ಲಿ ಇಟ್ಟಿದ್ದ. ಇದನ್ನು ನೋಡಿದ ವೀರೇಶ ಆ ಕತ್ತಿಯನ್ನು ತೆಗೆದುಕೊಂಡು ಸಿಕ್ಕಿದ್ದೆಲ್ಲ ಕಡಿಯುತ್ತ ತೋಟದ ಕಡೆ ಬಂದ. ಅವನಿಗೆ ಕಡಿದಾಗ ಬರುವ ಕಚಕ್ ಕಚಕ್ ಸದ್ದು ಒಂದು ರೀತಿಯ ಮಜಾ ಕೊಟ್ಟಿತು. ಉತ್ಸಾಹದಿಂದ ಅಲ್ಲಿದ್ದ ಗಿಡಗಳನ್ನೆಲ್ಲ ಕಡಿಯುತ್ತಾ ಹೋದ. ಹಸಿರಿನಿಂದ ಕಂಗೊಳಿಸುತ್ತಿದ್ದ ತೋಟ ಬಯಲಾಗಿಬಿಟ್ಟಿತು. ವೀರೇಶನೋ ತಾನೇನೋ ದೊಡ್ಡ ಸಾಧನೆ ಮಾಡಿ ಬಂದವನಂತೆ ತಂದೆಯ ಬಳಿ ಬಂದು ತಾನು ಗಿಡಗಳನ್ನು ಕಾಡಿದ ವಿಚಾರವನ್ನು ಖುಷಿಯಿಂದ ಹೇಳಿಕೊಂಡ.ಗೋವಿಂದನಿಗೆ ಅನುಮಾನ ಬಂತು. ಆತ ತೋಟಕ್ಕೆ ಹೋಗಿ ನೋಡಿದರೆ ಬಂಗಾರದಂತಹ ಬಾಳೆ ಸಸಿಗಳೆಲ್ಲ ನೆಲಸಮವಾಗಿದ್ದವು. ತಾನು ಅಷ್ಟೆಲ್ಲಾ ಕಷ್ಟಪಟ್ಟು ನೆಟ್ಟಿದ್ದನ್ನೆಲ್ಲ ಒಂದೇ ನಿಮಿಷದಲ್ಲಿ ಹಾಳು ಮಾಡಿದ ಮಗನ ಮೇಲೆ ತುಂಬಾ ಸಿಟ್ಟು ಬಂತು. ಆದರೆ ಗೋವಿಂದ ದುಡುಕಲಿಲ್ಲ. ತಾಳ್ಮೆ ವಹಿಸಿದ. ಹೇಗಾದರೂ ಮಾಡಿ ಮಗನಿಗೆ ಬುದ್ಧಿ ಕಲಿಸಬೇಕು ಇಲ್ಲದಿದ್ದಲ್ಲಿ ಅವನ ಭವಿಷ್ಯಕ್ಕೆ ತೊಂದರೆ ಎನಿಸಿತು. ಆತ ಮಗನನ್ನು ಕರೆದುಕೊಂಡು ಹೋಗಿ ಒಂದಿಷ್ಟು ಬಾಳೆ ಸಸಿಗಳನ್ನು ತಂದು ತೋಟಕ್ಕೆ ಹೋಗಿ ಮಗನ ಹತ್ತಿರವೇ ಗುಣಿ ಹೊಡಿಸಿ ಸಸಿಗಳನ್ನು ನೆಡಿಸಿದ. ವೀರೇಶನಿಗೆ ಈಗ ಅರ್ಥವಾಯಿತು. ಅವನಿಗೂ ಕೆಲಸ ಮಾಡಿ ಮಾಡಿ ಮೈಯಿಂದ ಬೆವರು ಸೋರುತ್ತಿತ್ತು. ಆತ ಸೋತು ಸುಸ್ತುಬಡಿದ. ಅಯ್ಯೋ ನಾನೆಂಥ ಕೆಲಸ ಮಾಡಿದೆ ಎಂದು ಮರುಗಿದ. ಬಾಳೆ ಸಸಿಗಳನ್ನು ನೆಡಲು ಅಪ್ಪ ಎಷ್ಟು ಕಷ್ಟಪಟ್ಟಿದ್ದಾರೆ ಅದನ್ನು ನಾನು ಒಂದು ನಿಮಿಷದಲ್ಲಿ ಹಾಳುಗೆಡವಿಬಿಟ್ಟೆ ಎಂದು ಪಶ್ಚಾತ್ತಾಪಟ್ಟ. ಕೂಡಲೇ ಅಪ್ಪನ ಬಳಿ ಹೋಗಿ ಕ್ಷಮೆ ಕೇಳಿದ. ಆಗ ಗೋವಿಂದ ಹೇಳಿದ "ಮಗನೆ ನೀನು ಸಸಿಗಳನ್ನು ಕಾಡಿದ ಕೂಡಲೇ ನಿನಗೆ ಬೈದಿದ್ದರೆ ಒಮ್ಮೆ ಬೇಸರ ಮಾಡಿಕೊಂಡು ಸುಮ್ಮನಿದ್ದು ಬಿಡುತ್ತಿದ್ದೆ ಮತ್ತೆ ಇನ್ನೊಂದು ದಿನ ಇಂತಹ ಇನ್ನೊಂದು ತಪ್ಪು ಮಾಡುತ್ತಿದ್ದೆ. ನಿನಗೆ ದುಡಿಮೆಯ ಮಹತ್ವ ತಿಳಿಯುತ್ತಿರಲಿಲ್ಲ ನಿನ್ನ ತಪ್ಪು ನಿನಗೆ ಗೊತ್ತಾಗುತ್ತಿರಲಿಲ್ಲ. ಅಲ್ಲದೆ ನೀನು ಯಾವಾಗಲೂ ದೂಡಿಕಿ ನೀರ್ತಾರ ತೆಗೆದುಕೊಳ್ಳಬಾರದು. ನಿನ್ನಲ್ಲಿ ತಾಳ್ಮೆ ಬರಬೇಕು. ಇವೆಲ್ಲದರ ಅರಿವು ನಿನಗಾಗಲೆಂದು ನೀನು ಹಾಳು ಮಾಡಿದ್ದನ್ನು ನಿನ್ನ ಬಳಿಯೇ ಮಾಡಿಸಿದೆ" ಎಂದನು. ಅಪ್ಪನ ಮಾತಿನಿಂದ ವೀರೇಶನಿಗೆ ಸಂತೋಷವಾಯಿತು.

# ಜೇನು ಕೃಷಿ

**ಪಾಠ ಪ್ರವೇಶ:**

ಕೃಷಿಯು ವಸ್ತುವಾಗಿರುವ ಸಾಹಿತ್ಯ ರಚನೆಗಳನ್ನು, ಕಥೆಗಳನ್ನು, ಲೇಖನಗಳನ್ನು ಓದಿ ಆಸ್ವಾದಿಸುವ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸುವುದು ಅತಿ ಅಗತ್ಯವಾಗಿದೆ .ನಮ್ಮ ಊರಿನಲ್ಲಿ ವಿವಿಧ ರೀತಿಯ ಕೃಷಿ ಬೆಳೆಗಳನ್ನು ಬೆಳೆಯುವುದರೊಂದಿಗೆ ಅನೇಕ ಉಪಕಸುಬುಗಳನ್ನು ಮಾಡುತ್ತಾ ಜನರು ಜೀವನ ನಿರ್ವಹಣೆ ಮಾಡುತ್ತಾರೆ. ಉಪಕಸುಬುಗಳೆಂದರೆ ಒಂದು ಪ್ರಧಾನ ಕೃಷಿಯೊಂದಿಗೆ ಬಿಡುವಿನ ವೇಳೆಯಲ್ಲಿ ಇನ್ನಿತರ ಕೆಲಸ ಕಾರ್ಯಗಳನ್ನು ಮಾಡುವುದು. ಉದಾಹರಣೆಗೆ ಹೈನುಗಾರಿಕೆ, ಜೇನು ಕೃಷಿ,ಬುಟ್ಟಿ ಹಣೆಯುವುದು, ಕರಕುಶಲ ವಸ್ತುಗಳ ತಯಾರಿ ಇತ್ಯಾದಿ. ಕೆಲವೊಂದು ಸರಳ ಪ್ರಶ್ನೆಗಳನ್ನು ಕೇಳುವ ಮೂಲಕ ಪಾಠ ಪ್ರವೇಶವನ್ನು ಮಾಡುವುದು.  ಜೇನಿನ ವಿವಿಧ ಉಪಯೋಗಗಳು ಯಾವುವು? ಜೇನನು ಕೃಷಿಯ ಬಗ್ಗೆ ನಿಮಗೇನು ತಿಳಿದಿದೆ ? ಇತ್ಯಾದಿ ಸರಳ ಪ್ರಶ್ನೆಗಳನ್ನು ಕೇಳುವ ಮೂಲಕ ಜೇನು ಕೃಷಿಯ ಪ್ರಾಧಾನ್ಯವನ್ನು ಮಕ್ಕಳಿಗೆ ತಿಳಿಸುವುದು. ಪಾಠ ಭಾಗವನ್ನು ಅಧ್ಯಾಪಕರು ಗಟ್ಟಿಯಾಗಿ ಓದುವ ಮೂಲಕ ಪಾಠದ ಪ್ರಧಾನ ಆಶಯ ಮಕ್ಕಳಿಗೆ ತಿಳಿಯುವಂತೆ ಮಾಡುವುದು ಜೇನು ಕೃಷಿಯ ಬಗ್ಗೆ ಮಾಹಿತಿ ಇರುವ ವಿಡಿಯೋಗಳನ್ನು ತೋರಿಸುವುದು. ಅಥವಾ ಊರಿನಲ್ಲಿ ಯಾರಾದರೂ ಜೇನು

ಕೃಷಿಕರಿದ್ದರೆ ಅವರನ್ನು ತರಗತಿಗೆ ಕರೆಸಿ, ಸಂದರ್ಶನ ಮಾಡುವ ಮೂಲಕ ಜೇನು ಕೃಷಿಯ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಮಕ್ಕಳಿಗೆ ಸಿಗುವಂತೆ ಮಾಡುವುದು. ಜೇನು ಕೃಷಿಗೆ ಸಂಬಂಧಿಸಿದ ವಿಡಿಯೋಗಳನ್ನು ತೋರಿಸಬಹುದು.

**ಚಟುವಟಿಕೆಗಳು**

**ಓದುವಿಕೆ**

ಮೊದಲಿಗೆ ಮಕ್ಕಳು ವೈಯಕ್ತಿಕವಾಗಿ ಮೌನವಾಗಿ ಓದುವರು. ಪಾಠದಲ್ಲಿ ಬಂದಿರುವ ಕಠಿಣ ಪದಗಳ ಅರ್ಥವನ್ನು ಪದಕೋಶದ ಸಹಾಯದಿಂದ ಕಂಡುಹಿಡಿಯಲು ಅಧ್ಯಾಪಕರು ಸಹಕರಿಸುವುದು. ಹಾಗೆಯೇ ಸಮಾನಾರ್ಥಕ ಪದಗಳು, ವಿರೋಧಾರ್ಥಪದಗಳನ್ನು ಗುರುತಿಸುವುದು. ಪಾಠವನ್ನು ಗಟ್ಟಿಯಾಗಿ ಓದಲು ಹೇಳುವುದು. ಈ ಮೂಲಕ ತಪ್ಪುಗಳನ್ನು ತಿದ್ದಲು ಸಹಕರಿಸುವುದು. ಪಾಠದ ಪ್ರಧಾನ ಆಶಯವಾದ ಜೇನುಕೃಷಿಯ ಕುರಿತು ಮಾಹಿತಿಯನ್ನು ನೀಡುವ ವೀಡಿಯೋವನ್ನು ಪ್ರದರ್ಶನವನ್ನು ಮಾಡುವುದು.

✍ **ಉತ್ತರಿಸಿರಿ**

ಪಾಠದ ಆಶಯವನ್ನು ಮಕ್ಕಳು ಎಷ್ಟರ ಮಟ್ಟಿಗೆ ತಿಳಿದಿದ್ದಾರೆ ಎಂದು ತಿಳಿಯುವುದೇ ಈ ಚಟುವಟಿಕೆಯ ಉದ್ದೇಶ. ಆಶಯ ಗ್ರಹಣಕ್ಕಾಗಿ ನೀಡಿದ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರ ಬರೆಯಲಿ.

✍ **ಟಿಪ್ಪಣಿ ತಯಾರಿಸಿರಿ**

ತರಗತಿಯಲ್ಲಿ ಟೀಚರ್ ನಮ್ಮ ಊರಿನಲ್ಲಿರುವ ಮಕ್ಕಳಿಗೆ ಪರಿಚಿತವಾದ ವಿವಿಧ ಕೃಷಿಗಳ ಬಗ್ಗೆ ಚರ್ಚೆ ನಡೆಸುವರು. ಕೃಷಿ ಮಾಡುವ ವಿಧಾನ, ಕೃಷಿ ಉಪಕರಣಗಳು, ಫಸಲು ಪಡೆಯುವ ಸಮಯ, ಗೊಬ್ಬರ, ಹವಾಮಾನ ಇತ್ಯಾದಿ ವಿಷಯಗಳನ್ನು ಚರ್ಚೆಯ ಸಂದರ್ಭದಲ್ಲಿ ತಿಳಿಸುವುದು. ಬಳಿಕ ಮಕ್ಕಳು ತಮಗೆ ತಿಳಿದಿರುವ ಒಂದು ಕೃಷಿಯ ಬಗ್ಗೆ ವೈಯಕ್ತಿಕವಾಗಿ ಟಿಪ್ಪಣಿ ಬರೆಯಲಿ. ಟಿಪ್ಪಣಿಯನ್ನು ಮಕ್ಕಳು ಪರಸ್ಪರ ಮೌಲ್ಯಮಾಪನ ಮಾಡಿ ತಪ್ಪುಗಳನ್ನು ತಿದ್ದಲಿ. ಅಧ್ಯಾಪಕರು ಮೌಲ್ಯಮಾಪನದಲ್ಲಿ ಈ ಕೆಳಗಿನ ಸೂಚಕಗಳನ್ನು ಗಮನಿಸುವಿರಲ್ಲವೇ?

**<u>ಸೂಚಕಗಳು</u>**

1. ಸರಳವೂ ಸಂಕ್ಷಿಪ್ತವೂ ಆಗಿದೆ.
2. ಸ್ಪಷ್ಟವಾಗಿ ಬರೆಯಲಾಗಿದೆ.
3. ಎಲ್ಲಾ ಆಶಯಗಳನ್ನು ಒಳಗೊಳ್ಳಿಸಲಾಗಿದೆ.
4. ಸೂಕ್ತ ಕ್ರಮೀಕರಣದೊಂದಿಗೆ ವಾಕ್ಯಗಳನ್ನು ಬರೆಯಲಾಗಿದೆ.

**<u>ಅಡಿಕೆ ಕೃಷಿ</u>**

ಅಡಿಕೆಯು ಭಾರತದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು ಲಕ್ಷಾಂತರ ರೈತರ ಜೀವನಾಧಾರವಾಗಿದೆ. ಅಡಿಕೆಯನ್ನು ಭಾರತದಲ್ಲಿ ಮಾತ್ರವಲ್ಲದೆ ನೆರೆಯ ದೇಶಗಳಾದ ಶ್ರೀಲಂಕಾ, ಬಾಂಗ್ಲಾ, ಮಲೇಶಿಯಾ ಮೊದಲಾದ ರಾಷ್ಟ್ರಗಳಲ್ಲಿಯೂ ಬೆಳೆಯುತ್ತಾರೆ. ಸಮತಟ್ಟಾದ ಬಯಲ ಪ್ರದೇಶಗಳಲ್ಲಿ ಮತ್ತು ಗುಡ್ಡ ಪ್ರದೇಶಗಳಲ್ಲಿಯೂ ಅಡಿಕೆಯನ್ನು ಧಾರಾಳವಾಗಿ ಬೆಳೆಯುತ್ತಾರೆ. ಅಡಕೆಯಲ್ಲಿ ಊರ ತಳಿ ಮಾತ್ರವಲ್ಲದೆ ಮಂಗಳ, ಸುಮಂಗಳ, ಶ್ರೀಮಂಗಳ, ಮೋಹಿತ್ ನಗರ ಮೊದಲಾದ ವಿವಿಧ ತಳಿಗಳನ್ನು ಬೆಳೆಸುತ್ತಾರೆ. ಹೊಸದಾಗಿ ಸಸಿಗಳನ್ನು ಬೆಳೆಸಲು ಅಧಿಕ ಇಳುವರಿ ಕೊಡುವ ಮರಗಳ ಅಡಿಕೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಆಯ್ಕೆ ಮಾಡಿದ ಹಣ್ಣಾದ ಅಡಿಕೆಗಳನ್ನು ಸಂಗ್ರಹಿಸಿ ಸಮತಟ್ಟುಗೊಳಿಸಿದ ನೆಲದಲ್ಲಿ ಒಂದೂವರೆ ಸೆಂಟಿಮೀಟರ್ ನಷ್ಟು ಆಳದಲ್ಲಿ ತೊಟ್ಟಿನ ಭಾಗ ಮೇಲ್ಮುಖವಾಗಿರುವಂತೆ ಅದನ್ನು ಹೂತಿಡಬೇಕು. ಅದರ ಮೇಲೆ ಹುಲ್ಲನ್ನು ಹರಡಿ ಪ್ರತಿದಿನವೂ ನೀರುಣಿಸಬೇಕು .ಮೂರು ತಿಂಗಳ ನಂತರ ಮೊಳಕೆ ಬಂದ ಚಿಕ್ಕ ಸಸಿಗಳನ್ನು ತೆಗೆದು ಎರಡು ಅಡಿಗಳಷ್ಟು ಅಂತರದಲ್ಲಿ ಅದನ್ನು ಪುನಃ ಸಣ್ಣ ಗುಂಡಿ ಮಾಡಿ ನೆಡಬೇಕು ಇಲ್ಲವೇ ಪಾಲಿಥಿನ್ ಚೀಲಗಳಲ್ಲಿಟ್ಟು ಅವುಗಳನ್ನು ಒಂದು ವರ್ಷದ ತನಕ ಬೆಳೆಸಬೇಕು .ಒಂದು ವರ್ಷದ ನಂತರ ಚೆನ್ನಾಗಿ ಬೆಳೆದ, ಐದಕ್ಕಿಂತಲೂ ಹೆಚ್ಚು ಎಲೆಗಳು ಬಂದ ಗಿಡಗಳನ್ನು ಆಯ್ಕೆ ಮಾಡಿ ನೆಡಲು ಪ್ರಾರಂಭಿಸಬೇಕು. 10 ಅಡಿ ಅಂತರಗಳಲ್ಲಿ ಒಂದೂವರೆ ಅಡಿಯಷ್ಟು ಉದ್ದ ಅಗಲವಿರುವ ಹೊಂಡಗಳನ್ನು ಮಾಡಿ

ಅದರಲ್ಲಿ ಗಿಡಗಳನ್ನು ನೆಡಬೇಕು. ಸೆಪ್ಟೆಂಬರ್- ಒಕ್ಟೋಬರ್ ತಿಂಗಳು ಗಿಡ ನೆಡಲು ಸೂಕ್ತವಾದ ಕಾಲ. ಗಿಡಗಳನ್ನು ನೆಡುವ ಮೊದಲು ಹೊಂಡ ತೆಗೆದ ಭಾಗದಲ್ಲಿ ಅರ್ಧದಷ್ಟು ಹೊಂಡವನ್ನು ಮೇಲ್ಮಣ್ಣು ಗೊಬ್ಬರಗಳನ್ನು ಹಾಕಿ ಗಿಡಗಳನ್ನು ನೆಡಬೇಕು. ಗಿಡಗಳಿಗೆ ನೆರಳು ಕೊಡುವ ಉದ್ದೇಶದಿಂದ ಗಿಡಗಳ ಎಡೆಯಲ್ಲಿ ಬಾಳೆಗಳನ್ನು ನಡೆಯುವುದು ಸೂಕ್ತ.
ಗಿಡ ನೆಟ್ಟ ನಂತರ ಎರಡು ಮೂರು ವರ್ಷಗಳವರೆಗೆ ನೆರಳನ್ನು ಒದಗಿಸಬೇಕು. ಗೊಬ್ಬರಗಳನ್ನು ನೀಡುವಾಗ ತೇವಾಂಶವಿರುವಂತೆ ನೋಡಿಕೊಳ್ಳಬೇಕು. ಅಡಿಕೆ ಬೆಳೆಯು ನಿರಂತರವಾಗಿ ನೀರನ್ನು ಬಯಸುವ ಬೆಳೆಯಾಗಿದೆ. ನೀರು ಕಡಿಮೆಯಾದರೆ ಇಳುವರಿ ಕಡಿಮೆಯಾಗಿ ಗಿಡಗಳು ಸಾಯಬಹುದು .ಇತ್ತೀಚೆಗೆ ಅಡಿಕೆ ಗಿಡಗಳಿಗೆ ಸಾಂಪ್ರದಾಯಿಕವಾಗಿ ನೀರನ್ನು ಹಾಯಿಸುವ ಬದಲು ಸ್ಪ್ರಿಂಕ್ಲರ್ ' ಅಥವಾ ಹನಿ ನೀರಾವರಿ ಯ ಮೂಲಕ ನೀರನ್ನು ಹಾಕುತ್ತಾರೆ .ಅಡಿಕೆ ಗಿಡಗಳ ಮಧ್ಯದಲ್ಲಿ ಅಂತರ ಬೆಳೆಯಾಗಿ ಕೊಕ್ಕೋ, ಕರಿಮೆಣಸನ್ನು ಬೆಳೆಸುತ್ತಾರೆ ಕೇರಳ ಕರ್ನಾಟಕದ ಕರಾವಳಿ ಭಾಗಗಳಲ್ಲಿ ಅಡಿಕೆ ಬೆಳೆಯನ್ನು ಧಾರಾಳವಾಗಿ ಬೆಳೆಯುತ್ತಾರೆ . ಮರವಾಗಿ ಬೆಳೆದ ನಂತರ 30 ರಿಂದ 40 ವರ್ಷಗಳವರೆಗೆ ನಿರಂತರವಾಗಿ ಫಸಲು ಲಭಿಸುತ್ತ ಇರುತ್ತದೆ .ಅಡಿಕೆ ಹಣ್ಣಾಗುವ ಸಂದರ್ಭದಲ್ಲಿಸೆಪ್ಟಂಬರ್/ ತಿಂಗಳಿಂದ ಮಾರ್ಚ್ ತಿಂಗಳವರೆಗೆ ನಾಲ್ಕೈದು ಬಾರಿ ಹಣ್ಣಾದ ಅಡಿಕೆಗಳನ್ನು ಕೊಯ್ಯುವ ಕೊಯಿಲನ್ನು ಮಾಡುತ್ತಾರೆ .ಹೀಗೆ ಸಿಕ್ಕಿದ ಅಡಿಕೆಯನ್ನು ಒಣಗಿಸಿ ಸಂಗ್ರಹಿಸಿ ಇಡಬಹುದು

✍ **ಸಂದರ್ಶನ ಪ್ರಶ್ನಾವಳಿ**

ಮಕ್ಕಳಲ್ಲಿ ಯಾವುದಾದರೊಂದು ವಿಷಯದ ಕುರಿತು ಮಾಹಿತಿ ಸಂಗ್ರಹಿಸುವ ಸಾಮರ್ಥ್ಯವನ್ನು ಬೆಳೆಸಬೇಕು. ಇದಕ್ಕಾಗಿ ಸಂದರ್ಶನ ಪ್ರಶ್ನಾವಳಿಯನ್ನು ತಯಾರಿಸುವ ಕೌಶಲವು ಬೆಳೆಯಬೇಕು.

**ಸಂದರ್ಶನ ಪ್ರಶ್ನಾವಳಿ ತಯಾರಿಸುವ ವಿಧಾನ**

- ಸಂದರ್ಶನ ಪ್ರಶ್ನಾವಳಿಯ ಅಗತ್ಯವನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು.
- ವೈಯಕ್ತಿಕವಾಗಿ ಸಂದರ್ಶನ ಪ್ರಶ್ನಾವಳಿಯ ತಯಾರಿ.
- ಕೆಲವರಿಂದ ಮಂಡನೆ.
- ಪ್ರಶ್ನಾವಳಿಯ ಕುರಿತು ಚರ್ಚೆ ನಡೆಸುವುದು.

❒ ಜೇನುಕೃಷಿಯ ಸಮಗ್ರ ವಿವರಗಳನ್ನು ಸಂಗ್ರಹಿಸಲಿರುವ ಪ್ರಶ್ನೆಗಳಿವೆಯೇ?
❒ ಪ್ರಶ್ನೆಗಳು ಅನುಕ್ರಮವಾಗಿದೆಯೇ?
❒ ಜೇನು ಕೃಷಿಕನಿಗೆ ಸ್ವ ಅಭಿಪ್ರಾಯಗಳನ್ನು, ಸಂದೇಶಗಳನ್ನು ನೀಡುವ ಪ್ರಶ್ನೆಗಳಿವೆಯೇ?
❒ ಭಾಷಾ ಪ್ರಯೋಗವು ಉತ್ತಮವಾಗಿದ್ದು, ಪ್ರಶ್ನಾವಳಿ ಆಕರ್ಷಕವಾಗಿದೆಯೇ?

ಜೇನು ಕೃಷಿಕರಲ್ಲಿ ಕೇಳಬಹುದಾದ ಪ್ರಶ್ನೆಗಳ ಬಗ್ಗೆ ಕಿರು ಚರ್ಚೆ ನಡೆಸುವುದು. (ಸಂದರ್ಶನದಲ್ಲಿ ಕೇಳುವ ಪ್ರಶ್ನೆಗಳ ಸ್ವರೂಪ, ಮುಂದುವರಿಕೆ, ದಾಖಲೀಕರಣ, ಇತ್ಯಾದಿಗಳನ್ನು ಚರ್ಚೆಯಲ್ಲಿ ಒಳಗೊಳ್ಳಿಸಬಹುದು)
ಮಕ್ಕಳು ವೈಯಕ್ತಿಕವಾಗಿ ಪ್ರಶ್ನೆಗಳನ್ನು ತಯಾರಿಸುವರು. ಗುಂಪಿನಲ್ಲಿ ಉತ್ತಮ ಪಡಿಸುವರು. ಟೀಚರ್ ಮೌಲ್ಯಮಾಪನವನ್ನು ಮಾಡುವಿರಲ್ಲವೇ?

**ಜೇನು ಕೃಷಿಕರ ಸಂದರ್ಶನ ಪ್ರಶ್ನೆಗಳು ಹೀಗೂ ಇರಬಹುದಲ್ಲವೇ**

1. ನಿಮ್ಮ ಪೂರ್ಣ ಹೆಸರೇನು?
2. ಮೂಲತಃ ನಿಮ್ಮ ಊರು ಯಾವುದು?
3. ನಿಮ್ಮ ವಿದ್ಯಾಭ್ಯಾಸದ ಎಲ್ಲಿ? ಎಲ್ಲಿಯವರೆಗೆ?
4. ಯಾವಾಗಿನಿಂದ ಜೇನು ಕೃಷಿ ಆರಂಭಿಸಿದಿರಿ?
5. ಇದಕ್ಕೆ ಪ್ರೇರಣೆ ಯಾವುದು? ಯಾರು?
6. ಜೇನು ಕೃಷಿಯ ಬಗ್ಗೆ ತರಬೇತಿ ಪಡೆದಿರುವಿರಾ? ಯಾರಿಂದ?
7. ಜೇನು ಕೃಷಿಯಿಂದ ನಿಮಗೆ ಉಂಟಾದ ಪ್ರಯೋಜನಗಳು ಏನು?

8. ಇದರಲ್ಲಿ ನಿಮ್ಮ ಮರೆಯಲಾಗದ ಅನುಭವಗಳೇನು?
9. ಜೇನು ಕೃಷಿಯನ್ನು ಲಾಭದಾಯಕವಾಗಿ ಮಾಡಲಿರುವ ತಂತ್ರಗಳೇನು?
10. ನಿಮ್ಮಿಂದ ಜೇನು ಕೃಷಿ ಮಾಡುವ ಬಗ್ಗೆ ಪ್ರೇರಣೆ ಪಡೆದವರು ಇದ್ದಾರೆಯೇ?
11. ಹೊಸದಾಗಿ ಜೇನು ಕೃಷಿ ಮಾಡುವವರಿಗೆ ನಿಮ್ಮ ಸಲಹೆಗಳೇನು?

ಈ ರೀತಿಯ ಪ್ರಶ್ನೆಗಳನ್ನು ತಯಾರಿಸುವುದು.
ಇದರ ಮೌಲ್ಯ ಮಾಪನ ಸೂಚಕಗಳ ಬಗ್ಗೆ ಗಮನಿಸುವಿರಲ್ಲವೇ?

<u>**ಮೌಲ್ಯಮಾಪನ ಸೂಚಕಗಳು**</u>

1. ಸರಳ ಪ್ರಶ್ನೆ ಮತ್ತು ನೇರ ಪ್ರಶ್ನೆಗಳು
2. ಪ್ರಶ್ನೆಗಳ ಕ್ರಮೀಕರಣ
3. ಹೆಚ್ಚಿನ ಮಾಹಿತಿ ಸಂಗ್ರಹಿಸುವ ಪ್ರಶ್ನೆಗಳು
4. ಆಶಯ ಸ್ಪಷ್ಟತೆ

✍ **ಪ್ರಬಂಧ ರಚನೆ**

ಭಾಷಾ ಕಲಿಕೆಯಲ್ಲಿ ಪ್ರಬಂಧ ರಚನೆಗೆ ಪ್ರಧಾನ ಪಾತ್ರವಿದೆ. ಮಕ್ಕಳಿಗೆ ಸರಳ ಪ್ರಬಂಧವನ್ನು ಬರೆಯಲು ತರಬೇತಿ ನೀಡುವ ಅಗತ್ಯವಿದೆ. ಪ್ರಬಂಧ ರಚನೆಗೆ ಪೂರಕವಾದ ಮಾಹಿತಿಗಳನ್ನು ವಾಚನಾಲಯಗಳಿಂದ, ಪತ್ರಿಕೆ, ದೃಶ್ಯ-ಶ್ರಾವ್ಯ. ಮಾಧ್ಯಮಗಳಿಗೆ ಸಂಗ್ರಹಿಸಲು ಮಕ್ಕಳಿಗೆ ಅವಕಾಶ ಮಾಡಿ ಕೊಡಬೇಕು. ಮಾಹಿತಿಗಳನ್ನು ಸಂಗ್ರಹಿಸಿ ವ್ಯವಸ್ಥಿತವಾದ ಪ್ರಬಂಧ ರಚನೆ ಮಾಡುವ ಕೌಶಲವು ಮಕ್ಕಳಲ್ಲಿ ಬೆಳೆಯಬೇಕು.

**ಪ್ರಬಂಧದಲ್ಲಿ ಒಳಗೊಂಡಿರ ಬೇಕಾದ ಅಂಶಗಳು**

ಸೂಕ್ತ ಶೀರ್ಷಿಕೆ ಇರಬೇಕು.
ಪೀಠಿಕೆ, ವಿಷಯ ವಿಸ್ತಾರ, ಉಪಸಂಹಾರಗಳಿರಬೇಕು.
ವಿಷಯದ ಸಮರ್ಥನೆ ಇರಬೇಕು.
ಆಶಯ ಪೂರ್ಣವಾಗಿರಬೇಕು.
ಸೃಜನಶೀಲತೆ ಹೆಚ್ಚಿನ ಅವಕಾಶ ನೀಡಬೇಕು.
ಗಾದೆ, ನುಡಿಗಟ್ಟುಗಳನ್ನು ಸೂಕ್ತವಾಗಿ ಬಳಸಬಹುದು.

ಮಕ್ಕಳು ಪ್ರಬಂಧ ರಚಿಸುವ ಮೊದಲು ಚರ್ಚೆ ನಡೆಸುವುದು ಉತ್ತಮವಲ್ಲವೇ? ಪ್ರಬಂಧದ ರೀತಿ, ಅದರಲ್ಲಿ ಒಳಗೊಳ್ಳಬೇಕಾದ ವಿಷಯಗಳು ಮತ್ತು ಮುಕ್ತಾಯದ ಕುರಿತು ಈಗಾಗಲೇ ಚರ್ಚೆ ನಡೆಸಲಾಗಿದೆ.

**ಪ್ರಬಂಧದಲ್ಲಿ ಒಳಗೊಳ್ಳಬೇಕಾದ ವಿಚಾರಗಳು ಯಾವುವು?**

- ಪ್ರಬಂಧದ ವಿಷಯ ಯಾವುದು?
- ಹೈನುಗಾರಿಕೆ ಎಂದರೇನು?
- ಹೈನುಗಾರಿಕೆಯ ಪ್ರಯೋಜನಗಳು ಏನು?
- ಕೃಷಿ ಮತ್ತು ಹೈನುಗಾರಿಕೆ ಹೇಗೆ ಪರಸ್ಪರ ಸಂಬಂಧ ಹೊಂದಿದೆ?
- ಹೈನುಗಾರಿಕೆಯಲ್ಲಿ ಉಂಟಾದ ಬದಲಾವಣೆಗಳು?
- ಹಾಲಿನ ಸಂಗ್ರಹ ಮತ್ತು ವಿತರಣೆ

ಈ ಕುರಿತು ಮಾಹಿತಿ ಸಂಗ್ರಹಕ್ಕಾಗಿ ಗ್ರಂಥಾಲಯದ ಪುಸ್ತಕಗಳ ಸಹಾಯ ಪಡೆಯಬಹುದು. ಪುಸ್ತಕಗಳನ್ನು ಪಡೆಯಬಹುದು. ನಿಯತಕಾಲಿಕೆಗಳನ್ನು ಮಾಹಿತಿ ಸಂಗ್ರಹಕ್ಕೆ ಬಳಸಬಹುದು. ಇವುಗಳನ್ನು ಉಪಯೋಗಿಸಿ ಮಾಹಿತಿ ಸಂಗ್ರಹಿಸುವುದು.

**ಪ್ರಬಂಧ ಹೀಗೂ ಇರಬಹುದಲ್ಲವೇ**

**ಹೈನುಗಾರಿಕೆ**

ಹೈನುಗಾರಿಕೆ ಎಂದರೆ ಸಾಕು ಪ್ರಾಣಿಗಳಾದ ದನ, ಎಮ್ಮೆ ಕುರಿ, ಆಡು ಮುಂತಾದ ಪ್ರಾಣಿಗಳನ್ನು ಸಾಕುವುದಾಗಿದೆ . ಹಾಲನ್ನು ಮಾರಾಟ ಮಾಡಿ ಜೀವನ ನಿರ್ವಹಣೆ ಮಾಡುವ ಅದೆಷ್ಟೋ ಕುಟುಂಬಗಳು ಭಾರತದಲ್ಲಿವೆ. ಹಾಲು ಒಂದು ಉತ್ತಮವಾದ ಪ್ರೋಟೀನ್ ಗಳಿಂದ ಕೂಡಿದ ವಸ್ತುವಾಗಿದೆ. ಅನಾದಿಕಾಲದಿಂದಲೂ ಮನುಷ್ಯರು ತಮ್ಮ ಆಹಾರ ವಸ್ತುಗಳಲ್ಲಿ ಒಂದಾಗಿ ಇದನ್ನು ಬಳಸುತ್ತಾರೆ .ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಹಾಲು ಉತ್ತಮ ಆಹಾರವಾಗಿದೆ. ಹೈನುಗಾರಿಕೆ ಎಂಬುದು ಸಾವಿರಾರು ವರ್ಷಗಳಿಂದಲೂ ವ್ಯವಸಾಯದ ಒಂದು ಭಾಗವಾಗಿ ಬಂದಿದೆ. ಸಾಮಾನ್ಯ ವಾಗಿ ಹಸುಗಳನ್ನು ಹಟ್ಟಿಯಲ್ಲಿ ಕಟ್ಟಿ ಸಾಕುತ್ತಾರೆ .ಹಿಂದಿನ ಕಾಲದಲ್ಲಿ ಹೆಚ್ಚಾಗಿ ಊರ ತಳಿಗಳನ್ನು ಸಾಕುತ್ತಿದ್ದರು. ಆಗ ಬೆಳಗ್ಗೆ ಹಾಲನ್ನು ಕರೆದು ದನಗಳನ್ನು ಗುಡ್ಡಗಳಿಗೆ ಮೇಯಲು ಬಿಟ್ಟರೆ ಸಂಜೆ ಹೊತ್ತಿಗೆ ಹಾಲು ಕರೆಯಲು ಹಟ್ಟಿಯತ್ತ ಸೇರುತ್ತಿದ್ದವು. ಆದರೆ ಇತ್ತೀಚೆಗೆ ಜನಸಂಖ್ಯೆ ಹೆಚ್ಚಾದಂತೆ ಮನೆಗಳನ್ನು ಅಲ್ಲಲ್ಲಿ ನಿರ್ಮಿಸಿ ಗುಡ್ಡೆಗಳ, ಬಯಲುಗಳ ಪ್ರಮಾಣ ಕಡಿಮೆಯಾಗುತ್ತಾ ಇರುವುದರಿಂದ ನಮ್ಮ ಊರಿನಲ್ಲಿ ದನಗಳನ್ನು ಮೇಯಲು ಬಿಡುವ ಸಂಪ್ರದಾಯವಿಲ್ಲ. ಹೈನುಗಾರಿಕೆಯನ್ನು ಒಂದು ಉಪ ಕಸುಬಾಗಿ ಸ್ವೀಕರಿಸಿದ ಜನರು ಹೆಚ್ಚೆಚ್ಚು ಹಾಲು ನೀಡುವ ಹಸುಗಳನ್ನು ಸಾಕಲು ಪ್ರಾರಂಭಿಸಿದರು. ದೊಡ್ಡ ಗಾತ್ರದ ದನಗಳು ದಿನವೊಂದಕ್ಕೆ 10 ರಿಂದ 20 ಲೀಟರ್ ವರೆಗೆ ಹಾಲನ್ನು ಕೊಡುತ್ತವೆ .ಈ ದನಗಳನ್ನು ಸಾಕುವ ಮೂಲಕ ಜನರು ತಮ್ಮ ಜೀವನವನ್ನು ನಡೆಸುತ್ತಾರೆ. ದನಗಳಿಂದ ಕೇವಲ ಹಾಲು ಮಾತ್ರವಲ್ಲದೆ ಸಗಣಿ, ಗೋಮೂತ್ರಗಳು ದೊರಕುತ್ತವೆ. ಸೆಗಣಿಯನ್ನು ಒಂದು ಗೊಬ್ಬರವಾಗಿ ಹಾಗೂ ಗೋಮೂತ್ರವನ್ನು ಒಂದು ಉತ್ತಮ ಔಷಧಿಯಾಗಿ ಬಳಸುತ್ತಾರೆ. ಸೆಗಣಿಯಿಂದ ಬೆರಣಿಗಳನ್ನು ಮಾಡಿ ಉರುವಲಾಗಿಯೂ ಬಳಸುತ್ತಾರೆ. ಹೈನುಗಾರಿಕೆಯು ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಬದಲಾವಣೆಯನ್ನು ಕಂಡಿದೆ. 4o-50 ವರ್ಷಗಳ ಹಿಂದೆ ಒಂದೆರಡು ಲೀಟರ್ ಹಾಲು ಕೊಡುವ ಊರ ತಳಿಗಳನ್ನು ಸಾಕುತ್ತಿದ್ದ ಜನರು ಇಂದು 10 ರಿಂದ 20 ಲೀಟರ್ ಹಾಲು ಕೊಡುವ ದನಗಳನ್ನು ಸಾಕುತ್ತಾರೆ. ಅನೇಕರು ಹೈನುಗಾರಿಕೆಯ ಮೂಲಕವೇ ತಮ್ಮ ಜೀವನವನ್ನು ಸಾಗಿಸುತ್ತಾರೆ.

✍ **ವಾಕ್ಯ ರಚಿಸಿರಿ**

ಪಾಠಪುಸ್ತಕದಲ್ಲಿ ನೀಡಿದ ವಾಕ್ಯದಲ್ಲಿ ಅಡಿಗೆರೆ ಎಳೆದ ಪದಗಳಿಗೆ ಅರ್ಥಪೂರ್ಣ ವಾಕ್ಯ ರಚಿಸುವುದು.

1. ಉಪಯುಕ್ತ X ನಿರುಪಯುಕ್ತ - ಪರಿಸರ ಮಾಲಿನ್ಯವನ್ನುಂಟು ಮಾಡುವ ಪ್ಲಾಸ್ಟಿಕಿನಂತಹ <u>ನಿರುಪಯುಕ್ತ</u> ವಸ್ತುಗಳು ನಮ್ಮ ಪರಿಸರದಲ್ಲಿ ಕಂಡು ಬರುತ್ತದೆ.
2. ಮೇಲ್ಭಾಗ X ಕೆಳಭಾಗ - ವಾಹನದ <u>ಕೆಳಭಾಗ</u>ದಲ್ಲಿ ಚಕ್ರಗಳಿರುವುದು.
3. ನಿಧಾನ X ವೇಗ - ವಾಹನಗಳನ್ನು <u>ವೇಗ</u>ವಾಗಿ ಚಲಾಯಿಸುವುದು ಅಪಾಯವನ್ನುಂಟು ಮಾಡುತ್ತದೆ.
4. ಅಸಾಧ್ಯ X ಸಾಧ್ಯ - ಉತ್ತಮವಾಗಿ ಅಧ್ಯಯನ ಮಾಡಿದರೆ ಹೆಚ್ಚು ಅಂಕಗಳನ್ನು ಗಳಿಸಲು <u>ಸಾಧ್ಯ</u>ವಾಗುತ್ತದೆ.

✍ **ವಿಂಗಡಿಸಿ ಬರೆಯಿರಿ**

ಅಭಾವವಿರುವ = ಅಭಾವ+ಇರುವ

ಸಂಪತ್ತಿರಬೇಕು = ಸಂಪತ್ತು+ಇರಬೇಕು

ಪೆಟ್ಟಿಗೆಗಳಲ್ಲಿಟ್ಟು = ಪೆಟ್ಟಿಗೆಗಳಲ್ಲಿ + ಇಟ್ಟು

ಗಾಬರಿಯಾಗಬಾರದು = ಗಾಬರಿ+ಆಗಬಾರದು

ಸಿಗುವಂತಿರಬೇಕು = ಸಿಗುವಂತೆ+ಇರಬೇಕು

**ಪೂರಕ ಓದಿಗೆ**

## ಅಣಬೆ ಕೃಷಿ

ಅಣಬೆ ಸಸ್ಯವರ್ಗಕ್ಕೆ ಸೇರಿದ ಶಿಲೀಂದ್ರ. ಆಹಾರ ಪದಾರ್ಥಗಳ ಪಟ್ಟಿಯಲ್ಲಿ ಅಣಬೆಯನ್ನು ತರಕಾರಿ ಎಂದು ಗುರುತಿಸಲಾಗುತ್ತದೆ. ಇದೊಂದು ಉತ್ತಮ ಆಹಾರ. ಹಲವಾರು ವಿಧದ ಅಣಬೆಗಳನ್ನು ನಾವು ಕಾಣಬಹುದು. ಅವುಗಳಲ್ಲಿ ಬಹುಪಾಲು ಅಣಬೆಗಳು ತಿನ್ನಲು ಯೋಗ್ಯವಾಗಿವೆ. ಇನ್ನೂ ಕೆಲವು ವಿಷಪೂರಿತವಾಗಿರುತ್ತವೆ. ಇದರಲ್ಲಿ ಪ್ರೊಟೀನ್, ಜೀವಸತ್ವಗಳು, ಖನಿಜಾಂಶಗಳು ಹೇರಳವಾಗಿದ್ದು ಶರ್ಕರ ಪಿಷ್ಠ ಕಡಿಮೆಯಿರುವುದರಿಂದ ಸಕ್ಕರೆ ರೋಗಿಗಳಿಗೆ ಒಳ್ಳೆಯ ಆಹಾರವಾಗಿದೆ. ಅಣಬೆ ಹೆಚ್ಚು ಮೃದುವಾಗಿರುವುದರಿಂದ ಎಲ್ಲಾ ವಿಧದ ಮಸಾಲೆ ಪರಿಮಳವನ್ನು ಹೀರಿಕೊಳ್ಳುವ ಗುಣ ಇದಕ್ಕಿದೆ. ಹಾಗಾಗಿ ಇದರಿಂದ ರುಚಿಕರ ತಿನಿಸುಗಳನ್ನು ತಯಾರಿಸಹುದು. ಅತ್ಯಧಿಕ ಪ್ರೊಟೀನ್ ಇರುವ ಆಹಾರ ವರ್ಧಕ ಅಣಬೆಗೆ ದಿನದಿಂದ ದಿನಕ್ಕೆ ಬೇಡಿಕೆ ಹೆಚ್ಚುತ್ತಿದೆ. ಅಣಬೆ ಕೃಷಿಯಿಂದ ಕಡಿಮೆ ವೇಳೆಯಲ್ಲಿ ಹಾಗೂ ಅಲ್ಪ ಪ್ರದೇಶದಲ್ಲಿ ಅಧಿಕ ಇಳುವರಿ ಪಡೆಯಬಹುದು.

**ಅಣಬೆ ಕೃಷಿಯ ವಿಧಾನ**

ಅಣಬೆ ಉತ್ಪಾದಿಸಲು ಭತ್ತದ ಹುಲ್ಲು ಅತ್ಯವಶ್ಯಕ. ಹಾಗಾಗಿ ಭತ್ತದ ಹುಲ್ಲು ಲಭ್ಯವಿರುವ ಜಲಾನಯನ ಪ್ರದೇಶಗಳಲ್ಲಿ ಅದರಲ್ಲೂ ಮಲೆನಾಡು, ಅರೆಮಲೆನಾಡು ಪ್ರದೇಶಗಳಲ್ಲಿ ಅಣಬೆ ಕೃಷಿಯನ್ನು ಉತ್ಪಾದನಾ ಚಟುವಟಿಕೆಯಾಗಿ ಕೈಗೊಳ್ಳಬಹುದು. ಈ ಕೃಷಿಯ ಬಗ್ಗೆ ತೋಟಗಾರಿಕಾ ಇಲಾಖೆ ಕೂಡಾ ತರಬೇತಿ ನೀಡುತ್ತದೆ. ವರ್ಷವಿಡೀ ಅಣಬೆ ಬೆಳೆಯನ್ನು ಬೆಳೆಯಬಹುದು. ಅಣಬೆ ಕೃಷಿಯನ್ನು ಒಳಾಂಗಣದಲ್ಲಿ ಮಾಡಬೇಕಾಗುತ್ತದೆ. ಆಯಿಸ್ಟರ್ ಅಣಬೆ ಭಾರತದಲ್ಲಿ ಬೆಳೆಯಲು ಸೂಕ್ತವಾಗಿದೆ. ಉಳಿದಂತೆ ಬಿಳಿ ಅಣಬೆ ಅಥವಾ ಯುರೋಪಿನ ಅಣಬೆ, ಕಪ್ಪೆ ಚಿಪ್ಪಿನ ಅಣಬೆ ಅಥವಾ ಡಿಗ್ರಿ ಅಣಬೆ, ಬತ್ತದ ಹುಲ್ಲಿನ ಅಣಬೆ ಈ ಮೂರೂ ಗುಂಪಿಗೆ ಸೇರಿದ ಎಲ್ಲಾ ಅಣಬೆ ತಳಿಗಳನ್ನು ಬೆಳೆಯಬಹುದು. ಇದರಲ್ಲೂ ಕಪ್ಪೆ ಚಿಪ್ಪಿನ ಅಣಬೆಯನ್ನು ಬೆಳೆಸುವುದು ಅತಿ ಸುಲಭ. ಇದಕ್ಕೆ 22 ಡಿಗ್ರಿ ಸೆಲ್ಸಿಯಸ್‌ನಿಂದ ೩ಂಡಿಗ್ರಿ ಸೆಲ್ಸಿಯಸ್‌ವರೆಗಿನ ಎಲ್ಲಾ ಹವಾಮಾನವನ್ನು ಹೊಂದಿಕೊಂಡು ಬೆಳೆಯುವ ಸಾಮರ್ಥ್ಯವಿದೆ. ಅಣಬೆ ಕೃಷಿ ಮಾಡಲು ವಿವಿಧ ಹಂತಗಳಿವೆ. ಮೊದಲು ಭತ್ತದ ಹುಲ್ಲನ್ನು 4 ರಿಂದ 5 ಸೆಂ.ಮೀ. ಉದ್ದದ ತಂಡುಗಳಾಗಿ ಕತ್ತರಿಸಿ ಸುಮಾರು 3 ರಿಂದ 4 ಗಂಟೆಗಳ ಕಾಲ ನೀರಿನಲ್ಲಿ ನೆನೆಸಬೇಕು. ಹುಲ್ಲಿನಲ್ಲಿರುವ ನೀರನ್ನೆಲ್ಲಾ ಬಸಿದು ಕುದಿಯುವ ನೀರಿನಲ್ಲಿ 2 ಗಂಟೆಗಳ ಕಾಲ ನೆನೆಸಬೇಕು. ಕುದಿಯುವ ನೀರಿನಿಂದ ಹುಲ್ಲನ್ನು ತೆಗೆದು ಅದನ್ನು ಒಣಗಿಸಿ ಹೆಚ್ಚಿನ ನೀರಿನ ಅಂಶವನ್ನು ತೆಗೆಯಬೇಕು. ಒಣಗಿದ ಹುಲ್ಲನ್ನು ಪಾಲಿಥೀನ್ ಚೀಲಗಳಿಗೆ ತುಂಬಬೇಕು, ಒಂದು ಚೀಲಕ್ಕೆ ಒಂದು ಕೆ.ಜಿ.ಯಷ್ಟು ಹುಲ್ಲು ಹಾಗೂ 5೦೦ ಗ್ರಾಮ್ ಅಣಬೆ ಬೀಜವನ್ನು ಹಂತ ಹಂತವಾಗಿ ಸಮಾನಾಗಿ ಹರಡಿ ತಂಬಬೇಕು. ಚೀಲದ ಬಾಯನ್ನು ಭದ್ರವಾಗಿ ಕಟ್ಟಬೇಕು. ನಂತರ ಚೀಲಗಳನ್ನು ತಂಪಾಗಿರುವ ಸ್ಥಳದಲ್ಲಿ 20ರಿಂದ 30 ದಿನಗಳ ಕಲ ಇಡಬೇಕು. ಆಗ ಅಣಬೆ ಬೀಜ ಮೊಳಕೆಯೊಡೆದು ಬೆಳೆದಿರುತ್ತದೆ. ಚೀಲಗಳಿಗೆ ಬ್ಲೇಡ್‌ನಿಂದ ರಂಧ್ರಗಳನ್ನು ಮಾಡಬೇಕು. ದಿನಕ್ಕೆ 2 ರಿಂದ 3 ಬಾರಿ ನೀರು ಚಿಮುಕಿಸುತ್ತಿರಬೇಕು. ಚೀಲಕ್ಕೆ ರಂಧ್ರಗಳನ್ನು ಮಾಡಿದ ಒಂದು ವಾರದ ಒಳಗೆ ಹುಲ್ಲಿನ ಪಿಂಡಿಯ ಸುತ್ತಲೂ ಅಣಬೆ ಕಾಣಸಿಗುತ್ತದೆ. ಪ್ರತಿ 3 ದಿನಕ್ಕೊಮ್ಮೆ ಅಣಬೆ ಕೊಯಿಲು ಮಾಡಬಹುದು.

**ಅಣಬೆಯ ಉಪಯೋಗಗಳು**

ಅಣಬೆಯಿಂದ ವಿವಿಧ ಬಗೆಯ ಆಹಾರ ತಯಾರಿಸಬಹುದು. ಇದನ್ನು ಹಸಿಯಾಗಿಯೇ ನಾನಾ ರೀತಿಯ ಅಡುಗೆಯಲ್ಲಿ ಬಳಸಬಹುದು. ಅಣಬೆಯಲ್ಲಿ ಆರೋಗ್ಯಕ್ಕೆ ಅವಶ್ಯಕವಾದ ಪೋಷಕಾಂಶಗಳು ಇರುವುದರಿಂದ ನೀರಿನಲ್ಲಿ 20 ನಿಮಿಷ ಬೇಯಿಸಿ ಕುಡಿಯಬಹುದು. ಬಿಸಿಲಿನಲ್ಲಿ ಒಣಗಿಸಿ ಪುಡಿ ಮಾಡಿ ಹಾಲಿನೊಂದಿಗೆ ಬೆರೆಸೊಕೊಂಡು ಕುಡಿಯಬಹುದು. ಅನ್ನ, ಸಾರು, ತರಕಾರಿ ಹೀಗೆ ಯಾವುದೇ ಬಗೆಯ ಅಡುಗೆಯಲ್ಲಾದರು ಪುಡಿ ಬೆರಸಬಹುದು. ಶೇಂಗಾ, ಎಳ್ಳು ಮುಂತಾದ ಬಗೆಬಗೆಯ ಚಟ್ನಿ ಪುಡಿಗಳಲ್ಲೂ ಅಣಬೆ ಬೆರೆಸಿದರೆ ರುಚಿ ಮತ್ತಷ್ಟು ಹೆಚ್ಚುತ್ತದೆ.

**ಅಣಬೆ ಕೃಷಿಗೆ ಮುನ್ನೆಚ್ಚರಿಕಾ ಕ್ರಮಗಳು**

ಅಣಬೆ ಕೃಷಿ ಮಾಡುವಾಗ ಹೊಸ ಕಚ್ಛಾ ವಸ್ತುಗಳನ್ನು ಬಳಸಬೇಕು. ಉತ್ತಮ ಬೆಳೆಗಾಗಿ ನೀರಿನ ನಿರ್ವಹಣೆ ಮಹತ್ತರವಾಗಿದೆ. ಅಣಬೆ ಕೃಷಿಯ ವೇಳೆ ಶುಚಿತ್ವ ಕಾಪಾಡಬೇಕು. ಅಣಬೆ ಬೆಳೆಯುವ ಕೋಣೆಗೆ ವಾರಕ್ಕೊಮ್ಮೆ ಫಾರ್ಮಾಲ್ಡಿಹೈಡ್ ಮತ್ತು ಡೈಕ್ಲೋರೋವಾಸ್ ಸಿಂಪಡಿಸಬೇಕು. ಕಿಟಕಿ ಬಾಗಿಲುಗಳಿಗೆ ತಂತಿಯ ಬಲೆಗಳನ್ನು ಅಳವಡಿಸಿ ಕೋಣೆಗೆ ಇಲಿ ಮತ್ತು ನೊಣ ಪ್ರವೇಶಿಸದಂತೆ ಎಚ್ಚರ ವಹಿಸಬೇಕು. ಒಂದು ಬೆಳೆಯಿಂದ ಇನ್ನೊಂದಕ್ಕೆ ಕನಿಷ್ಟ ೩ ದಿನಗಳ ಅಂತರವಿಡುವುದರಿಂದ ಬೆಳೆ ಕಲುಷಿತಗೊಳ್ಳುವುದನ್ನು ತಡೆಯಬಹುದು.

# 2. ಜೀವನ ಮೌಲ್ಯ

ಮೌಲ್ಯವೆಂದರೆ ಬೆಲೆಯುಳ್ಳದ್ದು, ಸಮಾಜದಲ್ಲಿ ಜನರು ಅದಕ್ಕೆ ಗೌರವ ಕೊಡುವಂಥದ್ದೂ ಆಗಿರುತ್ತದೆ. ಜೀವನದಲ್ಲಿ ಮೌಲ್ಯಗಳಿದ್ದಾಗಲೇ ಆ ಜೀವನ ಸಾರ್ಥಕವೆನಿಸುತ್ತದೆ. ಸಕಲ ಜೀವಿಗಳಲ್ಲಿ ಮನುಷ್ಯ ಮಾತ್ರ ಜೀವನ ಮೌಲ್ಯಗಳನ್ನಳವಡಿಸಿಕೊಳ್ಳಲು ಸಾಧ್ಯ. ಕಾಲ ಬದಲಾದಂತೆ ಕೆಲವು ಮೌಲ್ಯಗಳು ಬದಲಾಗುತ್ತದೆ. ಕಾಲದಿಂದ ಕಾಲಕ್ಕೆ ಮನುಷ್ಯ ಜೀವನದಲ್ಲಿ ಅನೇಕ ಬದಲಾವಣೆಗಳಾಗುತ್ತವೆ. ಹೀಗಾಗಿ ಜೀವನ ಮೌಲ್ಯಗಳು ವರ್ತಮಾನಕ್ಕೆ ತಕ್ಕಂತೆ ಜನಸಮುದಾಯಕ್ಕೆ ತಕ್ಕಂತೆ ಸೃಷ್ಟಿಯಾಗುತ್ತವೆ. ಜೀವನ ಹೇಗಿರಬೇಕು ಎಂಬುದನ್ನು ಮನುಷ್ಯ ಮಾತ್ರ ಆಲೋಚಿಸುತ್ತಾರೆ. ಉಳಿದ ಜೀವಿಗಳಿಗೆ ಈ ಆಲೋಚನೆ ಇರುವುದಿಲ್ಲ. ಮೌಲ್ಯಗಳಿಂದಲೆ ಜೀವನ ಸಾರ್ಥಕವಾಗುತ್ತದೆ. ಈ ಹಿನ್ನಲೆಯಲ್ಲಿ ಮೌಲ್ಯಗಳು ಬದುಕಿಗೆ ಅನಿವಾರ್ಯ ವಾಗಿವೆ.

ಸತ್ಯ, ಅಹಿಂಸೆ, ನಿಸ್ವಾರ್ಥ, ಪ್ರೀತಿ , ತ್ಯಾಗ , ಸ್ನೇಹ , ಪ್ರಾಮಾಣಿಕತೆ , ಇಂತಹ ಅನೇಕ ಜೀವನ ಮೌಲ್ಯಗಳಿವೆ. ಜೀವನ ಎಷ್ಟು ಮುಖ್ಯವೋ ಜೀವನ ಮೌಲ್ಯಗಳು ಅಷ್ಟೇ ಮುಖ್ಯವಾಗಿದೆ. ಈ ದೃಷ್ಟಿಯಲ್ಲಿ ಎರಡನೇ ಘಟಕವಾಗಿ ಮೌಲ್ಯಗಳು ಆಶಯ ಬರುವಂತೆ ಪಾಠಗಳನ್ನು ಆಯ್ಕೆ ಮಾಡಲಾಗಿದೆ. ಒಟ್ಟು 3 ಪಾಠ ಭಾಗಗಳಿದ್ದು ಮೊದಲನೆಯದ್ದು ನೈತಿಕ ಮೌಲ್ಯ ಆಶಯ ಬರುವಂತೆ ಸಮಯದ ಮಹತ್ವ ಕತೆಯನ್ನು ಆರಿಸಲಾಗಿದೆ. ಎರಡನೇ ಪಾಠವನ್ನು ಕರ್ತವ್ಯಗಳು ಆಶಯ ಬರುವಂತೆ ನಮ್ಮ ಬಲ ದೇಶಭಕ್ತಿ ಕವನವನ್ನು ಆರಿಸಲಾಗಿದೆ. ಮೂರನೇ ಪಾಠ ಭಾಗವನ್ನು ಕರ್ತವ್ಯಪಾಲನೆ ಆಶಯ ಬರುವಂತೆ ರಾಣಿ ಚೆನ್ನಮ್ಮ ನಾಟಕವನ್ನು ಆಯ್ಕೆ ಮಾಡಲಾಗಿದೆ.

**ಕಲಿಕಾ ಉದ್ದೇಶಗಳು**

- ಸಮಯನಿಷ್ಠೆಯನ್ನು ತನ್ನ ಜೀವನದಲ್ಲಿ ಪಾಲಿಸುವುದು.
- ಸಮಯದ ಸಮದುಪಯೋಗವಾಗುವಂತೆ ತನ್ನ ಜೀವನವನ್ನು ನಡೆಸುವುದು.
- ದೇಶ ಪ್ರೇಮವನ್ನು ಬೆಳೆಸುವಂತೆ ಪ್ರೇರೇಪಿಸುವುದು.
- ಕವನಗಳನ್ನು ರಾಗ, ತಾಳ, ಲಯಬದ್ಧವಾಗಿ ಹಾಡುವುದನ್ನು ತಿಳಿದುಕೊಳ್ಳುವುದು.
- ಸ್ವಾಭಿಮಾನದಿಂದ ಜೀವನ ನಡೆಸುವುದನ್ನು ಅರಿತುಕೊಳ್ಳುವುದು.
- ತಮ್ಮ ತಮ್ಮ ಕರ್ತವ್ಯಗಳನ್ನು ಅರಿತು ಅದಕ್ಕೆ ಚ್ಯುತಿಬಾರದಂತೆ ಪಾಲಿಸುವುದು.
- ನಾಟಕವನ್ನು ಕಥೆಯಾಗಿಯೂ ಕಥೆಯನ್ನು ನಾಟಕವಾಗಿಯೂ ಬರೆಯುವ ಸಾಮರ್ಥ್ಯವನ್ನು ಗಳಿಸುವುದು.

# ಯುನಿಟ್ ಗ್ರಿಡ್

**ತರಗತಿ - 5 (AT) ಮುಂದುವರಿದ ಪಠ್ಯ**

**ಘಟಕದ ಹೆಸರು : ಜೀವನ ಮೌಲ್ಯ** — **ತರಗತಿ : 5**

**ಆಶಯ (Theme) : ಮೌಲ್ಯಗಳು** — **ಸಮಯ : 18**

| ಉಪ ಆಶಯಗಳು | ತಿಳುವಳಿಕೆಗಳು | ಸಾಹಿತ್ಯ ರೂಪಗಳು | ಸಾಮರ್ಥ್ಯಗಳು / ಕೌಶಲಗಳು | ಮೌಲ್ಯಗಳು/ ಮನೋಭಾವಗಳು | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು (ಚಟುವಟಿಕೆಗಳು) | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| ನೈತಿಕ ಮೌಲ್ಯಗಳು | ನಿತ್ಯ ಜೀವನದಲ್ಲಿ ಸಂಯದ ಮಹತ್ವವನ್ನು ತಿಳಿದು ಕೊಳ್ಳುವುದು. | ಕಥೆ (ಸಮಯದ ಮಹತ್ವತ) | • ಓದುವುದು<br>• ಓದಿದ ವಿಷಯವನ್ನು ತರ್ಕಬದ್ಧವಾಗಿ ವಿಶ್ಲೇಷಿಸುವುದು.<br>• ಆಲಿಸುವುದು<br>• ಹಾಡುವುದು.<br>• ಅಭಿನಯ<br>• ಸಂವಹನ | • ಸಮಯವು ವಸ್ತುವಾಗಿರುವ ಸಾಹಿತ್ಯ ಕೃತಿಗಳನ್ನು ಓದಿ ಆಸ್ವಾದಿಸುವುದು.<br>• ಸಮಯದ ಪರಿಪಾಲನೆ<br>• ದೇಶಭಕ್ತಿ ಬಿಂಬಿಸುವ ಸಾಹಿತ್ಯ ರಚನೆಗಳನ್ನು ಓದಿ ಆಸ್ವಾದಿಸುವುದು.<br>• ದೇಶದ ಭಗ್ಗೆ ಗೌರವಾದರಗಳನ್ನು ಹೊಂದುವುದು.<br>• ಸಮಾಜದಲ್ಲಿ ಆದರ್ಶರಾಗುವಂತೆ ಜೀವನ ನಡೆಸುವುದು.<br>• ಆತ್ಮಾಭಿಮಾನವನ್ನು ಹೊಂದುವುದು.<br>• ಕರ್ತವ್ಯಪಾಲನೆಗೆ ಹೆಚ್ಚು ಪ್ರಾಶಸ್ತ್ಯನೀಡುವುದು. | • ಪ್ರಾಸ ಪದ ಗುರುತಿಸುವುದು.<br>• ಜೋಡುನುಡಿ ಗುರುತಿಸುವುದು.<br>• ವಿಂಗಡಿಸಿ ಬರೆಯುವುದು.<br>• ಶೀರ್ಷಿಕೆ ನೀಡುವುದು. | • ಸಂಭಾಷಣೆ<br>• ಭಾಷಣ ಬರವಣಿಗೆ<br>• ಹೋಲಿಸಿ ಬರೆಯುವುದು<br>• ಆಶಯ ಬರೆಯುವುದು<br>• ಪತ್ರಿಕಾ ವರದಿ<br>• ಪಾತ್ರ ಚಿತ್ರಣ<br>• ವ್ಯವಹಾರ ರೂಪಗಳನ್ನು ಬದಲಾಯಿಸಿ ಬರೆಯುವುದು.<br>• ಪತ್ರ ಬರವಣಿಗೆ | • ಕಥೆ ಪುಸ್ತಕಗಳು<br>• ಕಥೆಯ ವೀಡಿಯೋ<br>• ದೇಶಭಕ್ತಿ ಗೀತೆಗಳ ಆಡಿಯೋ<br>• ನಾಟಕಕ್ಕೆ ಅಗತ್ಯವಿರುವ ಪರಿಕರಗಳು | • ಕ್ರಮೀಕರಿಸಿ ಬರೆಯುವುದು.<br>• ಸಂಭಾಷಣೆ ಬರವಣಿಗೆ<br>• ಹೋಲಿಕಾ ಟಿಪ್ಪಣಿ<br>• ಸಂಚಿಕೆ ತಯಾರಿ<br>• ಭಾಷಣ<br>• ಪಾತ್ರ ಚಿತ್ರಣ<br>• ಆಶಯ ಬರವಣಿಗೆ<br>• ಪತ್ರ ಲೇಖನ |
| ದೇಶ ಭಕ್ತಿ | ದೇಶದ ಬಗ್ಗೆ ಗೌರವ ಹೊಂದುವುದು | ಕವಿತೆ (ನಮ್ಮ ಬಲ | | | | | | |
| ಸ್ವಾಭಿಮಾನ | ಸ್ವಾಭಿಮಾನ ದಿಂದ ಬದುಕಲು ತಿಳಿಯುವುದು. | ನಾಟಕ (ರಾಣಿ ಚೆನ್ನಮ್ಮ) | | | | | | |

**ಪಾಠಪ್ರವೇಶ**

ಪಾಠಪುಸ್ತಕದಲ್ಲಿ ನೀಡಿದ ಚಿತ್ರದ ಕುರಿತು ಕಿರುಚರ್ಚೆ ನಡೆಸುವುದು.

ಚರ್ಚಾ ಸೂಚಕಗಳು

- ಚಿತ್ರದಲ್ಲಿ ಏನೆಲ್ಲಾ ಇವೆ?
- ಇಂತಹ ಗಡಿಯಾರ/ ಸಮಯವನ್ನು ಸೂಚಿಸುವವುಗಳನ್ನು ಈ ಹಿಂದೆ ನೋಡಿರುವಿರಾ?
- ನೀವು ಪ್ರತಿದಿನ ಬೆಳಗ್ಗಿನಿಂದ ಸಂಜೆಯವರೆಗೆ ಯಾವೆಲ್ಲಾ ಸಂದರ್ಭಗಳಲ್ಲಿ ಸಮಯವನ್ನು ಹೊಂದಿಸುವಿರಿ?
- ಸಮಯದ ಕಾರಣದಿಂದ ನಿಮಗೆ ಉಂಟಾದ ಸಮಸ್ಯೆಗಳೇನು? ಪ್ರಯೋಜನ ಏನಾಗಿದೆ?

ಮೇಲಿನ ಚರ್ಚೆಯ ಆಧಾರದಲ್ಲಿ ಸಮಯ ಪಾಲನೆಯ ಬಗ್ಗೆ ತಮ್ಮ ಅನುಭವಗಳನ್ನು ಸೇರಿಸಿ ನಾಲ್ಕೋ ಐದೋ ಸಾಲುಗಳನ್ನು ಬರೆಯುವರು.

ಈ ಪಾಠ ಭಾಗವನ್ನು ಪ್ರಾರಂಭಿಸುವ ಮೊದಲು ಅಧ್ಯಾಪಕರು ಅಕ್ಬರ್ ಬೀರಬಲ್ಲನ ಕೆಲವೊಂದು ಹಾಸ್ಯಭರಿತ ಕಥೆಗಳನ್ನು ಅಥವಾ ಕೃಷ್ಣದೇವರಾಯ ತೆನಾಲಿ ರಾಮಕೃಷ್ಣನ ಕಥೆಗಳನ್ನು ಮಕ್ಕಳಿಗೆ ಹೇಳುವುದು.

# ಸಮಯದ ಮಹತ್ವ

**ಓದುವಿಕೆ**

ಮೊದಲಿಗೆ ಮಕ್ಕಳು ವೈಯಕ್ತಿಕವಾಗಿ ಮೌನವಾಗಿ ಓದುವರು. ಪಾಠದಲ್ಲಿ ಬಂದಿರುವ ಕಠಿಣ ಪದಗಳ ಅರ್ಥವನ್ನು ಪದಕೋಶದ ಸಹಾಯದಿಂದ ಕಂಡುಹಿಡಿಯಲು ಅಧ್ಯಾಪಕರು ಸಹಕರಿಸುವುದು. ಹಾಗೆಯೇ ಸಮಾನಾರ್ಥಕ ಪದಗಳು, ವಿರೋಧಾರ್ಥಪದಗಳನ್ನು ಗುರುತಿಸುವುದು. ಪಾಠವನ್ನು ಗಟ್ಟಿಯಾಗಿ ಓದಲು ಹೇಳುವುದು. ಈ ಮೂಲಕ ತಪ್ಪುಗಳನ್ನು ತಿದ್ದಲು ಸಹಕರಿಸುವುದು. ಪಾಠದ ಪ್ರಧಾನ ಆಶಯವಾದ ಸಮಯದ ಮಹತ್ವ ಕುರಿತು ಮಾಹಿತಿಯನ್ನು ತಿಳಿಯುವುದು .

**ಚಟುವಟಿಕೆಗಳು**

✍ **ಉತ್ತರಿಸಿರಿ**

ಕಥೆಯ ಆಶಯ ತಿಳಿದಿದ್ದಾರೆಯೇ ಎಂದು ತಿಳಿಯಲು ಈ ಚಟುವಟಿಕೆಯನ್ನು ಕೊಡಲಾಗಿದೆ .ಮಕ್ಕಳು ಕೊಟ್ಟಿರುವ ಪ್ರಶ್ನೆಗಳಿಗೆ ಸೂಕ್ತವಾದ ಆಶಯ ಪೂರ್ಣವಾದ ಉತ್ತರಗಳನ್ನು ಬರೆಯಲಿ. ವಾಕ್ಯ ರಚನಾ ಶೈಲಿ ಚೆನ್ನಾಗಿರಬೇಕು.

✍ **ಕ್ರಮೀಕರಿಸಿ ಬರೆಯಿರಿ**

ಪಠ್ಯದಲ್ಲಿ ಕೊಟ್ಟ ವಾಕ್ಯಗಳನ್ನು ಓದಿ ಆಶಯವನ್ನು ತಿಳಿದುಕೊಳ್ಳಲಿ. ಅದರಲ್ಲಿ ಕ್ರಮಾನುಗತವಾಗಿ ಬರಬೇಕಾದ ವಾಕ್ಯಗಳನ್ನು ಗುರುತಿಸಿ ಬರೆಯಲಿ.

❒ **ವಾಕ್ಯಗಳನ್ನು ಕ್ರಮೀಕರಿಸಿ ಬರೆದಾಗ**

1. ನಾಳೆಯ ಸಂಜೆಯ ಒಳಗೆ ಐದಾರು ಜನ ಮೂರ್ಖರನ್ನು ಕರೆದು ತಂದು ತೋರಿಸು,
2. ಬೀರಬಲ್ಲನು ರಾಜಾಜ್ಞೆಯಂತೆ ಮರುದಿನ ಮೂರ್ಖರನ್ನು ಹುಡುಕಲು ಹೊರಟನು.
3. ಅಯ್ಯಾ ಮೂರ್ಖ ನನ್ನ ಕುದುರೆ ಮುದಿಯಾಗಿದೆ ಹೆಚ್ಚು ಭಾರವನ್ನು ಅದಕ್ಕೆ ಹೊರಲಾಗುವುದಿಲ್ಲ.
4. ಬೀರಬಲ್ಲನ ಎದುರುಗಡೆಯಿಂದ ಬಂದ ವ್ಯಕ್ತಿ ಬೀರಬಲ್ಲನಿಗೆ ಢಿಕ್ಕಿ ಹೊಡೆದನು.
5. ಸ್ವಾಮಿ ನನ್ನ ಕೈಗಳನ್ನು ಹಿಡಿದು ಎಳೆಯಬೇಡಿರಿ.ನನ್ನ ತಲೆ ಕೂದಲನ್ನು ಹಿಡಿದು ಹೊರಗೆಳೆಯಿರಿ .
6. ಸಮಯ ಎಷ್ಟು ಮಹತ್ವದ್ದು ಎನ್ನುವುದನ್ನು ತೋರಿಸಿಕೊಟ್ಟ ಬೀರಬಲ್ಲನ ಜಾಣ್ಮೆಯನ್ನು ಹೊಗಳಿ ಬಾದಶಹ ಅವನನ್ನು ಸನ್ಮಾನಿಸಿದನು.

✍ **ಬಿಟ್ಟ ಸ್ಥಳ ತುಂಬಿಸಿರಿ**

ಒಂದು ಪದದ ಅರ್ಥಕ್ಕೆ ವಿರುದ್ಧವಾದ ಅರ್ಥವನ್ನು ಕೊಡುವ ಪದಗಳನ್ನು ವಿರೋಧಾರ್ಥ ಪದಗಳೆನ್ನುವರು. ಪಾಠ ಪುಸ್ತಕದಲ್ಲಿ ನೀಡಿರುವ ಪದಗಳ ವಿರೋಧಾರ್ಥ ಪದಗಳನ್ನು ಅರ್ಥಕೋಶದ ಸಹಾಯದಿಂದ ಕಂಡುಹಿಡಿಯಲು ಬಳಿಕ, ಪಾಠ ಭಾಗದಲ್ಲಿ ಕೊಟ್ಟಿರುವ ಪದಗಳನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸಿಕೊಂಡು ಬಿಟ್ಟ ಸ್ಥಳಗಳನ್ನು ತುಂಬಿಸಬೇಕು.

- ರಮೇಶನು ಮಾತನಾಡಲು ಸಮರ್ಥನಾಗಿದ್ದನು. ಆದರೆ ಹಾಡಲು ಅಸಮರ್ಥನಾಗಿದ್ದನು.
- ರಾಷ್ಟ್ರಧ್ವಜಕ್ಕೆ ಗೌರವ ತೋರಬೇಕು. ಹಿರಿಯರಲ್ಲಿ ಅಗೌರವ ತೋರಬಾರದು.

ಈ ಚಟುವಟಿಕೆಯ ಮುಂದುವರಿದ ಭಾಗವಾಗಿ ಪದದ ಆರಂಭದಲ್ಲಿ 'ಅ' ಸೇರಿ ಉಂಟಾಗುವ ವಿರೋಧಾರ್ಥ ಪದಗಳನ್ನು ಮಕ್ಕಳಲ್ಲಿ ಸಂಗ್ರಹಿಸಿ ಬರೆಯಲು ಹೇಳುವುದು.

ಉದಾಹರಣೆಗೆ

- ತೃಪ್ತಿ × ಅತೃಪ್ತಿ
- ಸೌಕರ್ಯ X ಅಸೌಕರ್ಯ
- ಪೂರ್ಣ X ಅಪೂರ್ಣ
- ಧೈರ್ಯ x ಅಧೈರ್ಯ
- ನೀತಿ Xಅನೀತಿ
- ವ್ಯವಸ್ಥೆ Xಅವ್ಯವಸ್ಥೆ
- ವ್ಯವಹಾರ X ಅವ್ಯವಹಾರ
- ವಿರೋಧ X ಅವಿರೋಧ
- ಸತ್ಯ X ಅಸತ್ಯ
- ಸಮರ್ಥ xಅಸಮರ್ಥ ಇತ್ಯಾದಿ.

✍ **ಸಂಭಾಷಣೆ ಬರೆಯಿರಿ**

ಈ ಕಥೆಯಲ್ಲಿ ಬೀರಬಲ್ಲನು ಮೊದಲ ವ್ಯಕ್ತಿಯೊಂದಿಗೆ ಮಾತುಕತೆ ನಡೆಸಿರುವ ಸಂಭಾಷಣೆಯನ್ನು ಪಾಠ ಪುಸ್ತಕದಲ್ಲಿ ನೀಡಲಾಗಿದೆ. ಇದನ್ನು ನೋಡಿಕೊಂಡು ಇದೇ ರೀತಿಯಲ್ಲಿ ಬೀರಬಲ್ಲ ಮತ್ತು ಇಬ್ಬರು ವ್ಯಕ್ತಿಗಳ ನಡುವೆ ನಡೆದ ಸಂಭಾಷಣೆಯನ್ನು ಮಕ್ಕಳು ವೈಯಕ್ತಿಕವಾಗಿ ಬರೆಯಲಿ. ಆನಂತರ ಗುಂಪಿನಲ್ಲಿ ಚರ್ಚಿಸಿ ಉತ್ತರವನ್ನು ಉತ್ತಮಪಡಿಸಲಿ. ಅದನ್ನು ಅಗತ್ಯದ ಬದಲಾವಣೆಗಳೊಂದಿಗೆ ಅಧ್ಯಾಪಕರ ಮಾದರಿಯನ್ನು ಉಪಯೋಗಿಸಿ ಮೌಲ್ಯನಿರ್ಣಯ ಮಾಡಬಹುದು.

**ಸೂಚಕಗಳು**

- ಪಾತ್ರಕ್ಕೆ ಯೋಗ್ಯವಾದ ಸಂಭಾಷಣೆ ಇದೆ.
- ಭಾಷಾ ಶುದ್ಧಿಯಿಂದೊಡಗೂಡಿದ ನಿರರ್ಗಳವಾದ ಬರವಣಿಗೆ
- ಪಾತ್ರಕ್ಕೆ ಹೊಂದಿಕೊಳ್ಳುವ ಸಂಭಾಷಣೆ

**ಸಂಭಾಷಣೆಯು ಈ ರೀತಿಯಲ್ಲಿಯೂ ಇರಬಹುದಲ್ಲವೇ.**

ಎರಡನೇ ವ್ಯಕ್ತಿ : (ನಡೆಯುವ ಅವಸರದಲ್ಲಿ ಬೀರಬಲ್ಲನಿಗೆ ಡಿಕ್ಕಿ ಹೊಡೆದಾಗ ) ದಯವಿಟ್ಟು ಕ್ಷಮಿಸಿ,

ಬೀರಬಲ್ಲ :ಬಹಳ ಗಡಿಬಿಡಿಯಲ್ಲಿ ಹೊರಟಿರುವಂತೆ ಕಾಣುತ್ತಿದೆಯಲ್ಲ ?

ಎರಡನೇ ವ್ಯಕ್ತಿ: ನಿಜ ನಾನು ಅವಸರದಲ್ಲಿದ್ದೇನೆ .ನನ್ನ ಧ್ವನಿ ಎಷ್ಟು ದೂರ ಹೋಗಿದೆ ಎನ್ನುವುದನ್ನು ನಾನು ಕಾಣಬೇಕಾಗಿತ್ತು .

ಬೀರಬಲ್ಲ:ನಿಮ್ಮ ಮಾತಿನ ಅರ್ಥ ತಿಳಿಯಲಿಲ್ಲ.
ಎರಡನೇ ವ್ಯಕ್ತಿ: ನಾನು ಪೇಟೆಯ ಒಂದು ಚೌಕಿನಲ್ಲಿ ನಿಂತು ಕೂಗಿಕೊಂಡೆ .ಆ ಕೂಗು ಎಷ್ಟು ದೂರ ಹೋಗಿದೆ ಎನ್ನುವುದನ್ನು ಕಾಣಬೇಕಿತ್ತು, ಆದರೆ ನಿಮಗೆ ಡಿಕ್ಕಿ ಹೊಡೆದದ್ದರಿಂದ ನಾನು ನಿಲ್ಲಬೇಕಾಯಿತು. ಇಲ್ಲದಿದ್ದಲ್ಲಿ, ನಾನು ಆ ಸ್ಥಳವನ್ನು ತಲುಪಬಹುದಾಗಿತ್ತು.
(ಬೀರಬಲ್ಲನು ಹಳ್ಳದಲ್ಲಿ ಬಿದ್ದ ವ್ಯಕ್ತಿಯನ್ನು ಎತ್ತಲು ಪ್ರಯತ್ನಿಸಿದಾಗ)
ಮೂರನೇ ವ್ಯಕ್ತಿ : ಸ್ವಾಮಿ ನನ್ನ ಕೈಗಳನ್ನು ಹಿಡಿದು ಎಳೆಯಬೇಡಿರಿ ನನ್ನ ತಲೆಕೂದಲನ್ನು ಹಿಡಿದು ಎಳೆಯಿರಿ.
ಬೀರಬಲ್ಲ: ನಿಮ್ಮ ಕೈಗಳಿಗೆ ಏನಾದರೂ ಆಗಿದೆಯೇ?
ಮೂರನೇ ವ್ಯಕ್ತಿ : ಮೊದಲು ನಾನು ಹೇಳಿದಂತೆ ಮಾಡಿ.
ಬೀರಬಲ್ಲ:ತಲೆಗೂದಲನ್ನು ಹಿಡಿದು ಎಳೆಯಲು ಹೇಳಿದ ಕಾರಣವೇನು?
ಮೂರನೇ ವ್ಯಕ್ತಿ: ನಾನು ಬಡಗಿಯ ಮನೆಗೆ ಹೋಗಿದ್ದೆ. ನನ್ನ ಮನೆಗೆ ಒಂದು ಮರದ ಕಪಾಟು ಮಾಡಿಸಬೇಕಾಗಿತ್ತು. ಬಡಗಿ ಅದರ ಅಳತೆಯನ್ನು ಕೇಳಿದನು. ಅದು ನನಗೆ ಗೊತ್ತಿಲ್ಲದಿದ್ದುದರಿಂದ ಮನೆಗೆ ಹೋಗಿ ಅಳತೆ ಮಾಡಿಕೊಂಡು ಬಂದೆನು. ಆ ಅಳತೆಯು ನನ್ನ ಚಾಚಿದ ಕೈಗಳಷ್ಟಿದೆ. ಕೈಗಳನ್ನು ಹಾಗೆಯೇ ಚಾಚಿಕೊಂಡು ಬಡಗಿಯ ಮನೆಗೆ ಬರುತ್ತಿರುವಾಗ ಈ ಹಳ್ಳದಲ್ಲಿ ಬಿದ್ದೆನು .ಆದರೂ ಕಪಾಟಿನ ಅಳತೆ ಮರೆಯಬಾರದೆಂದು ಚಾಚಿದ ಕೈಗಳನ್ನು ಹಾಗೆಯೇ ಹಿಡಿದುಕೊಂಡಿರುವೆ. ಅದಕ್ಕೆ ನಾನು ನನ್ನ ಕೂದಲನ್ನು ಹಿಡಿದು ಹೊರಗೆ ಎಳೆಯಿರಿ ಎಂದದ್ದು.

✍ **ಶೀರ್ಷಿಕೆ ನೀಡಿರಿ**

ಪ್ರತಿಯೊಬ್ಬ ವ್ಯಕ್ತಿಗೂ ಒಂದೊಂದು ಹೆಸರಿರುವಂತೆ ಪ್ರತಿಯೊಂದು ಕತೆಗೂ ಒಂದು ಹೆಸರು ಬೇಕು. ಅದು ಅವರವರ ಅಭಿರುಚಿಗೆ, ಆಸಕ್ತಿಗೆ ಅನುಸಾರವಾಗಿರಬಹುದು.
‘ಮಕ್ಕಳು ಸ್ವತಃ ಶೀರ್ಷಿಕೆಯನ್ನು ನೀಡಲಿ. ಅಧ್ಯಾಪಕರು ಅಗತ್ಯವಿರುವ ಮಾರ್ಗದರ್ಶನವನ್ನು ನೀಡಬೇಕು. ಸೂಕ್ತವಾದ ಶೀರ್ಷಿಕೆಗಳನ್ನು ನೀಡಿದ ನಂತರ ಅವುಗಳನ್ನು ಸಮರ್ಥಿಸಿ ಬರೆಯಲು ಹೇಳಬೇಕು.
ಮಾದರಿ - ಬೀರಬಲನ ಜಾಣತನ
ಚತುರ ಬೀರಬಲ
ಆರು ಮೂರ್ಖರು ..... ಇತ್ಯಾದಿ

✍ **ವಿಂಗಡಿಸಿ ಬರೆಯಿರಿ**

ಮಕ್ಕಳು ಪದಗಳನ್ನು ವಿಂಗಡಿಸುವಾಗ ಪ್ರತಿಯೊಂದು ಪದವೂ ಅರ್ಥವತ್ತಾಗಿರಬೇಕೆಂಬುದನ್ನು ಅಧ್ಯಾಪಕರು ಸೂಚಿಸುವುದು. ಅಧ್ಯಾಪಕರು ಪಾಠ ಪುಸ್ತಕದಲ್ಲಿ ಕೊಟ್ಟಿರುವ ವಿಂಗಡಿಸಿ ಬರೆಯಿರಿ ಎಂಬ ಪದಗಳನ್ನು ವಿಂಗಡಿಸಿ ಬರೆಯಲು ಹೇಳುವುದು. ಹಾಗೆಯೇ ಪಾಠದಲ್ಲಿ ಬಂದ ಇತರ ಇಂತಹ ಪದಗಳನ್ನು ವಿಂಗಡಿಸಿ ಬರೆಯಲು ಹೇಳುವುದು.

❒ **ಪದಗಳನ್ನು ವಿಂಗಡಿಸಿದಾಗ**

* ತಲೆಗೂದಲು = ತಲೆ + ಕೂದಲು
* ವ್ಯರ್ಥವಾಯಿತು = ವ್ಯರ್ಥ + ಆಯಿತು
* ಸಮಯವನ್ನು = ಸಮಯ + ಅನ್ನು
* ಎದುರುಗಡೆ = ಎದುರು + ಕಡೆ

✍ **ಭಾಷಣ ಬರೆಯಿರಿ**

ಇದು ಈ ಪಾಠದ ಪ್ರಧಾನ ವ್ಯವಹಾರ ರೂಪವಾಗಿರುವುದರಿಂದ ಹೆಚ್ಚು ಗಮನವಹಿಸಬೇಕಾಗಿದೆ. ಪ್ರಾರಂಭದಲ್ಲಿ ಮಕ್ಕಳನ್ನು ಗುಂಪಿನಲ್ಲಿ ಕುಳ್ಳಿರಿಸಿ ಸಮಯದ ಮಹತ್ವವನ್ನು ಸಾರುವ ಕಥೆಗಳನ್ನು ಹೇಳುವುದು. ಬಳಿಕ ಮಕ್ಕಳು ಸಮಯದ ಮಹತ್ವ ಎಂಬ ವಿಷಯದ ಕುರಿತಾಗಿ ತನ್ನ ಅಭಿಪ್ರಾಯಗಳನ್ನು, ಭಾಷಣ ರೂಪದಲ್ಲಿ ವೈಯಕ್ತಿಕವಾಗಿ ಬರೆಯಲಿ.ನಂತರ ಕೆಲವು ಮಕ್ಕಳು ಮಂಡಿಸಲಿ.

**ಭಾಷಣವು ಹೇಗಿರಬೇಕು?**

❒ ಸಂಬೋಧನೆ

❒ ವಿಷಯ ಪ್ರವೇಶ

❒ ವಿಷಯ ವಿಸ್ತಾರ

❒ ವಿಷಯದ ಕ್ರಮೀಕರಣ

❒ ಉಪಸಂಹಾರ

**ಭಾಷಣ ಹೀಗೂ ಇರಬಹುದಲ್ಲವೇ**

## ಸಮಯದ ಮಹತ್ವ

ಗೌರವಾನ್ವಿತ ಅಧ್ಯಕ್ಷರೇ ಹಾಗೂ ಸಭಿಕರೇ, ನಿಮಗೆಲ್ಲರಿಗೂ ವಂದನೆಗಳು. ಸಮಯವೂ ನಮ್ಮ ಜೀವನದ ಅತ್ಯಮೂಲ್ಯ ಸಂಪನ್ಮೂಲವಾಗಿದೆ. ಒಮ್ಮೆ ಅದು ಕಳೆದು ಹೋದರೆ ಮತ್ತೆ ಎಂದಿಗೂ ಪುನಃ ಬರುವುದಿಲ್ಲ.ಸಮಯದೊಂದಿಗೆ ಯಾವುದನ್ನು ಹೋಲಿಸಲಾಗುವುದಿಲ್ಲ. ನಮ್ಮ ಇಡೀ ಜೀವನವು ಸಮಯದ ಸುತ್ತ ಸುತ್ತುತ್ತಿರುತ್ತದೆ . ನಾವು ಹಣ ಮತ್ತು ಸಮಯ ಎರಡನ್ನು ಹೋಲಿಕೆ ಮಾಡಿದರೆ ಸಮಯವು ಹೆಚ್ಚು ಮೌಲ್ಯಯುತವಾಗಿದೆ ಎಂದು ತಿಳಿದುಕೊಳ್ಳಬಹುದು.

ನಮ್ಮ ಜೀವನದಲ್ಲಿ ಸಮಯ ಬಹಳ ಮುಖ್ಯ. ಅದನ್ನು ನಾವು ಸರಿಯಾಗಿ ಬಳಸಿಕೊಳ್ಳುವ ಮೂಲಕ ಕೆಲವೊಂದು ಉತ್ತಮ ಅನುಭವಗಳನ್ನು ಪಡೆಯಬಹುದು .ಸಮಯಕ್ಕೆ ಆರಂಭ ಮತ್ತು ಅಂತ್ಯವಿಲ್ಲ. ಅದನ್ನು ಗಂಟೆ, ದಿನ ,ವಾರ, ತಿಂಗಳು, ವರ್ಷಗಳ ರೀತಿಯಲ್ಲಿ ಅಳೆಯಲಾಗುತ್ತದೆ. ಜಗತ್ತಿನ ಅತ್ಯಂತ ಕೆಟ್ಟ ವಿಷಯವೆಂದರೆ ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡುವುದು . ಸಮಯವನ್ನು ಎಂದಿಗೂ ನಿಲ್ಲಿಸಲಾಗುವುದಿಲ್ಲ.ನಮ್ಮ ಜೀವನದಲ್ಲಿ ಸಮಯದ ಮೌಲ್ಯವನ್ನು ನಾವು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಪ್ರತಿಯೊಬ್ಬರು ಸಮಯದ ಮೌಲ್ಯಗಳನ್ನು ಗೌರವಿಸಿ ಪ್ರತಿ ನಿಮಿಷ ನಿಮಿಷವನ್ನು ಆನಂದಿಸಬೇಕು. ಸಮಯವೂ ಯಾವಾಗಲೂ ಓಡುತ್ತಿರುತ್ತದೆ ಮತ್ತು ಅದು ಯಾರಿಗೂ ಕಾಯುವುದಿಲ್ಲ. ಕಳೆದು ಹೋದ ಸಮಯ ಎಂದಿಗೂ ಮತ್ತೆ ಬರುವುದಿಲ್ಲ.

ಮನುಷ್ಯರಿಗೆ ಮಾತ್ರವಲ್ಲದೆ ಪ್ರಕೃತಿಗೂ ಸಹ ಸಮಯದ ಮಹತ್ವ ತಿಳಿಯುತ್ತದೆ. ಸೂರ್ಯ- ಚಂದ್ರ ,ಋತುಗಳು ಇತ್ಯಾದಿ ಸಮಯಕ್ಕನುಗುಣವಾಗಿ ಚಲಿಸುತ್ತವೆ.ಈ ಪ್ರಪಂಚದಲ್ಲಿ ಎಲ್ಲವೂ ಕಾಲದ ಮೇಲೆ ಅವಲಂಬಿತವಾಗಿದೆ. ಸಮಯವೂ ಎಲ್ಲರಿಗೂ ಉಚಿತವಾಗಿದ್ದು ಅದನ್ನು ಖರೀದಿಸಲು ಅಥವಾ ಮಾರಾಟ ಮಾಡಲು ಸಾಧ್ಯವಿಲ್ಲ. ಜಗತ್ತಿನ ಮಹಾಪುರುಷರೆಲ್ಲರೂ ಸಮಯದ ಮಹತ್ವವನ್ನು ಚೆನ್ನಾಗಿ ತಿಳಿದಿದ್ದರಿಂದ ಕೀರ್ತಿ ಮತ್ತು ಯಶಸ್ಸಿನ ಉತ್ತುಂಗಕ್ಕೇರಿದರು.

ವಿದ್ಯಾರ್ಥಿ ಜೀವನದಲ್ಲಿ ಸಮಯವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ವಿದ್ಯಾರ್ಥಿಗಳು ಸಮಯವನ್ನು ಬುದ್ಧಿವಂತಿಕೆಯಿಂದ ಬಳಸಲು ಕಲಿತರೆ ಖಂಡಿತವಾಗಿಯೂ ಅವರು ತನ್ನ ಜೀವನದಲ್ಲಿ ಗುರಿಗಳನ್ನು ಸಾಧಿಸಲು ಸಾಧ್ಯವಾಗುತ್ತದೆ. ಸಮಯವನ್ನು ಸರಿಯಾಗಿ ಸದುಪಯೋಗಪಡಿಸಿಕೊಂಡರೆ ಬದುಕಿಗೆ ಹೊಸ ದಿಕ್ಕನ್ನು ನೀಡಬಹುದು. ನಮ್ಮ ದಿನಚರಿಗಳಾದ ಶಾಲೆಯ ಕೆಲಸ ,ಮನೆ ಕೆಲಸ, ಮಲಗುವ ಸಮಯ ,ಓದುವ ಸಮಯ, ವ್ಯಾಯಾಮ, ಆಟಗಳನ್ನು ಸಮಯಕ್ಕನುಗುಣವಾಗಿ ಆಯೋಜಿಸಬೇಕು. ಸಮಯದ ಪ್ರಾಮುಖ್ಯತೆಯನ್ನು ಮನಗಂಡು ಅದಕ್ಕನುಗುಣವಾಗಿ ನಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು. ಜಗತ್ತಿನಲ್ಲಿರುವ ಎಲ್ಲರಿಗೂ ದಿನದಲ್ಲಿ 24 ಗಂಟೆಗಳು ಇರುತ್ತವೆ. ಅವರು ಅದನ್ನು ಹೇಗೆ ನಿರ್ವಹಿಸುತ್ತಾರೆ ಎಂಬುದರ ಮೇಲೆ ಅವರ ಕೀರ್ತಿ ಬೆಳಗುತ್ತದೆ. ನಾವು ಸಮಯವನ್ನು ಹಾಳು ಮಾಡಿದರೆ ಅದು ನಮ್ಮನ್ನು ಹಾಳುಮಾಡುತ್ತದೆ ಎಂಬುದು ನಿತ್ಯ ಸತ್ಯ.ಆದ್ದರಿಂದ ಪ್ರತಿಯೊಬ್ಬರೂ ಸೋಮಾರಿತನವನ್ನು ಬಿಟ್ಟು ಸಮಯವನ್ನು ಸಾರ್ಥಕಗೊಳಿಸಬೇಕು.

**ಪೂರಕ ಓದಿಗೆ**

**ಬೀರಬಲನ ಚಮತ್ಕಾರ**

ಒಮ್ಮೆ ಅಕ್ಬರನು ಬೀರಬಲ್ಲನೊಂದಿಗೆ ಒಂದು ವಿಷಯದ ಬಗ್ಗೆ ಚರ್ಚಿಸುತ್ತಿದ್ದಾಗ ಅವನ ಮನದಲ್ಲಿ ಇದ್ದಕ್ಕಿದ್ದಂತೆ ಆಲೋಚನೆಯೊಂದು ಹೊಳೆಯಿತು. ಅವನು ಬೀರಬಲ್ಲನಲ್ಲಿ - "ನಮ್ಮ ದೇಹದ ಎಲ್ಲಾ ಭಾಗಗಳಲ್ಲಿಯೂ ಕೂದಲುಗಳು ಇರುವುದು ಸರ್ವೇಸಾಮಾನ್ಯ. ಹೀಗಿರುವಾಗ ನಮ್ಮ ಅಂಗೈಯೊಳಗೇಕೆ ಕೂದಲು ಇರುವುದಿಲ್ಲ?' ಎಂಬ ಪ್ರಶ್ನೆಯನ್ನಿತ್ತನು. ಬೀರಬಲ್ಲನು- 'ಮಹಾಪ್ರಭು! ನೀವು ಬಡವರಿಗೆ, ನಿರ್ಗತಿಕರಿಗೆ ದಾನ ಮಾಡುವುದು ನಿಮ್ಮ ಸಹಜವಾದ ಹುಟ್ಟುಗುಣ, ಹೀಗೆ ದಾನ ಮಾಡುತ್ತಲೇ ನಿಮ್ಮ ಜೀವನವನ್ನು ಸವೆಸುತ್ತಿದ್ದೀರಿ. ಆದ್ದರಿಂದ ಸದಾಕಾಲ ದಾನ ನೀಡುವ ನಿಮ್ಮ ಕೈಗಳಲ್ಲಿ ಕೂದಲು ಬೆಳೆಯಲು ಸಾಧ್ಯವಾಗಿಲ್ಲ' ಎಂದನು. ಅಕ್ಬರನು 'ಅದೇನೋ ಸರಿ! ನಿನ್ನ ಅಂಗೈಗಳಲ್ಲೂ ಕೂದಲು ಬೆಳೆದಿಲ್ಲವೇಕೆ?' ಎಂದು ಪ್ರಶ್ನಿಸಿದನು. ಅದಕ್ಕೆ ಬೀರಬಲ್ಲನು - ಮಹಾಪ್ರಭು ನೀವು ಪದೇ ಪದೇ ನನ್ನ ಪ್ರತಿಭೆ, ಪಾಂಡಿತ್ಯವನ್ನು ಮೆಚ್ಚಿ ಪ್ರಶಂಸಿಸಿ ಬಹುಮಾನಗಳನ್ನು ನೀಡುತ್ತಲೇ ಇರುತ್ತೀರಿ. ಹಾಗಾಗಿ ಆ ಬಹುಮಾನಗಳನ್ನು ಪಡೆದೂ ಪಡೆದೂ ನನ್ನ ಅಂಗೈಯಲ್ಲೂ ಕೂದಲು ಬೆಳೆಯಲು ಸಾಧ್ಯವಾಗಿಲ್ಲ' ಎಂದನು. ಆಗ ಅಕ್ಬರನು ಅದೂ ಸರಿಯೇ, ಆದರೆ ಇಲ್ಲಿರುವ ಸಭಾಸದಸ್ಯರ ಕೈಯಲ್ಲೂ ಕೂದಲಿಲಲ್ಲ.

ಇದಕ್ಕೇನು ಹೇಳುತ್ತೀಯಾ?" ಎಂದನು. ಬೀರಬಲ್ಲನು -
'ಮಹಾಪ್ರಭು ನೀವು ನನಗೆ ಮೇಲಿಂದ ಮೇಲೆ ನೀಡುವ
ಬಹುಮಾನಗಳನ್ನು ಕಂಡು ಸಹಿಸಲಾಗದೆ ಸದಸ್ಯರು
ಹೊಟ್ಟೆಕಿಚ್ಚಿನಿಂದ ತಮ್ಮ ಎರಡೂ ಅಂಗೈಗಳನ್ನು ಬಲವಾಗಿ
ತೀಡಿಕೊಳ್ಳುವುದರಿಂದ ಅವರ ಅಂಗೈಗಳಲ್ಲೂ ಕೂದಲುಗಳು
ಬೆಳೆಯಲು ಸಾಧ್ಯವಾಗಿಲ್ಲ' ಎಂದನು.
ಉತ್ತರ ಕೇಳಿದ ಅಕ್ಷರನು ಬೆರಗಾದನು.

# ನಮ್ಮ ಬಲ

**ಚಟುವಟಿಕೆಗಳು**

**ಓದುವಿಕೆ**

ಮೊದಲಿಗೆ ಮಕ್ಕಳು ವೈಯಕ್ತಿಕವಾಗಿ ಮೌನವಾಗಿ ಪದ್ಯವನ್ನು ಓದುವರು. ಪದ್ಯದಲ್ಲಿ ಬಂದಿರುವ ಕಠಿಣ ಪದಗಳ ಅರ್ಥವನ್ನು ಪದಕೋಶದ ಸಹಾಯದಿಂದ ಕಂಡುಹಿಡಿಯಲು ಅಧ್ಯಾಪಕರು ಸಹಕರಿಸುವುದು. ಹಾಗೆಯೇ ಪ್ರಾಸ ಪದಗಳು, ವಿರೋಧಾರ್ಥ ಪದಗಳನ್ನು ಗುರುತಿಸುವುದು. ಪದ್ಯವನ್ನು ಗಟ್ಟಿಯಾಗಿ ಓದಲು ಹೇಳುವುದು. ಈ ಮೂಲಕ ತಪ್ಪುಗಳನ್ನು ತಿದ್ದಲು ಸಹಕರಿಸುವುದು. ಪದ್ಯದ ಪ್ರಧಾನ ಆಶಯವಾದ ದೇಶಭಕ್ತಿಯ ಕುರಿತು ಮಾಹಿತಿಯನ್ನು ತಿಳಿಯುವುದು .

✍ **ಹಾಡಿರಿ**

ಮಕ್ಕಳು ವೈಯಕ್ತಿಕವಾಗಿ ನಮ್ಮಬಲ ಪದ್ಯವನ್ನು ಓದಲಿ. ಬಳಿಕ ಗುಂಪುಗಳಲ್ಲಿ ಕುಳಿತು ಆ ಕವಿತೆಗೆ ಸೂಕ್ತವಾದ ರಾಗ, ತಾಳ, ಲಯವನ್ನು ಕಂಡುಕೊಳ್ಳಲಿ. ಅನಂತರ ಪ್ರತಿಯೊಂದು ಗುಂಪುಗಳು ರಾಗ, ತಾಳದೊಂದಿಗೆ ಹಾಡಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯ ಮಾಡುವುದು . ಬಳಿಕ ಅಧ್ಯಾಪಕರು ಪದ್ಯವನ್ನು ರಾಗವಾಗಿ ಹಾಡುವ ಮೂಲಕ ಪದ್ಯದ ಪ್ರಧಾನ ಆಶಯ ಮಕ್ಕಳಿಗೆ ತಿಳಿಯುವಂತೆ ಮಾಡುವುದು.

**ಸೂಚಕಗಳು**

1. ರಾಗ ತಾಳ ಲಯಬದ್ಧವಾಗಿ ಹಾಡುವುದು.
2. ಎಲ್ಲರ ಭಾಗವಹಿಸುವಿಕೆ.
3. ಭಾವಪೂರ್ಣವಾಗಿ ಹಾಡುವುದು.
4. ಉಚ್ಚಾರ ಸ್ಪಷ್ಟತೆಯೊಂದಿಗೆ ಹಾಡುವುದು.

✍ **ಪ್ರಾಸಪದಗಳನ್ನು ಗುರುತಿಸಿರಿ**

ಪ್ರಾಸ ಪದಗಳ ಬಳಕೆಯು ಒಂದು ಕವಿತೆಯ ಅಥವಾ ಪದ್ಯದ ಸೌಂದರ್ಯವನ್ನು ಹೆಚ್ಚಿಸುತ್ತದೆ. ಪದ್ಯಕ್ಕೆ ಗೇಯತೆಯನ್ನು ನೀಡುವಲ್ಲಿ ಪ್ರಾಸ ಪದಗಳು ಸಹಾಯಕವಾಗುತ್ತವೆ. ವಿದ್ಯಾರ್ಥಿಗಳಲ್ಲಿ ಪ್ರಾಸ ಪದಗಳನ್ನು ಗುರುತಿಸುವ ಮತ್ತು ಪ್ರಯೋಗಿಸುವ ಸಾಮರ್ಥ್ಯಗಳನ್ನು ಬೆಳೆಸುವ ಉದ್ದೇಶದಿಂದ ಈ ಚಟುವಟಿಕೆಯನ್ನು ನೀಡಲಾಗಿದೆ. ಕವಿತೆಯಲ್ಲಿ ಬಂದಿರುವ ಅಂತ್ಯಪ್ರಾಸ ಪದಗಳನ್ನು ಕಂಡುಹಿಡಿದು ಬರೆಯಲಿ.

- ಕೆಂಗಿಡಿ - ನೂರ್ಮಡಿ
- ಹೆಚ್ಚಲಿ - ಮೆಚ್ಚಲಿ
- ಸಮರಕೆ - ತಿಮರಕೆ
- ಸೈನಿಕ - ವೈಣಿಕ
- ಹಿಂಬದಿ - ನೆಮ್ಮದಿ

✍ **ಹೋಲಿಸಿ ಬರೆಯಿರಿ**

ಪಾಠ ಪುಸ್ತಕದಲ್ಲಿ ನಮ್ಮ ಬಲ ಕವಿತೆಯನ್ನು ಕೊಡಲಾಗಿದೆ. ಹಾಗೆಯೇ ಚಟುವಟಿಕೆಯಲ್ಲಿ ಕುವೆಂಪುರವರ 'ಭರತ ಭೂಮಿ ನನ್ನ ತಾಯಿ' ಎಂಬ ಪದ್ಯವನ್ನು ಕೊಡಲಾಗಿದೆ. ಕೆಲವೊಂದು ಆಶಯಗ್ರಹಣ ಪ್ರಶ್ನೆಗಳನ್ನು ಕೇಳುವ ಮೂಲಕ ಮಕ್ಕಳಲ್ಲಿ ಪದ್ಯದ ಆಶಯ ತಿಳಿಯುವಂತೆ ಮಾಡುವುದು.ಅನಂತರ ಪದ್ಯದಲ್ಲಿ ಬರುವ ಸಾಮ್ಯ ಮತ್ತು ವ್ಯತ್ಯಾಸಗಳನ್ನು ಗುರುತಿಸಲು ಹೇಳುವುದು.

**ಮೌಲ್ಯನಿರ್ಣಯ ಸೂಚಕಗಳು**

❒ ಎರಡು ಕವಿತೆಗಳ ಆಶಯಗಳ ಸಾಮ್ಯ ವ್ಯತ್ಯಾಸಗಳನ್ನು ಕಂಡುಹಿಡಿದು ಬರೆಯಲಾಗಿದೆ.
❒ ಕವಿತೆಗಳ ರಚನಾ ಶೈಲಿಗಳನ್ನು ಹೋಲಿಸಿ ಬರೆಯಲಾಗಿದೆ.
❒ ಆಶಯಗಳನ್ನು ಕ್ರಮೀಕರಿಸಿ ಬರೆಯಲಾಗಿದೆ.
❒ ತನ್ನದೇ ಆದ ಶೈಲಿಯಲ್ಲಿ ಬರೆಯಲಾಗಿದೆ.
❒ ಅಕ್ಷರ, ಪದ, ವಾಕ್ಯ ಇವೇ ಮೊದಲಾದ ಭಾಷಾ ಘಟಕಗಳನ್ನು ಸೂಕ್ತವಾಗಿ ಬಳಸಲಾಗಿದೆ.

**ಸಾಮ್ಯ**

☛ 'ನಮ್ಮ ಬಲ' ಮತ್ತು 'ಭರತ ಭೂಮಿ ನನ್ನ ತಾಯಿ' ಪದ್ಯಗಳು ದೇಶಭಕ್ತಿ ಗೀತೆಗಳಾಗಿವೆ.
☛ ಎರಡು ಪದ್ಯಗಳನ್ನು ರಾಗ ತಾಳ ಲಯಬದ್ಧವಾಗಿ ಹಾಡಬಹುದು.
☛ ಎರಡು ಪದ್ಯಗಳಲ್ಲಿ ಅಂತ್ಯಪ್ರಾಸವು ಕಂಡುಬರುತ್ತದೆ
☛ ದ್ವೇಷ ಮರೆತು ಒಗ್ಗಟ್ಟಿನಿಂದ ಎಲ್ಲರೂ ಜೊತೆಗೂಡಿ ಬಾಳಬೇಕೆಂಬ ಆಶಯ ಎರಡು ಕವಿತೆಗಳಲ್ಲಿದೆ.

**ವ್ಯತ್ಯಾಸಗಳು**

☛ ನಮ್ಮ ಬಲ ಪದ್ಯದಲ್ಲಿ ಕಾಶ್ಮೀರದಲ್ಲಿ ಸೈನಿಕರು ವೀರಾವೇಶದಿಂದ ಹೋರಾಡುವ ಸಾಹಸಗಾಥೆಯನ್ನು ನೀಡಿದರೆ ಭರತ ಭೂಮಿ ನನ್ನ ತಾಯಿ ಪದ್ಯದಲ್ಲಿ ಭರತ ಭೂಮಿಯ ಹಿರಿಮೆಯ ವರ್ಣನೆಯನ್ನು ಕಾಣಬಹುದು.

✍ **ಆಶಯ ಬರೆಯಿರಿ**

ಈ ಚಟುವಟಿಕೆಯು ಪದ್ಯದ ಆಶಯಗ್ರಹಣಕ್ಕಾಗಿರುವ ಚಟುವಟಿಕೆಯಾಗಿದೆ. ಮಕ್ಕಳಿಗೆ ಪದ್ಯ ಭಾಗವು ಎಷ್ಟು ಅರ್ಥವಾಗಿದೆ ಎಂದು ತಿಳಿಯಲು ಇದು ಸಹಾಯಕವಾಗಿದೆ. ಪದ್ಯ ಭಾಗವನ್ನು ಒಂದೆರಡು ಸಲ ಓದಿ ಅರ್ಥೈಸಿ ಕೊಂಡು ಆಶಯ ಬರೆಯಲಿ. ಆಶಯ ಸ್ಪಷ್ಟತೆ, ವಾಕ್ಯ ರಚನಾ ಕ್ರಮ, ಲೇಖನ ಚಿಹ್ನೆಗಳ ಬಳಕೆ ಮೊದಲಾದವುಗಳಿಗೆ ಪ್ರಾಧಾನ್ಯವನ್ನು ನೀಡಬೇಕು. ಅಗತ್ಯವಿರುವಲ್ಲಿ ಅಧ್ಯಾಪಕರು ಸಹಾಯ ಮಾಡುವುದು.

**ಮೌಲ್ಯಮಾಪನ ಸೂಚಕಗಳು**

- ❒ ಕವಿತೆಯ ಆಶಯವನ್ನು ಸಮಗ್ರವಾಗಿ ಬರೆಯಲಾಗಿದೆ.
- ❒ ಆಶಯವನ್ನು ಅನುಕ್ರಮವಾಗಿ ಬರೆಯಲಾಗಿದೆ.
- ❒ ಭಾಷಾ ನಿಯಮಗಳಿಗನುಸಾರವಾಗಿ ಸೂಕ್ತರೀತಿಯಲ್ಲಿ ಬರೆಯಲಾಗಿದೆ.

**ಆಶಯ ಹೀಗೂ ಇರಬಹುದಲ್ಲವೇ**

ಬಿ.ಎ ಸನದಿಯವರು ಬರೆದ ನಮ್ಮ ಬಲಪದ್ಯವು ದೇಶಭಕ್ತಿ ಗೀತೆಯಾಗಿದೆ. ಹಾಡಲು ಪ್ರಾಸಬದ್ಧ ವಾಗಿದ್ದು ಸರಳವಾಗಿದೆ. ಭಾರತದ ಉತ್ತರದಲ್ಲಿರುವ ಪರ್ವತ ಶ್ರೇಣಿಗಳು ನಮ್ಮ ದೇಶವನ್ನು ಅನ್ಯರಾಷ್ಟ್ರಗಳಿಂದ ರಕ್ಷಣೆಯನ್ನು ನೀಡುತ್ತವೆ. ಪ್ರಾಕೃತಿಕವಾಗಿರುವ ಈ ಕೋಟೆಯನ್ನು ಮೆಟ್ಟಿ ಅಲ್ಲಿಂದ ಶತ್ರು ರಾಷ್ಟ್ರದ ಸೈನಿಕರು ಕಾಶ್ಮೀರದ ಕಣಿವೆಯಲ್ಲಿ ಆಗಾಗ ಧಾಳಿ ಮಾಡುವುದನ್ನು ನಮ್ಮ ಸೈನಿಕರು ಹಿಮ್ಮೆಟ್ಟಿಸುವ ವಿಧಾನವನ್ನು ಕವಿತೆಯಲ್ಲಿ ತಿಳಿಸಲಾಗಿದೆ.ಪೂರ್ಣ ಪ್ರಮಾಣದಲ್ಲಿ ನಮ್ಮ ಸೈನಿಕರು ಧೈರ್ಯದಿಂದ ಶತ್ರು ಸೈನಿಕರನ್ನು ಹೆಮ್ಮೆಟ್ಟಿಸುವಲ್ಲಿ ಸಫಲರಾಗುತ್ತಾರೆ. ಎಲ್ಲ ಸೈನಿಕರು ಎದ್ದುನಿಂತು ರಣಕಹಳೆ ಮೊಳಗಿಸಿದರೆ ನಮ್ಮ ಸೈನ್ಯ ಬಲವು ನೂರು ಮಡಿಯಾಗಿ ಶಕ್ತಿ ತುಂಬಿ ಶತ್ರು ಸೈನ್ಯವನ್ನು ನಾಶಗೊಳಿಸಬಲ್ಲದು. ಯಾವುದೇ ಕಾರ್ಯಕ್ಷೇತ್ರದಲ್ಲಿ ಆಗಲಿ ಮುಖ್ಯವಾಗಿ ನಮ್ಮ ದೇಶವು ಪ್ರಗತಿಯನ್ನು ಕಾಣಬೇಕೆಂದು ಕವಿ ಆಶಿಸುತ್ತಾರೆ. ನಾವು ಮಾಡುವ ದುಡಿಮೆ ಕೆಲಸ ಕಾರ್ಯಗಳಿಗೆ ದೈವ ಬಲ ಎಂದಿಗೂ ಇದ್ದೇ ಇರುತ್ತದೆ. ಭಾರತದ ಉದ್ದಗಲಕ್ಕೂ ವಾಸಿಸುತ್ತಿರುವ ವಿವಿಧ ಕಸುಬುಗಳನ್ನು ಮಾಡುವ ರೈತರು ಕೂಲಿ ಕೆಲಸಗಾರರು ಬೇರೆ ಬೇರೆ ಕೆಲಸ ಕಸುಬುಗಳನ್ನು ಮಾಡುವ ಎಲ್ಲರೂ ಸೈನಿಕರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿದಾಗ ನಮ್ಮ ದೇಶದಲ್ಲಿ ಶಾಂತಿ ನೆಮ್ಮದಿ ತಲೆ ನಿಲ್ಲುತ್ತದೆ.

ಹಿಮಾಲಯದ ತಪ್ಪಲಿನ ಹಿಮದ ರಾಶಿಯಲ್ಲಿ ನಿಂತು ನಮ್ಮ ಸೈನಿಕರು ಶತ್ರು ಸೈನ್ಯವನ್ನು ಹಿಮ್ಮೆಟ್ಟಿಸುವುದು ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟು ತಾಯಿ ಭಾರತೀಯ ರಕ್ಷಣೆಯನ್ನು ಮಾಡಲು ನಿಂತಿರುವುದು ಹೆಮ್ಮೆಯ ವಿಷಯವಾಗಿದೆ. ಗೆಲುವು ಸಿಗುವಲ್ಲಿವರೆಗೆ ಹಿಂತಿರುಗಿ ನೋಡುವುದಿಲ್ಲ ದೇಶಪ್ರೇಮ ದಿಂದ ನಮ್ಮ ಸೈನಿಕರು ಶತ್ರು ಸೈನ್ಯವನ್ನು ಹೆಮ್ಮೆಟ್ಟಿಸಿ ಭಾರತೀಯರನ್ನು ರಕ್ಷಣೆ ಮಾಡುವ ಮಹತ್ತರವಾದ ಕಾರ್ಯವನ್ನು ಮಾಡುತ್ತಾರೆ.

✍ **ಪತ್ರಿಕಾ ವರದಿ**

ಕಾರ್ಯಕ್ರಮವೊಂದರ ವಾರ್ತೆಯನ್ನು ಸೂಕ್ತ ರೀತಿಯಲ್ಲಿ ರಚಿಸುವ ನೈಪುಣ್ಯ ಮಕ್ಕಳಿಗೆ ಸಿಗಲು ಈ ಚಟುವಟಿಕೆಯನ್ನು ನೀಡಲಾಗಿದೆ. ನೀರಜ್ ಚೋಪ್ರಾ ರವರ ಕುರಿತು ನೀಡಿದ ವಿವರಗಳನ್ನು ಮಕ್ಕಳು ತಿಳಿದುಕೊಳ್ಳಲಿ. ಆನಂತರ ಗ್ರೂಪಿನಲ್ಲಿ ಚರ್ಚಿಸಿ ಉತ್ತಮಪಡಿಸಲಿ. ಸೂಚಕಗಳ ಆಧಾರದಲ್ಲಿ ಸ್ವ ಮೌಲ್ಯಮಾಪನ ಮಾಡಿ ಪರಿಷ್ಕರಿಸಲಿ.

**ಸೂಚಕಗಳು**

- ❒ ವಾರ್ತೆಯು ಸೂಕ್ತವಾದ ಆಕರ್ಷಕವಾದ ಶೀರ್ಷಿಕೆಯನ್ನು ಹೊಂದಿರಬೇಕು.
- ❒ ವಾರ್ತೆಯ ಎಲ್ಲಾ ವಿವರಗಳು ಸಂಕ್ಷಿಪ್ತವಾಗಿರಬೇಕು.
- ❒ ವಿವರಗಳು ವಸ್ತುನಿಷ್ಠ ಮತ್ತು ಸ್ಪಷ್ಟವಾಗಿರಬೇಕು.
- ❒ ಅದರಲ್ಲಿರುವ ಭಾಷಾ ಘಟಕಗಳನ್ನು ತನ್ನದೇ ಆದ ಶೈಲಿಯಲ್ಲಿ ಬಳಸಬೇಕು.
- ❒ ಘಟನೆಗಳ ಕ್ರಮೀಕರಣ

❒ ಭಾಷಾ ಪ್ರಯೋಗ (ಅಕ್ಷರ, ಪದ, ವಾಕ್ಯ, ವ್ಯಾಕರಣ, ಲೇಖನ ಚಿಹ್ನೆ)

ಅಧ್ಯಾಪಕರು ತಾವು ಸ್ವತಃ ರಚಿಸಿದ ವರದಿಯನ್ನು ಚಾರ್ಟಿನಲ್ಲಿ ಬರೆದು ಪ್ರದರ್ಶಿಸಲಿ.

**ಪತ್ರಿಕಾ ವರದಿಯು ಹೀಗೂ ಇರಬಹುದಲ್ಲವೇ**

**ಜಾವಲಿನ್ ನಲ್ಲಿ ಭಾರತಕ್ಕೆ ಚಿನ್ನ**

ದೆಹಲಿ : ಜಪಾನಿನ ಟೋಕಿಯೋದಲ್ಲಿ 2021 ರಲ್ಲಿ ನಡೆದ ಒಲಿಂಪಿಕ್ಸ್ ಕ್ರೀಡೋತ್ಸವದಲ್ಲಿ ನೀರಾಜ್ ಚೋಪ್ರಾ ಅವರು ಚಿನ್ನದ ಪದಕವನ್ನು ಪಡೆದಿದ್ದಾರೆ.ಇವರು ಹರಿಯಾಣ ರಾಜ್ಯದ ಪಾಣಿಪತ್ ನಲ್ಲಿ 1997ರ ಡಿಸೆಂಬರ್ 24ರಂದು ಜನಿಸಿದ್ದಾರೆ. ಕ್ರೀಡಾ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗಳನ್ನು ಒಂದರ ಮೇಲೊಂದರಂತೆ ಮಾಡುತ್ತಾ ಬಂದ ಇವರಿಗೆ ಸಿಕ್ಕಿದ ಪ್ರಶಸ್ತಿಗಳು ಹಲವಾರು, ಅವುಗಳಲ್ಲಿ 2016ರಲ್ಲಿ ವಿಶ್ವ ಚಾಂಪಿಯನ್ಶಿಪ್ ನಲ್ಲಿ ಚಿನ್ನದ ಪದಕ 2018ರಲ್ಲಿ ಏಷ್ಯನ್ ಗೇಮ್ಸ್ ನಲ್ಲಿ ಚಿನ್ನದ ಪದಕ ಹಾಗೂ 2021 ರಲ್ಲಿ ಒಲಿಂಪಿಕ್ಸ್‌ನಲ್ಲಿ ಪಡೆದ ಚಿನ್ನದ ಪದಕ ಇದು ಚೋಪ್ರಾರವರ ಸಾಧನೆಯನ್ನು ಎತ್ತಿಹಿಡಿಯುತ್ತದೆ.

**ಸಂಗ್ರಹಿಸಿರಿ**

ದೇಶಭಕ್ತಿ ಗೀತೆಗಳನ್ನು ಸಂಗ್ರಹಿಸಿ ಸಂಚಿಕೆಯೊಂದನ್ನು ತಯಾರಿಸಲು ಸೂಚಿಸುವುದು.

**ನಾವೆಲ್ಲ ಭಾರತೀಯರು**

ನಾವೆಲ್ಲ ಭಾರತೀಯರೆಂಬ ಭಾವ ಮೂಡಲಿ
ನಾವೆಲ್ಲ ಮನುಜರೊಂದೆ ಎಂಬ ಭಾವ ಮೂಡಲಿ
ನಮ್ಮಲ್ಲಿ ಭೇದಭಾವ ಪ್ರಭು ದೂರವಾಗಲಿ.//2//
ಒಂದು ತೋಟದಲ್ಲಿ ಹಲವು ಬಣ್ಣ ಬಣ್ಣದ ಹೂವುಗಳು
ಅದರಂತೆ ನಮ್ಮ ದೇಶದಲ್ಲಿ ಹಲವು ಮತಗಳು
ಆ ಹೂಗಳಂತೆ ಮತಗಳು ಮಕರಂದ ಬೀರಲಿ
ಆ ಹೂಗಳಂತೆ ಮತಗಳು ಸದ್ಭಾವ ಬೀರಲಿ
ನಮ್ಮಲ್ಲಿ ಭೇದ ಭಾವ ಪ್ರಭು ದೂರವಾಗಲಿ.
ನಾವು ಮನೆಯ ಕಟ್ಟುವಾಗ ಭೂಮಿ ಜಾತಿ ಕೇಳಿತೆ
ನಾವು ಶ್ವಾಸ ಎಳೆಯುವಾಗ ಗಾಳಿ ಕುಲವ ಕೇಳಿತೆ //2//
ಈ ಸೃಷ್ಟಿಯಲ್ಲಿ ಸರ್ವರೂ ಸಮನಾಗಿ ಬಾಳಲಿ
ನಮ್ಮಲ್ಲಿ ಭೇದಭಾವ ಪ್ರಭು ದೂರವಾಗಲಿ.
ಮಣ್ಣಿನಿಂದಾದ ಆದ ಮಡಕೆ ಮಣ್ಣಿಗನ್ಯವೇ
ಚಿನ್ನದಿಂದ ಆದ ಒಡವೆ ಚಿನ್ನಗನ್ಯವೇ//2//
ನಿನ್ನಿಂದ ಆದ ಜೀವರು ನಿನ್ನಂತೆ ಕಾಣಲಿ
ನಮ್ಮಲ್ಲಿ ಭೇದ ಭಾವ ಪ್ರಭು ದೂರವಾಗಲಿ.
ದಯವೇ ಧರ್ಮವೆಂದು ಸಾರಿದಂತ ನಾಡಿದು
ಜಗಕ್ಕೆ ಶಾಂತಿ ಪಾಠ ಹೇಳಿದಂತ ನಾಡಿದು//2//
ಈ ನಾಡಿನಲ್ಲಿ ಶಾಂತಿಯು ಸ್ಥಿರವಾಗಿ ನೆಲಸಲಿ
ನಮ್ಮಲ್ಲಿ ಭೇದ ಭಾವ ಪ್ರಭು ದೂರವಾಗಲಿ.
ಆ ಸೂರ್ಯನಂತೆ ಸಂತರು ಜಗ ಬೆಳಗಿ ಹೋದರು
ಆ ವರುಣನಂತೆ ಜ್ಞಾನವನ್ನು ಸುರಿದು ಹೋದರು
ಗುರುಬಸವ ನಿಮ್ಮ ಬೋಧೆ ಮನದಲ್ಲಿ ನಿಲ್ಲಲಿ
ಗುರುಬಸವ ನಿಮ್ಮ ಬೋಧೆ ಜನರಲ್ಲಿ ನಿಲ್ಲಲಿ
ನಮ್ಮಲ್ಲಿ ಬೇಧಭಾವ ಪ್ರಭು ದೂರವಾಗಲಿ.

**ನನ್ನ ದೇಶ ನನ್ನ ಉಸಿರು**

ನನ್ನ ದೇಶ ನನ್ನ ಉಸಿರು ನನ್ನ ಪ್ರಾಣ ಭಾರತ
ಶಾಂತಿ, ಸಹಬಾಳ್ವೆ, ವಿಶ್ವಕೆಲ್ಲ ಸಾರುತ
ಇಲ್ಲಿ ಒಮ್ಮೆ ಜನ್ಮ ತಾಳಲು
ಪುಣ್ಯವೊ ಧನ್ಯವೊ
ಭಾರತ ಭಾರತ ಭಾರತ
ಎನ್ನಲು ಜೀವನ ಸಾರ್ಥಕ

ನಾನು ಭಾರತೀಯನೆಂದು ಗರ್ವದಿಂದ ಹೇಳುನೀ
ಹತ್ತು ಹಲವು ಧರ್ಮವ ಒಂದೇ ಎಂದು ಸಾರುವ
ಪುಣ್ಯ ಭೂಮಿ ನನ್ನ ದೇಶ ಭುವಿಯ ಸ್ವರ್ಗವು
ಭುವಿಯ ಸ್ವರ್ಗವು ..
ಇಲ್ಲಿ ಒಮ್ಮೆ ಜನ್ಮ ತಾಳಲು
ಪುಣ್ಯವೊ ಧನ್ಯವೊ
ಹೇಳು ನೀನು, ಹೆಮ್ಮೆಯಿಂದ, ಸಾರುತ
ವಿಶ್ವಕೆಲ್ಲ ಗುರುವು ನನ್ನ ಭಾರತ

# ರಾಣಿ ಚೆನ್ನಮ್ಮ

**ಓದುವಿಕೆ**

ಮೊದಲಿಗೆ ಮಕ್ಕಳು ವೈಯಕ್ತಿಕವಾಗಿ ಮೌನವಾಗಿ ನಾಟಕವನ್ನು ಓದುವರು. ನಾಟಕದಲ್ಲಿ ಬಂದಿರುವ ಕಠಿಣ ಪದಗಳ ಅರ್ಥವನ್ನು ಪದಕೋಶದ ಸಹಾಯದಿಂದ ಕಂಡುಹಿಡಿಯಲು ಅಧ್ಯಾಪಕರು ಸಹಕರಿಸುವುದು. ಹಾಗೆಯೇ ಸಮಾನಾರ್ಥಕ ಪದಗಳು, ವಿರೋಧಾರ್ಥ ಪದಗಳನ್ನು ಗುರುತಿಸುವುದು. ನಾಟಕವನ್ನು ಗಟ್ಟಿಯಾಗಿ ಓದಲು ಹೇಳುವುದು. ಈ ಮೂಲಕ ತಪ್ಪುಗಳನ್ನು ತಿದ್ದಲು ಸಹಕರಿಸುವುದು. ನಾಟಕದ ಪ್ರಧಾನ ಆಶಯವಾದ ಸ್ವಾಭಿಮಾನದ ಕುರಿತು ಮಾಹಿತಿಯನ್ನು ತಿಳಿಯುವುದು .

**ಚಟುವಟಿಕೆಗಳು**

✍ **ಅಭಿನಯಿಸಿರಿ**

ರಾಣಿ ಚೆನ್ನಮ್ಮ ನಾಟಕದಲ್ಲಿ ಬರುವ ಪಾತ್ರಗಳನ್ನು ಕಂಡುಕೊಂಡು ನಾಟಕವನ್ನು ಅಭಿನಯಿಸಲು ಮಕ್ಕಳಿಗೆ ಪ್ರೋತ್ಸಾಹಿಸುವುದು. ಅದಕ್ಕಾಗಿ ತರಗತಿಯಲ್ಲಿ ಮಕ್ಕಳನ್ನು ಗುಂಪು ಮಾಡಿ ಪಾತ್ರಗಳನ್ನು ಹಂಚಿಕೊಂಡು ನಾಟಕ ಮಾಡಿಸುವುದು. ಬಳಿಕ ಅಭಿನಯಿಸುವವರನ್ನು ಆಯ್ಕೆ ಮಾಡಬೇಕು. ವೇದಿಕೆಯಲ್ಲಿ ಪ್ರದರ್ಶನ ಮಾಡುವುದಿದ್ದರೆ ಅಧ್ಯಾಪಕರು ಅಗತ್ಯವಿರುವ ಸೂಚನೆಗಳನ್ನು ಮಕ್ಕಳಿಗೆ ನೀಡಬೇಕು .

**ನಾಟಕ ಮಾಡುವುದಿದ್ದರೆ ಅದಕ್ಕೆ ಇರಬೇಕಾದ ಪೂರ್ವ ತಯಾರಿಗಳು**

- ಕಥಾವಸ್ತು
- ಸಂಭಾಷಣೆ
- ವೇದಿಕೆ
- ಹಿಮ್ಮೇಳ
- ರಂಗ ಸಜ್ಜಿಕೆ

- ದೃಶ್ಯ ಸಂಯೋಜನೆ
- ಧ್ವನಿ ಮತ್ತು ಬೆಳಕು
- ವೇಷಭೂಷಣ
- ಪಾತ್ರವರ್ಗ

ಇತ್ಯಾದಿ

ಪೂರ್ವ ತಯಾರಿಯನ್ನು ಮಾಡಿಕೊಂಡು ನಾಟಕವನ್ನು ಅಭಿನಯಿಸಲಿ.

### ✍ ಪಾತ್ರ ಚಿತ್ರಣ

ಈ ಚಟುವಟಿಕೆಯ ಮೂಲಕ ಮಕ್ಕಳ ಸೃಜನಾತ್ಮಕತೆಯನ್ನು ಬೆಳೆಸಲು ಹೆಚ್ಚಿನ ಒತ್ತು ನೀಡಬಹುದು. ನಾಟಕದಲ್ಲಿ ಬಂದಿರುವ ಪಾತ್ರಗಳ ಬಗ್ಗೆ ತಿಳಿದುಕೊಳ್ಳಲಿ. ಬಳಿಕ ಇಷ್ಟವಾದ ಪಾತ್ರದ ಬಗ್ಗೆ ಬರೆದು ಮಂಡಿಸಲಿ. ಮೊದಲ ಘಟಕದಲ್ಲಿ ಪಾತ್ರಚಿತ್ರಣದ ಕುರಿತಾದ ಹೆಚ್ಚಿನ ಮಾಹಿತಿಗಳು ಲಭ್ಯವಿದೆ.

ಈ ಚಟುವಟಿಕೆಗೆ ಹೋಗುವ ಮೊದಲು ಕಿತ್ತೂರು ಚೆನ್ನಮ್ಮಳ ಜೀವನ ಚರಿತ್ರೆ ಕುರಿತಾದ ಕಿರು ಚಿತ್ರಗಳನ್ನು ತೋರಿಸಬಹುದು.

**ಪಾತ್ರ ಚಿತ್ರಣ ಹೀಗೂ ಇರಬಹುದಲ್ಲವೇ**

**ಕಿತ್ತೂರು ರಾಣಿ ಚೆನ್ನಮ್ಮ**

ಕಿತ್ತೂರಿನ ರಾಣಿ ಚೆನ್ನಮ್ಮ (1978-1829 ) ಕಿತ್ತೂರಿನ ದೇಸಾಯಿಗಳಲ್ಲಿ ಪ್ರಸಿದ್ಧನಾದ ಮಲ್ಲಸರ್ಜನ ಹಿರಿಯ ಹೆಂಡತಿ, ತನ್ನ ಪುಟ್ಟರಾಜ್ಯದ ಸ್ವಾತಂತ್ರ್ಯ ರಕ್ಷಣೆಗಾಗಿ ಬ್ರಿಟಿಷರ ದೊಡ್ಡ ಸೈನ್ಯದ ವಿರುದ್ಧ ಹೋರಾಡಿದ ವೀರ ಮಹಿಳೆ. ಚೆನ್ನಮ್ಮನಿಂದಾಗಿ ಕಿತ್ತೂರು ಪ್ರಸಿದ್ಧವಾಗಿದೆ.

ದೊರೆಯಾದ ಮಲ್ಲಸರ್ಜ ದೇಸಾಯಿಯ ಮರಣಾನಂತರ ಹಿರಿಯ ರಾಣಿಯಾದ ರುದ್ರಮ್ಮನ ಮಗ ಶಿವಲಿಂಗರುದ್ರಸರ್ಜನು ಸಿಂಹಾಸನವನ್ನೇರುತ್ತಾನೆ. ಶಿವಲಿಂಗ ರುದ್ರಸರ್ಜನು ಅಸಮರ್ಥ ಆಡಳಿತಗಾರನಾದುದರಿಂದ ರಾಣಿ ಚೆನ್ನಮ್ಮ ರಾಜ್ಯದ ಹೊಣೆಯನ್ನು ಹೊರುತ್ತಾಳೆ. ದೊರೆಗೆ ಮಕ್ಕಳಿಲ್ಲದಿದ್ದುದರಿಂದ ದೂರದ ಸಂಬಂಧಿ ಸವಾಯಿ ಮಲ್ಲಸರ್ಜನೆಂಬ ಬಾಲಕ ನನ್ನು ದತ್ತು ಪುತ್ರನನ್ನಾಗಿ ಸ್ವೀಕರಿಸಲಾಗುತ್ತದೆ. ಈ ರೀತಿ ದತ್ತು ಸ್ವೀಕಾರ ಪದ್ಧತಿಗೆ ಬ್ರಿಟಿಷರ ಅನುಮತಿ ಇರುವುದಿಲ್ಲ. ಆದುದರಿಂದ ಬ್ರಿಟಿಷರು ಇದನ್ನು ವಿರೋಧಿಸುತ್ತಾರೆ. ಚೆನ್ನಮ್ಮಲ್ಲಿ ಅಪಾರ ದೇಶಪ್ರೇಮವಿತ್ತು. ಅವಳು ಸಾಹಸಿಯಾಗಿದ್ದಳು. ಕುದುರೆ ಸವಾರಿ, ಕತ್ತಿವರಸೆ, ಬಿಲ್ವಿದ್ಯೆ ಮುಂತಾದ ಯುದ್ಧ ಕಲೆಗಳಲ್ಲಿ ಪ್ರಾವೀಣ್ಯವನ್ನು ಪಡೆದಿದ್ದಳು. ಬ್ರಿಟಿಷ್ ಅಧಿಕಾರಿ ಥ್ಯಾಕರೆಯ ಮಾತಿಗೆ ಮರುಳಾಗದೆ ತನ್ನ ಸಾಮ್ರಾಜ್ಯವನ್ನು ಉಳಿಸುವುದಕ್ಕಾಗಿ ಪಣ ತೊಡುತ್ತಾಳೆ. ಥ್ಯಾಕರೆಯನ್ನು ಮಾತುಗಳಲ್ಲಿ ಸೋಲಿಸಿ ಅಸ್ಥಾನದಿಂದ ಹೊರಹೋಗುವಂತೆ ಮಾಡುತ್ತಾಳೆ.

### ✍ ಬದಲಾಯಿಸಿ ಬರೆಯಿರಿ

**ಕಥೆ ಬರೆಯಿರಿ**

ರಾಣಿ ಚೆನ್ನಮ್ಮ ನಾಟಕವನ್ನು ಓದಿ ಅದರ ಆಶಯವನ್ನು ಮನನ ಮಾಡಿದ ನಂತರ ಈ ನಾಟಕವನ್ನು ಕಥಾ ರೂಪಕ್ಕೆ ಬರೆಯಲು ಮಕ್ಕಳಿಗೆ ಸೂಚಿಸುವುದು.

ಕಥೆಯನ್ನು ಬರೆಯುವ ಮೊದಲು ಗಮನಿಸಬೇಕಾದ ಅಂಶಗಳು

- ಆಶಯ ಸ್ಪಷ್ಟವಾಗಿರಬೇಕು
- ಭಾವನೆಗಳ ನೈಜತೆ ಇರಬೇಕು
- ಕಥೆಗೆ ಆರಂಭ, ಬೆಳವಣಿಗೆ ಮತ್ತು ಮುಕ್ತಾಯಗಳಿರಬೇಕು
- ಕಥೆಗೆ ಸೂಕ್ತ ಶೀರ್ಷಿಕೆ ಇರಬೇಕು.

ಮಕ್ಕಳು ಕಥೆಯನ್ನು ವೈಯುಕ್ತಿಕವಾಗಿ ಬರೆದು , ಮಂಡಿಸಲಿ. ಬಳಿಕ ಗುಂಪಿನಲ್ಲಿ ಉತ್ತಮ ಪಡಿಸಲಿ.
ಕೊನೆಗೆ ಅಧ್ಯಾಪಕರು ಕಥೆಯನ್ನು ಚಾರ್ಟ್ ನಲ್ಲಿ ಬರೆದು ಪ್ರದರ್ಶಿಸುವುದು

**ಕಥೆ ಹೀಗೂ ಇರಬಹುದಲ್ಲವೇ**

ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಕಾಕತಿ ಎಂಬ ಪುಟ್ಟ ಹಳ್ಳಿಯಲ್ಲಿ 1778ರ ಅಕ್ಟೋಬರ್ 28ರಂದು ದೇಸಾಯಿ ಧೂಳಪ್ಪ ಗೌಡ ಎಂಬವರ ಮಗಳಾಗಿ ಕಿತ್ತೂರು ಚೆನ್ನಮ್ಮ ಜನಿಸಿದಳು. ಚಿಕ್ಕಂದಿನಿಂದಲೇ ಕುದುರೆ ಸವಾರಿ, ಕತ್ತಿವರಸೆ, ಬಿಲ್ಲುಗಾರಿಕೆಯಲ್ಲಿ ತರಬೇತಿ ಪಡೆದಿದ್ದಳು .ದೇಸಾಯಿ ಮನೆತನದ ರಾಜ ಮಲ್ಲಸರ್ಜನು ಅವಳನ್ನು 15ನೇ ವಯಸ್ಸಿನಲ್ಲಿಯೇ ವಿವಾಹವಾದನು.
1782 ರಲ್ಲಿ ಮಲ್ಲಸರ್ಜ ದೇಸಾಯಿ ಕಿತ್ತೂರಿನ ಅರಸನಾಗುತ್ತಾನೆ. ಆತನ ಪತ್ನಿಯೆ ಚೆನ್ನಮ್ಮ. ಮಲ್ಲಸರ್ಜ ದೇಸಾಯಿಯ ಮರಣ ನಂತರ ಹಿರಿಯ ರಾಣಿಯ ಪುತ್ರನಾದ ಶಿವಲಿಂಗ ರುದ್ರಸರ್ಜನು ಸಿಂಹಾಸನವನ್ನೇರುತ್ತಾನೆ. ಶಿವಲಿಂಗ ರುದ್ರಸರ್ಜನು ಅಸಮರ್ಥ ಆಡಳಿತಗಾರ ನಾದುದರಿಂದ ರಾಣಿ ಚೆನ್ನಮ್ಮಳೇ ರಾಜ್ಯದ ಹೊಣೆಯನ್ನು ಹೊರಬೇಕಾಗುತ್ತದೆ. ಈ ಸಂದರ್ಭದಲ್ಲಿ ದೂರದ ಸಂಬಂಧಿ  ಮಲ್ಲಸರ್ಜನೆಂಬ ಬಾಲಕನನ್ನು ದತ್ತು ಸ್ವೀಕಾರ ಮಾಡಲಾಗುತ್ತದೆ. ಆಗ ಮಲ್ಲಸರ್ಜನೆಂಬ ಬಾಲಕನನ್ನು ದತ್ತು ಸ್ವೀಕಾರ ಮಾಡಿದ್ದರಿಂದ ಸಮಸ್ಯೆಯೊಂದು ಉದ್ಭವವಾಗುತ್ತದೆ .ಇದನ್ನು ವಿರೋಧಿಸುವ ಸಲುವಾಗಿ ಬ್ರಿಟಿಷ್ ಅಧಿಕಾರಿಯಾದ ಥ್ಯಾಕರೆಯು ಕಿತ್ತೂರು ಆಸ್ಥಾನಕ್ಕೆ  ಬರುತ್ತಾನೆ. ಭಾರತದಾದ್ಯಂತ ಬ್ರಿಟಿಷರ ಆಳ್ವಿಕೆ ಇರುತ್ತದೆ. ಆಸ್ಥಾನಕ್ಕೆ ಬಂದ ಥ್ಯಾಕರೆಯು ದೂತನ ಅನುಮತಿ ಪಡೆದು ರಾಜ್ಯದ ಪ್ರಧಾನಿಯನ್ನು ಭೇಟಿ ಮಾಡುತ್ತಾನೆ. ರಾಣಿಯವರನ್ನು ಕಾಣಬೇಕೆಂಬ ಆಕಾಂಕ್ಷೆಯಿಂದ ಬಂದೆ ಎಂದು ಪ್ರಧಾನಿಯವರಲ್ಲಿ ಅಸಭ್ಯ ರೀತಿಯಿಂದಲೇ ಮಾತನಾಡುತ್ತಾನೆ. ರಾಣಿಯ ನೇರ ಸಂದರ್ಶನಕ್ಕೆ ಅನುಮತಿ ಇಲ್ಲ. ಹಾಗಿದ್ದರೂ ನಿಮ್ಮ ಅಹವಾಲನ್ನು ನನ್ನಲ್ಲಿ ತಿಳಿಸಬಹುದೆಂದಾಗ ಥ್ಯಾಕರೆಯು ಸಿಟ್ಟಿನಿಂದ ರೊಚ್ಚಿಗೇಳುತ್ತಾನೆ. ನಾನು ರಾಣಿಯನ್ನು ಕಾಣುವ ಉದ್ದೇಶದಿಂದಲೇ ಇಲ್ಲಿಗೆ ಬಂದದ್ದು. ಇಲ್ಲಿ ಆಂಗ್ಲರೇ ಪರಮಾಧಿಕಾರಿಗಳು, ನಮ್ಮ ಅನುಮತಿ ಇಲ್ಲದೆ ದತ್ತು ಸ್ವೀಕಾರ ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತಾನೆ .
ಆಗ ಪ್ರಧಾನಿಯು , ಕಿತ್ತೂರು ಒಂದು ಸ್ವತಂತ್ರ ರಾಜ್ಯವಾಗುವುದರಿಂದ ದತ್ತು ಪಡೆಯಲು ನಿಮ್ಮ ಅನುಮತಿ ಬೇಕಿಲ್ಲವೆಂದಾಗ ಥ್ಯಾಕರೆಯು ಸಿಟ್ಟಿಗೆದ್ದು, ಮಹಾ ಯೋಧರ ಪಡೆಯೇ ನಮ್ಮ ಬಳಿ ಇದೆ. ನಮಗೆ ಸವಾಲು ಹಾಕುವುದೆಂದರೆ ಕೆಂಡಕ್ಕೆ ಕೈ ಹಾಕಿದ ಹಾಗೆ ಎಂದು ಘರ್ಜಿಸುತ್ತಾನೆ. ಇದಕ್ಕೆ ಉತ್ತರವಾಗಿ ಪ್ರಧಾನಿಯು ಹೀಗೆನ್ನುತ್ತಾನೆ. ಚೆನ್ನಮ್ಮ ಹಲವು ಯುದ್ಧ ವಿದ್ಯೆಗಳಲ್ಲಿ ಪಳಗಿದವಳು, ಅವಳನ್ನು ಎದುರಿಸಲು ನಿಮ್ಮಿಂದ ಸಾಧ್ಯವಿಲ್ಲ. ಅವಳ ಶೌರ್ಯ ಪರಾಕ್ರಮದ ಎದುರು  ಹೋರಾಡುವವರು ಈ ಭೂಮಿಯಲ್ಲಿ ಇನ್ನು ಹುಟ್ಟಿಯೇ ಇಲ್ಲ ಎನ್ನುತ್ತಾನೆ. ಆಗ ಥ್ಯಾಕರೆಯು ಅದೆಲ್ಲ ನನಗೆ ಗೊತ್ತಿಲ್ಲ ,ಕಪ್ಪ ಕಾಣಿಕೆ ಒಪ್ಪಿಸಿ ಶರಣಾಗತರಾಗುವುದಿದ್ದರೆ ಇಲ್ಲಿ ನಮ್ಮ ಅಡಿಯಾಳಾಗಿ ಜೀವಿಸಬಹುದು ಎಂದು ಹೇಳುತ್ತಾನೆ .ಈ ಸಂದರ್ಭದಲ್ಲಿ ಆಸ್ಥಾನವನ್ನು ಪ್ರವೇಶಿಸಿದ ಚೆನ್ನಮ್ಮಳು ಥ್ಯಾಕರೆಯಲ್ಲಿ ಗೌರವಾದರ ಪೂರ್ವಕವಾಗಿ ಮಾತನಾಡುತ್ತಾಳೆ .ಥ್ಯಾ ಕರೆಯು ತಾನು ಬಂದ ಉದ್ದೇಶವನ್ನು ತಿಳಿಸುತ್ತಾ ನೀವು ನಮ್ಮ ಮಾಂಡಲೀಕರು ನಿಮಗೆ ದತ್ತು ಪುತ್ರರನ್ನು ಸ್ವೀಕರಿಸುವ ಹಕ್ಕು ಇಲ್ಲ ಎಂದು ಹೇಳುತ್ತಾನೆ. ಆಗ ಚೆನ್ನಮ್ಮ, ನೀವು ಅತಿಥಿಗಳಾಗಿ ಬಂದವರು. ಭಾರತ ದೇಶದಾದ್ಯಂತ ಕೊಳ್ಳೆ ಹೊಡೆದು ಒಂದೊಂದೇ ಆಸ್ಥಾನವನ್ನು ಸ್ವಾಧೀನ ಪಡಿಸುತ್ತಾ ಬಂದಿದ್ದೀರಿ. ನಮ್ಮ ದೇಶವನ್ನೇ ಹಾಳು ಮಾಡಿದಿರಿ ಇಲ್ಲಿನ ಸಂಪತ್ತನ್ನು ದೋಚಿಕೊಂಡು ಹೋಗಿದ್ದೀರಿ.ನಾವಿಲ್ಲಿ ಸ್ವತಂತ್ರರಾಗಿದ್ದು ಕಪ್ಪ ಕಾಣಿಕೆಯನ್ನು ಕೊಡುವ ಪ್ರಶ್ನೆಯೇ ಇಲ್ಲ ಎಂದು ಖಡಾಖಂಡಿತವಾಗಿ ಹೇಳುತ್ತಾಳೆ. ಹೋಗಿ ಈ ಮಾತನ್ನು ನಿಮ್ಮ ವೈಸರಾಯಿಗೆ ತಿಳಿಸಿ ಎನ್ನುವಳು .ಅಗ ಥ್ಯಾಕರೆಯು ,ಇದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಕಪ್ಪ ಕಾಣಿಕೆಯನ್ನು ಒಪ್ಪಿಸಿದರೆ ಮಾತ್ರ ಇಲ್ಲಿ ಬದುಕಬಹುದು ಎನ್ನುತ್ತಾನೆ. ಕಪ್ಪ ಕಾಣಿಕೆಯನ್ನು ಕೊಡುವ ಪ್ರಶ್ನೆಯೇ ಇಲ್ಲ ಕಿತ್ತೂರು ಒಂದು ಸ್ವತಂತ್ರ ಸಂಸ್ಥಾನ. ಇದನ್ನು ಯಾರಿಗೂ ಬಿಟ್ಟುಕೊಡುವ ಪ್ರಶ್ನೆ ಇಲ್ಲ ಈಗ ನಿಮಗೆ ಜೀವದಾನ ಮಾಡಿದ್ದೇವೆ ಹೋಗಿ ಬದುಕಿಕೊಳ್ಳಿರಿ ಎಂದಾಗ ತ್ಯಾಕರೆಯು ಸಿಟ್ಟಿನಿಂದ ಎದ್ದು ನಿಮಗೆ ತಕ್ಕ ಶಾಸ್ತಿ ಮಾಡಿಯೇ ಮಾಡುತ್ತೇನೆಂದು ಸಿಟ್ಟಿನಿಂದ ಹೊರಟು ಹೋಗುವನು.ಆಗ ಅಲ್ಲಿ ಸೇರಿದ್ದ ಜನರೆಲ್ಲ ರಾಣಿ ಚೆನ್ನಮ್ಮಳಿಗೆ ಜಯವಾಗಲಿ ಎಂದು ಘೋಷಣೆಗಳನ್ನು ಕೂಗುತ್ತಾರೆ.

## ✍ ಜೋಡುನುಡಿ ಗುರುತಿಸಿರಿ

ಸಾಮಾನ್ಯವಾಗಿ ಮಾತುಗಳನ್ನಾಡುವಾಗ,
ಮತ್ತು ಬರವಣಿಗೆಗಳನ್ನು ಆಕರ್ಷಕವಾಗಿಸಲು ಜೋಡುನುಡಿಗಳನ್ನು ಬಳಸುತ್ತಾರೆ . ಬರವಣಿಗೆಯ ವಿವಿಧ ಸಂದರ್ಭಗಳಲ್ಲಿ ಜೋಡುನುಡಿಗಳನ್ನು ಬಳಸುವುದರಿಂದ ವಿಷಯಗಳು ಹೆಚ್ಚು ಅರ್ಥಪೂರ್ಣವಾಗಿ ಮನದಟ್ಟಾಗುವಂತೆ ಮಾಡಲು ಸಾಧ್ಯವಾಗುತ್ತದೆ.

ಉದಾಹರಣೆಗೆ

- ವೇಷ ಭೂಷಣ
- ಹಣ್ಣುಹಂಪಲು
- ನೋವು ನಲಿವು
- ಊರುಕೇರಿ
- ಕಪ್ಪ ಕಾಣಿಕೆ
- ಗಿಡಮರ
- ಕಾಡುಮೇಡು
- ತಿಂಡಿ ತೀರ್ಥ

ಇತ್ಯಾದಿ ...

## ✍ ಪದಜೋಡಣೆ ಮಾಡಿರಿ

ಇದೊಂದು ಸರಳ ಚಟುವಟಿಕೆಯಾಗಿದ್ದು ಪಾಠ ಭಾಗದಲ್ಲಿ ಬಂದ ಪದಗಳಲ್ಲಿರುವ ಅಕ್ಷರಗಳನ್ನು ಅಸ್ತವ್ಯಸ್ತವಾಗಿ ಕೊಡಲಾಗಿದೆ .

ಕೊಟ್ಟಿರುವ ಅಕ್ಷರಗಳನ್ನು ಕಂಡುಕೊಂಡು ಸರಿಯಾದ ಪದ ರಚಿಸಲಿ.

- ರಾಣಿ ಚೆನ್ನಮ್ಮ
- ಥ್ಯಾಕರೆ
- ದೇಶಪ್ರೇಮ
- ಪ್ರಧಾನಿ

## ✍ ಪತ್ರಲೇಖನ

ಆಧುನಿಕ ಸಂಪರ್ಕ ಸಾಧನಗಳಲ್ಲಿ ಒಂದಾದ ಪತ್ರಲೇಖನವು ಜನರ ಜೀವನದಲ್ಲಿ ಒಂದು ಪ್ರಮುಖ ಪಾತ್ರವಹಿಸಿಕೊಂಡದ್ದನ್ನು ಕಾಣಬಹುದು. ಈಗ ಸಂಪರ್ಕ ಸಾಧಿಸಲು ಬೇರೆ ಅನೇಕ ದಾರಿಗಳಿದ್ದರೂ ಪತ್ರ ಬರವಣಿಗೆಯು ಇಂದಿಗೂ ಸಹ ತನ್ನ ಪ್ರಾಧಾನ್ಯವನ್ನು ಉಳಿಸಿಕೊಂಡಿದೆ. ಜನಸಾಮಾನ್ಯರು ಬರವಣಿಗೆಯ ಮೂಲಕ ತಮ್ಮ ಅನಿಸಿಕೆಗಳನ್ನು ತಮ್ಮ ಬಂಧುಗಳಿಗೆ ಅಥವಾ ತಮ್ಮ ಇಷ್ಟ ಮಿತ್ರರಿಗೆ ತಿಳಿಸಲು, ವಿಚಾರ ವಿನಿಮಯ ಮಾಡಿಕೊಳ್ಳಲು ಒದಗಿ ಬರುವ ಅತ್ಯಂತ ಅಗ್ಗದ ಸಾಧನವೇ ಪತ್ರ .

ಸಾಕ್ಷರತೆ ಹೆಚ್ಚಿದಂತೆಲ್ಲ ಪತ್ರಲೇಖನದ ಮಹತ್ವವು ಹೆಚ್ಚಾಯಿತು. ಪತ್ರದ ಮೂಲಕ ಭಾವನೆಯನ್ನು ಇತರರಿಗೆ ತಿಳಿಸುವಾಗ ಅನೇಕ ಅಂಶಗಳನ್ನು ಗಮನಿಸಬೇಕು.

- ಪತ್ರದಲ್ಲಿ ಬರೆಯುವ ವಿಷಯವೂ ಸ್ಪಷ್ಟವಾಗಿರಬೇಕು.
- ಆಹ್ಲಾದಕರವಾಗಿರಬೇಕು.
- ಅಕ್ಷರಗಳು ಸುಂದರವಾಗಿರಬೇಕು.

**ಯಾವುದೇ ಪತ್ರವಾದರೂ ಪ್ರಮುಖವಾಗಿ ಆರು ಹಂತಗಳನ್ನು ಒಳಗೊಂಡಿರುತ್ತದೆ.**

1. ಪತ್ರ ಬರೆಯುವವರ ವಿಳಾಸ -ದಿನಾಂಕ
2. ಸಂಭೋಧನೆ
3. ವಿಷಯ ವಿಸ್ತಾರ
4. ಮುಕ್ತಾಯ
5. ಸಹಿ
6. ವಿಳಾಸ

ಪಾಠ ಭಾಗದಲ್ಲಿ ಕೊಟ್ಟಿರುವ ರಾಣಿ ಚೆನ್ನಮ್ಮ ನಾಟಕವನ್ನು ಓದಿದ ನಂತರ ರಾಣಿ ಚೆನ್ನಮ್ಮನ ರಾಷ್ಟ್ರಪ್ರೇಮವನ್ನು ಬಿಂಬಿಸುವ ಒಂದು ಪತ್ರವನ್ನು ಬರೆಯುವುದು. ಪತ್ರವನ್ನು ಮಕ್ಕಳು ವೈಯಕ್ತಿಕವಾಗಿ ಬರೆದು ಗುಂಪಿನಲ್ಲಿ ಚರ್ಚಿಸಿ ಉತ್ತಮ ಪಡಿಸಲಿ. ನಂತರ ಅಧ್ಯಾಪಕರ ಸಹಾಯದೊಂದಿಗೆ ಉತ್ತಮಪಡಿಸಿ ತರಗತಿಯಲ್ಲಿ ಮಂಡಿಸಲಿ.

**ಮಾದರಿ ಪತ್ರವು ಹೀಗೂ ಇರಬಹುದಲ್ಲವೇ?**

ಸ್ಥಳ : ಕಾಸರಗೋಡು

ದಿನಾಂಕ : 8.4.2024

ಪ್ರೀತಿಯ ಗೆಳೆಯನಾದ ರಾಜೇಶನಿಗೆ ಮಾಡುವ ನಮಸ್ಕಾರಗಳು,

ನಾನು ಕ್ಷೇಮವಾಗಿರುವೆನು, ನೀನು ಕ್ಷೇಮವೆಂದು ಬಹಳ ದಿನಗಳ ನಂತರ ನಿನ್ನ ಪತ್ರದ ಮೂಲಕ ತಿಳಿದು ಸಂತೋಷವಾಯಿತು. ನನ್ನ ಆರನೇ ತರಗತಿಯ ಕನ್ನಡ ಪಾಠ ಪುಸ್ತಕದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಕುರಿತಾದ ಪಾಠವಿದೆ. ಅದರಲ್ಲಿ ಅವಳ ಸ್ವಾತಂತ್ರ್ಯ ಪ್ರೇಮವನ್ನು ಸಾರುವ ಅನೇಕ ಸಂಗತಿಗಳಿವೆ.ಅದರ ಕುರಿತಾಗಿರುವ ಕೆಲವೊಂದು ಮಾಹಿತಿಗಳನ್ನು ನಿನ್ನಲ್ಲಿ ಈ ಪತ್ರದ ಮೂಲಕ ಹಂಚಿಕೊಳ್ಳುವೆನು, ಕಿತ್ತೂರನ್ನು ಆಳಿದ ಮಲ್ಲಸರ್ಜ ದೇಸಾಯಿಯ ಪತ್ನಿಯೇ ಚೆನ್ನಮ್ಮ. ಮಲ್ಲಸರ್ಜ ದೇಸಾಯಿಯ ಮರಣ ನಂತರ ಹಿರಿಯರಾಣಿಯ ಮಗನಾದ ಶಿವಲಿಂಗರುದ್ರಸರ್ಜನು ಸಿಂಹಾಸನವನ್ನೇರುತ್ತಾನೆ. ಆದರೆ ಅವನು ಅಸಮರ್ಥನಾದುದರಿಂದ ಚೆನ್ನಮ್ಮನೇ ರಾಜ್ಯದ ಅಧಿಕಾರವನ್ನು ನಡೆಸುತ್ತಾಳೆ. ಆ ಸಂದರ್ಭದಲ್ಲಿ ಭಾರತದಾದ್ಯಂತ ಬ್ರಿಟಿಷರ ಆಳ್ವಿಕೆಯು ಜಾರಿಯಲ್ಲಿರುತ್ತದೆ. ದತ್ತು ಪುತ್ರರಿಗೆ ಹಕ್ಕಿಲ್ಲವೆಂಬ ಒಂದು ಕಾನೂನನ್ನು ಜಾರಿಗೆ ತಂದಿದ್ದ ಬ್ರಿಟಿಷರು ಅದನ್ನು ಭಾರತದಾದ್ಯಂತ ಜಾರಿ ಮಾಡಲು ಕಾಯುತ್ತಿದ್ದರು.ದತ್ತು ಪುತ್ರರಿಗೆ ಹಕ್ಕಿಲ್ಲವೆಂಬ ನೀತಿಯನ್ನು ಧಿಕ್ಕರಿಸಿದ ಕಿತ್ತೂರುರಾಣಿ ಚೆನ್ನಮ್ಮನ ಆಸ್ಥಾನಕ್ಕೆ ಬ್ರಿಟಿಷ್ ಅಧಿಕಾರಿಯಾದ ಥ್ಯಾಕೆರೆಯು ಬಂದು ದರ್ಪದ ಮಾತುಗಳನ್ನಾಡಿ ಬೆದರಿಸಲು ನೋಡುತ್ತಾನೆ. ಆಗ ಯುದ್ಧಗಳಲ್ಲಿ ಪ್ರವೀಣೆಯಾದ ಚೆನ್ನಮ್ಮ ಅವನ ಮಾತಿಗೆ ಸೊಪ್ಪು ಹಾಕದೆ ಧೈರ್ಯದಿಂದ ಎದುರಿಸುತ್ತಾಳೆ. ಥ್ಯಾ ಕೆರೆಯು ಕಪ್ಪ ಕಾಣಿಕೆಯನ್ನು ಕೊಟ್ಟು ಶರಣಾಗಲು ಹೇಳಿದಾಗ , ಕಿತ್ತೂರು ಸಂಸ್ಥಾನವು ಒಂದು ಸ್ವತಂತ್ರ ಸಂಸ್ಥಾನವಾಗಿದೆ. ಗುಲಾಮಗಿರಿಗಿಂತ ವೀರ ಸ್ವರ್ಗವೇ ಮೇಲು ಎಂದು ತಿಳಿದ ಚೆನ್ನಮ್ಮ ಥ್ಯಾಕರೆಯ ವಿರುದ್ಧ ಹರಿಹಾಯುವಳು. ನಾವು ಅತಿಥಿಗಳ ಮೇಲೆ ಕೈ ಮಾಡುವುದಿಲ್ಲ .ಆದ್ದರಿಂದ ಈ ಸಲ ಜೀವದಾನ ಮಾಡಿದ್ದೇವೆ ಈಗಲೇ ಇಲ್ಲಿಂದ ಹೊರಡಬಹುದು ಎಂದು ಹೇಳಿದಾಗ ಥ್ಯಾ ಕರೆಯು ಬಂದ ದಾರಿಗೆ ಸುಂಕವಿಲ್ಲ ಎಂದು ತಿಳಿದು ಅಲ್ಲಿಂದ ನಿರ್ಗಮಿಸಿದನು.

ಇನ್ನು ಮುಂದಿನ ಪತ್ರದಲ್ಲಿ ಇನ್ನಷ್ಟು ವಿವರಗಳನ್ನು ತಿಳಿಸುತ್ತೇನೆ. ನಿನ್ನ ತಂದೆ-ತಾಯಿಗಳಿಗೆ ನನ್ನ ವಿನಯ ಪೂರ್ವಕ ವಂದನೆಗಳನ್ನು ತಿಳಿಸು ನಿಮ್ಮ ಪತ್ರಕ್ಕಾಗಿ ಕಾಯುತ್ತಿರುವ ನಿನ್ನ ಪ್ರೀತಿಯ ಗೆಳೆಯ

ಇತಿ

ಸಹಿ

✍ **ಸಂಗ್ರಹಿಸಿ ಬರೆಯಿರಿ**

ಗ್ರಂಥಾಲಯದಲ್ಲಿ ಲಭಿಸುವ ಪುಸ್ತಕಗಳನ್ನು ಬಳಸಿ ರಾಣಿ

✍ **ಸಂಗ್ರಹಿಸಿ ಬರೆಯಿರಿ**

ಗ್ರಂಥಾಲಯದಲ್ಲಿ ಲಭಿಸುವ ಪುಸ್ತಕಗಳನ್ನು ಬಳಸಿ ರಾಣಿ ಅಬ್ಬಕ್ಕಳ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಲು ಪ್ರೋತ್ಸಾಹಿಸುವುದು.

## ರಾಣಿ ಅಬ್ಬಕ್ಕ

ಅಬ್ಬಕ್ಕ ರಾಣಿ ಅಥವಾ 'ಅಬ್ಬಕ್ಕ ಮಹಾದೇವಿ' ತುಳುನಾಡಿನ ರಾಣಿಯಾಗಿದ್ದಳು. ಇವಳು ೧೬ನೇ ಶತಮಾನದ ದ್ವಿತೀಯಾರ್ಧದಲ್ಲಿ ಪೋರ್ಚುಗೀಸರೊಡನೆ ಹೋರಾಡಿದಳು. ರಾಣಿಯು ದೇವಾಲಯಗಳ ನಗರಿ ಮೂಡುಬಿದಿರೆಯ ಪ್ರದೇಶ ವನ್ನಾಳಿದ ಚೌಟ ವಂಶಕ್ಕೆ ಸೇರಿದವಳು. ಬಂದರು ನಗರಿ ಉಳ್ಳಾಲವು ಈಕೆಯ ರಾಜಧಾನಿಯಾಗಿದ್ದಿತು. ಆಯಕಟ್ಟಿನ ಪ್ರದೇಶವಾದ ಉಳ್ಳಾಲವನ್ನು ವಶಪಡಿಸಿಕೊಳ್ಳಲು ಪೋರ್ಚುಗೀಸರು ಅನೇಕ ಯತ್ನಗಳನ್ನು ನೆಡೆಸಿದರು. ಆದರೆ ರಾಣಿಯು ಅವರ ಪ್ರಯತ್ನವನ್ನು ನಾಲ್ಕು ದಶಕಗಳ ಕಾಲ ಹಿಮ್ಮೆಟ್ಟಿಸಿದಳು. ಅವಳ ಧೈರ್ಯದಿಂದಾಗಿ ಅಭಯ ರಾಣಿ ಎಂದು ಹೆಸರಾಗಿದ್ದಳು. ಈಕೆ ವಸಾಹತುಶಾಹಿಗಳ ವಿರುದ್ಧ ಹೋರಾಡಿದ ಮೊದಲ ಭಾರತೀಯರಲ್ಲಿ ಒಬ್ಬಳು ಮತ್ತು ಮೊದಲ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ಆಗಿದ್ದಳು.

ಗೋವಾವನ್ನು ಆಕ್ರಮಿಸಿಕೊಂಡ ನಂತರ ಮತ್ತು ಅದರ ಮೇಲೆ ಹಿಡಿತ ಸಾಧಿಸಿದ ನಂತರ, ಪೋರ್ಚುಗೀಸರು ತಮ್ಮಗಮನವನ್ನು ದಕ್ಷಿಣಕ್ಕೆ ಮತ್ತು ಕರಾವಳಿಯತ್ತ ತಿರುಗಿಸಿದರು. ಅವರು ಮೊದಲು ೧೫೨೫ ರಲ್ಲಿ ದಕ್ಷಿಣ ಕೆನರಾ ಕರಾವಳಿಯ ಮೇಲೆ ದಾಳಿ ಮಾಡಿ ಮಂಗಳೂರು ಬಂದರನ್ನು ನಾಶಪಡಿಸಿದರು. ಉಲ್ಲಾಳ ಸಮೃದ್ಧ ಬಂದರು ಮತ್ತು ಪಶ್ಚಿಮಕ್ಕೆ ಅರೇಬಿಯಾ ಮತ್ತು ಇತರ ದೇಶಗಳಿಗೆ ಮಸಾಲೆ ವ್ಯಾಪಾರದ ಕೇಂದ್ರವಾಗಿತ್ತು. ಅದು ಲಾಭದಾಯಕ ವ್ಯಾಪಾರ ಕೇಂದ್ರವಾಗಿದ್ದರಿಂದ, ಪೋರ್ಚುಗೀಸ್, ಡಚ್ ಮತ್ತು ಬ್ರಿಟಿಷರು ಈ ಪ್ರದೇಶದ ನಿಯಂತ್ರಣಕ್ಕಾಗಿ ಮತ್ತು ವ್ಯಾಪಾರ ಮಾರ್ಗಗಳಿಗಾಗಿ ಪರಸ್ಪರ ಪೈಪೋಟಿ ನಡೆಸಿದರು. ಆದಾಗ್ಯೂ, ಸ್ಥಳೀಯ ಮುಖ್ಯಸ್ಥರ ಪ್ರತಿರೋಧವು ತುಂಬಾ ಪ್ರಬಲವಾಗಿದ್ದರಿಂದ ಅವರಿಗೆ ಹೆಚ್ಚು ಮುನ್ನಡೆಯಲು ಸಾಧ್ಯವಾಗಲಿಲ್ಲ. ಸ್ಥಳೀಯ ಆಡಳಿತಗಾರರು ಜಾತಿ ಮತ್ತು ಧಾರ್ಮಿಕ ಮಾರ್ಗಗಳನ್ನು ಮೀರಿ ಮೈತ್ರಿ ಮಾಡಿಕೊಂಡರು.

ಅಬ್ಬಕ್ಕನ ಆಡಳಿತದಲ್ಲಿ ಜೈನರು, ಹಿಂದೂಗಳು ಮತ್ತು ಮುಸ್ಲಿಮರು ಚೆನ್ನಾಗಿ ಪ್ರತಿನಿಧಿಸುತ್ತಿದ್ದರು. ಐತಿಹಾಸಿಕ ಸಂಶೋಧನೆಯು ೧೬ ನೇ ಶತಮಾನದಲ್ಲಿ ತನ್ನ ಆಳ್ವಿಕೆಯಲ್ಲಿ, ಬ್ಯಾರಿ ಪುರುಷರು ನೌಕಾಪಡೆಯ ನೌಕಾಪಡೆಯಾಗಿ ಸೇವೆ ಸಲ್ಲಿಸಿದ್ದರು. ಎಂದು ತಿಳಿಸುತ್ತದೆ. ರಾಣಿ ಅಬ್ಬಕ್ಕ ಅವರು ಮಲಾಲಿಯಲ್ಲಿ ಅಣೆಕಟ್ಟು ನಿರ್ಮಾಣವನ್ನು ವೈಯಕ್ತಿಕವಾಗಿ ನೋಡಿಕೊಳ್ಳುತ್ತಿದ್ದಳು. ಅವಳು ಬೌಲ್ಡರ್ ಕೆಲಸಕ್ಕಾಗಿ ಬ್ಯಾರಿಯವರನ್ನು ನೇಮಿಸಿದ್ದಳು. ಅವಳ ಸೈನ್ಯವು ಎಲ್ಲಾ ಪಂಗಡಗಳು ಮತ್ತು ಜಾತಿಗಳ ಜನರನ್ನು ಒಳಗೊಂಡಿತ್ತು. ಅವಳು ಕ್ಯಾಲಿಕಟ್ ಮೊ ನ ಜಮೋರಿನ್ ನ ಜೊತೆ ಮೈತ್ರಿ ಮಾಡಿಕೊಂಡಳು. ಒಟ್ಟಾಗಿ, ಅವಳು ಪೋರ್ಚುಗೀಸರನ್ನು ಕೊಲ್ಲಿಯಲ್ಲಿ ಇಟ್ಟುಕೊಂಡಳು. ನೆರೆಯ ಬಂಗಾ ರಾಜವಂಶದೊಂದಿಗಿನ ವೈವಾಹಿಕ ಸಂಬಂಧವು ಸ್ಥಳೀಯ ಆಡಳಿತಗಾರರ ಮೈತ್ರಿಗೆ ಮತ್ತಷ್ಟು ಬಲವನ್ನು ನೀಡಿತು. ಅವಳು ಬಿಂದೂರ್ ನ ಪ್ರಬಲ ರಾಜ ವೆಂಕಟಪ್ಪನಾಯಕನಿಂದ ಬೆಂಬಲವನ್ನು ಪಡೆದಳು ಮತ್ತು ಪೋರ್ಚುಗೀಸ್ ಪಡೆಗಳ ಬೆದರಿಕೆಯನ್ನು ನಿರ್ಲಕ್ಷಿಸಿದರು.

# 3. ನಾವು ಮನುಜರು

ಈ ಭೂಮಿಯಲ್ಲಿರುವ ಜೀವಕೋಟಿಗಳಲ್ಲಿ ಮಾನವನೂ ಒಬ್ಬ ಜೀವಿಯಾಗಿರುತ್ತಾನೆ. ಆದರೆ ತನಗೆ ಮಾತ್ರವೇ ಇರುವ ಸಾಮರ್ಥ್ಯಗಳಾದ ಮಾತು ಮತ್ತು ಬುದ್ಧಿವಂತಿಕೆಯಿಂದ ತಾನು ಬಹಳ ಮುಂದುವರಿತು. ಇಂದು ಈ ಪ್ರಪಂಚದ ಸಮಗ್ರ ಬದಲಾವಣೆಗಳಿಗೆ ಕಾರಣಕರ್ತನಾಗಿದ್ದಾನೆ. ತನ್ನ ಜೀವನ ಸುಧಾರಣೆಗೆ ಮತ್ತು ಸುಖ-ಸೌಲಭ್ಯಗಳಿಗಾಗಿ ಬೇಕು ಬೇಕಾದುದನ್ನೆಲ್ಲಾ  ಮಾಡಿಕೊಂಡಿದ್ದಾನೆ. ಅವುಗಳ ಜೊತೆಗೆ ಮನುಷ್ಯರನ್ನು ಅನೇಕ ಪಂಗಡಗಳಾಗಿ ಪ್ರತ್ಯೇಕಿಸುವ ಕೆಲಸಗಳನ್ನೂ ಮಾಡಿಕೊಂಡಿದ್ದಾನೆ. ಈ ಪ್ರತ್ಯೇಕತೆಗಳು ವರ್ಣ, ಧರ್ಮ, ಕುಲ, ಸಂಪತ್ತು, ಲಿಂಗ ಹೀಗೆ ನಾನಾ ವಿಷಯಗಳನ್ನು ಆಧರಿಸಿಕೊಂಡಿದೆ. ಇದರಿಂದಾಗಿ ಜನರ ನಡುವೆ ತಾರತಮ್ಯವನ್ನು ಸೃಷ್ಟಿಸಿಕೊಂಡಿದ್ದಾನೆ. ಆದುದರಿಂದ ಪ್ರಪಂಚದಲ್ಲಿ ಧರ್ಮ ಧರ್ಮಗಳೊಳಗೆ, ಜಾತಿ-ಜಾತಿಗಳೊಳಗೆ ದ್ವೇಷ ಕಚ್ಚಾಟಗಳು ನಡೆಯುತ್ತವೆ. ಮೇಲು-ಕೀಳೆಂಬ ಮನೋಭಾವಗಳು ಮನುಷ್ಯರ ಮಧ್ಯದಲ್ಲಿ ಅಂತರವನ್ನು ಸೃಷ್ಟಿಸಿದ್ದು ಕೆಲವರ ಕಡೆಗಣಿಸುವಿಕೆಗೂ ಕಾರಣವಾಗಿದೆ .ಇದು ವ್ಯಕ್ತಿಯ ಮತ್ತು ಸಮಾಜದ ಹಿಂದುಳಿಯುವಿಕೆಗೂ ದೇಶದ ಅಭಿವೃದ್ಧಿ ಕುಂಠಿತವಾಗುವುದಕ್ಕೂ ಕಾರಣವಾಗಿದೆ. ಆದ್ದರಿಂದ ನಮ್ಮ ಸುತ್ತು ಮುತ್ತಲಿನ ಜಾತಿ, ವರ್ಣ - ವೇಷ- ಗಂಡು ಹೆಣ್ಣೆಂಬ ಭೇದವಿರದೆ ನಾವೆಲ್ಲರೂ ಒಂದೇ, ಎಲ್ಲರೂ ನಮ್ಮವರು , ಎಲ್ಲರೂ ಮಾನವರು ಎನ್ನುವ ವಿಶಾಲ ಮನೋಭಾವವನ್ನು ಬೆಳೆಸಬೇಕಾದ ಅಗತ್ಯವಿದೆ. ಇಂತಹ ಮನೋಭಾವವನ್ನು ಉಂಟುಮಾಡುವುದೇ 'ನಾವು ಮನುಜರು' ಎಂಬ ಪಾಠದ ಮುಖ್ಯ ಆಶಯವಾಗಿದೆ.

**ಕಲಿಕಾ ಉದ್ದೇಶಗಳು**

- ಜನರ ನಡುವಿನ ಭೇದಭಾವವನ್ನು ದೂರಮಾಡಿ, ಮೇಲುಕೀಳು ಎಂಬ ತಾರತಮ್ಯವನ್ನು ಹೋಗಲಾಡಿಸಿ ಮನುಜರೆಲ್ಲರೂ ಒಂದೇ ಎನ್ನುವ ಐಕ್ಯತೆಯ ನೀತಿಯನ್ನು ಅರ್ಥೈಸಿಕೊಳ್ಳುವುದು.
- ಸಹಜೀವಿಗಳೊಂದಿಗೆ ಸ್ನೇಹ, ಪ್ರೀತಿಗಳನ್ನು ಹಂಚಿಕೊಳ್ಳುತ್ತಾ ಎಲ್ಲರ ನೋವು ನಲಿವುಗಳಿಗೆ ಸ್ಪಂದಿಸುವ ಗುಣಗಳನ್ನು ಬೆಳೆಸುವುದು.
- ಮಾನವೀಯತೆಯನ್ನು  ಎತ್ತಿಹಿಡಿಯುವ ಆಶಯಗಳನ್ನು ನಿತ್ಯಜೀವನದಲ್ಲಿ ಅಳವಡಿಸುವುದರೊಂದಿಗೆ ಅವುಗಳನ್ನು ವಿವಿಧ ಭಾಷಾ ವ್ಯವಹಾರ ರೂಪಗಳಲ್ಲಿ ಪ್ರಕಟಿಸುವುದು.
- ಕಥೆ, ಲೇಖನ, ಪದ್ಯ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ಅಡಕವಾಗಿರುವ ಮನುಷ್ಯರೊಳಗಿನ ಉತ್ತಮ ಸಂಬಂಧವನ್ನು ಉಂಟು ಮಾಡುವ ಅಂಶಗಳನ್ನು ಗುರುತಿಸಿ ಅವುಗಳ್ನನು ಒಳಗೊಂಡಂತೆ ಸ್ವರಚಿತ ಸಾಹಿತ್ಯಗಳನ್ನು ರಚಿಸುವುದು.
- ಸಾಹಿತ್ಯ ಪ್ರಕಾರಗಳಲ್ಲಿ ಬಳಸುವ ಭಾಷಾಂಶಗಳಾದ ಕಾಲಸೂಚಕಗಳು ಮತ್ತು ಲೇಖನ ಚಿಹ್ನೆಗಳು ಎಂಬಿವುಗಳನ್ನು ಗುರುತಿಸಿ, ಅರ್ಥೈಸಿಕೊಂಡು ಅವುಗಳನ್ನು ಸೂಕತವಾದ ಸಂದರ್ಭಗಳಲ್ಲಿ ಬಳಸಲು ಸಮರ್ಥರಾಗುವುದು.

## ಯುನಿಟ್ ಗ್ರಿಡ್

**ತರಗತಿ - 5 (AT) ಮುಂದುವರಿದ ಪಠ್ಯ**

**ಘಟಕದ ಹೆಸರು :** ನಾವು ಮನುಜರು

**ಆಶಯ (Theme) :** ಸಾಮಾಜಿಕ ನೀತಿ

**ತರಗತಿ : 5**

**ಸಮಯ : 18**

| ಉಪ ಆಶಯಗಳು | ತಿಳುವಳಿಕೆಗಳು | ಸಾಹಿತ್ಯ ರೂಪಗಳು | ಸಾಮರ್ಥ್ಯಗಳು / ಕೌಶಲಗಳು | ಮೌಲ್ಯಗಳು/ ಮನೋಭಾವಗಳು | ಭಾಷಾ ಸತ್ಯಾಂಶಗಳು | ಭಾಷಾ ವ್ಯವಹಾರ ರೂಪಗಳು (ಚಟುವಟಿಕೆಗಳು) | ಕಲಿಕೋಪಕರಣಗಳು | ಮೌಲ್ಯಮಾಪನ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| ಸಮಾಜ ಸುಧಾರಕರು<br><br>ಸಾಮಾಜಿಕ ಸಮಾನತೆ<br><br>ಸಹಕಾರ , ಸಹಬಾಳ್ವೆ, ಸಹಜೀವನ | ಸಮಾಜ ಸುಧಾರಣೆ ಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆ ಮಹತ್ವದ್ದಾ ಗಿದೆ. ಪ್ರಕೃತಿಯಲ್ಲೇ ಸಮಾನತೆ ಯನ್ನು ಕಾಣಬಹುದು.<br><br>ಪರಸ್ಪರ ಸಹಕಾರ, ಸಹಬಾಳ್ವೆ, ಬೆಳೆಸಬೇಕು. | ವ್ಯಕ್ತಿ ಪರಿಚಯ (ಬಿ.ಆರ್ ಅಂಬೇಡ್ಕರ್)<br><br>ಕವಿತೆ (ಆಸೆ)<br><br>ಕಥೆ (ಹಂಚಿ ತಿಂದ ಗೆಳೆಯರು) | • ವ್ಯಕ್ತಿ ಪರಿಚಯಗಳನ್ನು ಓದಿ ಆಶಯ ರೂಪೀಕರಿಸುವುದು<br>• ವ್ಯಕ್ತಿಪರಿಚಯವನ್ನು ಬರೆಯುವುದು.<br>• ಕವಿತೆಗಳನ್ನು ಆಲಿಸುವುದು, ಹಾಡುವುದು.<br>• ಕಥೆಗಳನ್ನು ಆಲಿಸುವುದು.<br>• ಕಥೆಗಳನ್ನು ಓದಿ ಅದರ ಆಶಯವನ್ನು ತಿಳಿಯುವುದು.<br>• ಕಥೆಯನ್ನು ಮುಂದುವರಿಸಿ ಬರೆಯುವುದು. | • ಜನರ ನಡುವಿನ ಬೇಧಭಾವವನ್ನು ದೂರಮಾಡಿ ಮೇಲು ಕೀಳು ಎಂಬ ತಾರತಮ್ಯವನ್ನು ಹೋಗಲಾಡಿಸಿ ನಾವೆಲ್ಲಾ ಒಂದೇ ಎಂಬ ಮನೋಭಾವವನ್ನು ಮೂಡಿಸುವುದು.<br>• ಸಹಜೀವಿಗಳ ನೋವು ನಲಿವುಗಳಲ್ಲಿ ಸ್ಪಂದಿಸುವುದು.<br>• ಮಾನವೀಯತೆಯನ್ನು ಎತ್ತಿಹಿಡಿದು ಅದನ್ನು ಜೀವನದಲ್ಲಿ ಅಳವಡಿಸುವುದು. | • ಕಾಲಸೂಚಕಗಳು<br>• ಲೇಖನ ಚಿಹ್ನೆಗಳು | • ಟಿಪ್ಪಣಿ ತಯಾರಿ.<br>• ಘೋಷವಾಕ್ಯ ತಯಾರಿ<br>• ಕಿರು ಭಾಷಣ ತಯಾರಿ<br>• ಕಿರು ಟಿಪ್ಪಣಿ ತಯಾರಿ<br>• ಸ್ವಾರಸ್ಯ ಬರೆಯುವುದು<br>• ಆಸ್ವಾದನಾ ಟಿಪ್ಪಣಿ<br>• ಸಂಭಾಷಣೆ<br>• ಕಥೆ ಮುಂದುವರಿಸು ವುದು.<br>• ಕಿರು ಪ್ರಬಂಧ | • ಅಂಬೇಡ್ಕರ್ ಸಿನಿಮಾ ತುಣುಕು<br>• ಪ್ಲಕಾರ್ಡ್<br>• ಸಮಾಜ ಸುಧಾರಕರ ಚಿತ್ರಗಳು<br>• ಸಮಾಜ ಸುಧಾರಕರ ವೀಡಿಯೋ<br>• ಆಸೆ ಪದ್ಯದ ಆಡಿಯೋ<br>• ನಾಟಕಕ್ಕೆ ಸಂಬಂಧಿಸಿದ ಪರಿಕರಗಳು | • ಮಕ್ಕಳ ಕೃತಿಗಳು<br>• ಓದುವಿಕೆಯ ನಿರರ್ಗಳತೆ<br>• ಓದುವಿಕೆಯ ಆಶಯ ಗ್ರಹಣ<br>• ಪದ್ಯದ ಸ್ವಾರಸ್ಯ/ ಆಸ್ವಾದನಾ ಟಿಪ್ಪಣಿ<br>• ಸಂಭಾಷಣೆಯಲ್ಲಿ ಆಶಯ ಗ್ರಹಣ<br>• ಕಥೆಯ ಸೃಜನಾತ್ಮಕತೆ |

✍ **ಚಿತ್ರ ಓದು**

☛ **ಟಿಪ್ಪಣಿ ಬರೆಯಿರಿ**

**ಚರ್ಚೆಗಾಗಿ**

ಚಿತ್ರದಲ್ಲಿ ನಾಲ್ಕು ಜನರು ಸೇರಿ ಒಬ್ಬ ಹುಡುಗನನ್ನು ಚಚ್ಚುತ್ತಿದ್ದಾರೆ. ಹತ್ತಿರದಲ್ಲಿ ಒಂದು ಬಾವಿ ಇದೆ. ಅದರ ಕಟ್ಟೆಯಲ್ಲಿ ಒಂದು ಕೊಡಪಾನವಿದೆ. ಹುಡುಗನು ಬಾವಿಯಿಂದ ನೀರು ಸೇದಿ ಕುಡಿಯುತ್ತಿದ್ದ. ಅವನು ಕೆಳಜಾತಿಗೆ ಸೇರಿದ್ದ. ಅದಕ್ಕಾಗಿ ಅವರೆಲ್ಲರೂ ಸೇರಿ ಅವನನ್ನು ಹೊಡೆಯುತ್ತಿದ್ದಾರೆ. ಇಂದಿನ ಕಾಲದಲ್ಲಿ ಈ ರೀತಿಯ ಘಟನೆಗಳನ್ನು ನಮಗೆ ಕಾಣಲು ಸಾಧ್ಯವಿಲ್ಲದಿದ್ದರೂ ಹಿಂದಿನ ಕಾಲದಲ್ಲಿ ಇದು ಸಾಮಾನ್ಯವಾಗಿತ್ತು, ಮೇಲ್ಜಾತಿಯವರು ನೀರು ತೆಗೆಯುತ್ತಿದ್ದ ಬಾವಿಯಿಂದ ಕೆಳಜಾತಿಯವರು ತೆಗೆಯುವಂತಿರಲಿಲ್ಲ ಭಾರತದಲ್ಲಿ ಸ್ವಾತಂತ್ರ ಪೂರ್ವದಲ್ಲಿ ಜಾತಿ ತಾರತಮ್ಯಗಳು ಬಹಳ ಗಟ್ಟಿಯಾಗಿ ನೆಲೆ ನಿಂತಿದ್ದುವು. ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚೇಕೆ? ದಾರಿಗಳಲ್ಲಿ ಕೂಡ ಕೆಳ ಜಾತಿಯವರಿಗೆ ನಡೆದಾಡುವ ಸ್ವಾತಂತ್ರ್ಯವಿರಲಿಲ್ಲ.ಈ ರೀತಿಯ ಭೇದ ಭಾವಗಳಿಗೆ ಎದುರಾಗಿ ಹೋರಾಟ ನಡೆಸಿದ ಅನೇಕ ಸಮಾಜ ಸುಧಾರಕರ ಬಗ್ಗೆ ನಾವು ಈಗಾಗಲೇ ತಿಳಿದುಕೊಂಡಿದ್ದೇವೆ. ಅಂತಹ ಸಮಾಜ ಸುಧಾರಕರಲ್ಲಿ ರಾಜಾರಾಮ್ ಮೋಹನ್ ರಾಯ್ ,ದಯಾನಂದ ಸರಸ್ವತಿ, ಜ್ಯೋತಿರಾವ್ ಫುಲೆ, ಸ್ವಾಮಿ ವಿವೇಕಾನಂದ, ಮೊದಲಾದವರು ಅಗ್ರಗಣ್ಯರಾಗಿದ್ದಾರೆ. ಅವರ ಜೊತೆಯಲ್ಲಿಯೇ ಗುರುತಿಸಿಕೊಳ್ಳುವ ಮತ್ತೊಂದು ವ್ಯಕ್ತಿ ನಮ್ಮ ದೇಶದ 'ಸಂವಿಧಾನದ ಶಿಲ್ಪಿ' ಎಂದು ಕರೆಯಲ್ಪಡುವ ಬಿ ಆರ್ ಅಂಬೇಡ್ಕರ್. ಈ ಪಾಠದಲ್ಲಿ ನಾವು ಬಿ ಆರ್ ಅಂಬೇಡ್ಕರ್ ಅವರ ವ್ಯಕ್ತಿ ಪರಿಚಯವನ್ನು ಮಾಡಿಕೊಳ್ಳಲಿದ್ದೇವೆ.

**ಟಿಪ್ಪಣಿ ಹೀಗೂ ಇರಬಹುದಲ್ಲವೇ**

# ಬಿ.ಆರ್ ಅಂಬೇಡ್ಕರ್

**ಓದುವಿಕೆ**

ಮೊದಲಿಗೆ ಮಕ್ಕಳು ವೈಯಕ್ತಿಕವಾಗಿ ಮೌನವಾಗಿ ಪಾಠವನ್ನು ಓದುವರು. ಪದ್ಯದಲ್ಲಿ ಬಂದಿರುವ ಕಠಿಣ ಪದಗಳ ಅರ್ಥವನ್ನು ಪದಕೋಶದ ಸಹಾಯದಿಂದ ಕಂಡುಹಿಡಿಯಲು ಅಧ್ಯಾಪಕರು ಸಹಕರಿಸುವುದು. ಹಾಗೆಯೇ ಸಮಾನಾರ್ಥಕ ಪದಗಳು, ವಿರೋಧಾರ್ಥ ಪದಗಳನ್ನು ಗುರುತಿಸುವುದು. ಪಾಠವನ್ನು ಗಟ್ಟಿಯಾಗಿ ಓದಲು ಹೇಳುವುದು. ಈ ಮೂಲಕ ತಪ್ಪುಗಳನ್ನು ತಿದ್ದಲು ಸಹಕರಿಸುವುದು. ಪಾಠದ ಪ್ರಧಾನ ಆಶಯವಾದ ಸಾಮಾಜಿಕ ಸುಧಾರಕರು ಕುರಿತು ಮಾಹಿತಿಯನ್ನು ತಿಳಿಯುವುದು .

✍ **ಉತ್ತರಿಸಿರಿ**

ಪಾಠದ ಆಶಯವನ್ನು ಮಕ್ಕಳು ಎಷ್ಟರ ಮಟ್ಟಿಗೆ ತಿಳಿದಿದ್ದಾರೆ ಎಂದು ತಿಳಿಯುವುದೇ ಈ ಚಟುವಟಿಕೆಯ ಉದ್ದೇಶ. ಆಶಯ ಗ್ರಹಣಕ್ಕಾಗಿ ನೀಡಿದ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರ ಬರೆಯಲಿ.

✍ **ಟಿಪ್ಪಣಿ ಬರೆಯಿರಿ**

ಸಮಾಜ ಸುಧಾರಕರ ಕುರಿತು ಟಿಪ್ಪಣಿ ಬರೆಯುವುದು.

**ರಾಜಾರಾಮ್ ಮೋಹನ್ ರಾಯ್**

ಆಧುನಿಕ ಭಾರತದಲ್ಲಿ ಹೊಸತನವನ್ನು ತಂದ ರಾಜಾರಾಮ್ ಮೋಹನ್ ರಾಯ್ ರವರು ಬ್ರಹ್ಮ ಸಮಾಜವನ್ನು ಸ್ಥಾಪಿಸಿದರು. ಆಧ್ಯಾತ್ಮಿಕ, ಸಾಮಾಜಿಕ, ಧಾರ್ಮಿಕ ಜಾಗೃತಿಗೆ ಕಾರಣರಾದರು. ಅಜ್ಞಾನ ಹಾಗೂ ಮೂಢನಂಬಿಕೆಗಳನ್ನು ದೂರ ಮಾಡುವಲ್ಲಿ, ವಿಚಾರ ಶಕ್ತಿಯನ್ನು ಬೆಳೆಸುವಲ್ಲಿ ಮಹಾನ್ ಕಾರ್ಯಗಳನ್ನು ಮಾಡಿದರು.

ಭಾರತದಲ್ಲಿ ಮೊದಲಿಗೆ ಪಶ್ಚಿಮ ಬಂಗಾಳದಲ್ಲಿ ಆಧುನಿಕತೆಯೊಂದಿಗೆ ಮಹಾನ್ ಕ್ರಾಂತಿಯಾಯಿತು. ಅದು ಧಾರ್ಮಿಕ

ಸಾಮಾಜಿಕ ಮತ್ತು ಸಾಹಿತ್ಯಿಕ ಕ್ಷೇತ್ರಗಳಲ್ಲಿ ಬಹಳ ಪರಿಣಾಮವನ್ನು ಉಂಟು ಮಾಡಿತು. ರಾಜಾರಾಮ್ ಮೋಹನ್ ರಾಯ್ ರವರು 1772ರ ಮೇ 22ರಂದು ಪಶ್ಚಿಮ ಬಂಗಾಳದ ಬರ್ದಾನ್ ಜಿಲ್ಲೆಯ ಹಳ್ಳಿಯಲ್ಲಿ ಜನಿಸಿದರು. ಅಲ್ಲಿಯೇ ಪ್ರಾಥಮಿಕ ಶಿಕ್ಷಣ ಪಡೆದು ಕಲ್ಕತ್ತಾಗೆ ಬಂದು ವಿಶೇಷ ಶಿಕ್ಷಣ ಪಡೆದರು. ವಿದ್ಯಾಭ್ಯಾಸದ ಸಮಯದಲ್ಲಿ ಸಂಸ್ಕೃತ, ಹಿಂದಿ, ಪಾರ್ಸಿ ,ಅರಬ್ಬಿ, ಇಂಗ್ಲಿಷ್, ಗ್ರೀಕ್ ಭಾಷೆಗಳನ್ನು ಕಲಿತರು. 30ನೇ ವಯಸ್ಸಿನಲ್ಲಿ ದೇಶವಿದೇಶಗಳಲ್ಲಿ ಸಂಚಾರ ಮಾಡಿ 1803ರಲ್ಲಿ ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕೆಲಸಕ್ಕೆ ತೊಡಗಿದರು. 1815 ರವರೆಗೆ ಅದೇ ಕಂಪನಿಯಲ್ಲಿ ಕಾರ್ಯವನ್ನು ನಿರ್ವಹಿಸಿದರು. ಮುಂದೆ ಭಾರತೀಯ ಉಪನಿಷತ್ತುಗಳನ್ನು ಬೇರೆ ಭಾಷೆಗಳಿಗೆ ಭಾಷಾಂತರದ ಕಾರ್ಯ ಕೈಗೊಂಡರು. ಹಿಂದೂ ಸಮಾಜದಲ್ಲಿದ್ದ ಅನೇಕ ದೋಷಗಳನ್ನು ಅವರು ಗುರುತಿಸಿದರು. ಹಿಂದೂ ಸಮಾಜದಲ್ಲಿ ರೂಢಿಯಾಗಿದ್ದ ಸತಿ ಪದ್ಧತಿ, ಮೂರ್ತಿಪೂಜೆ, ಪಶುಬಲಿ, ಬಾಲ್ಯವಿವಾಹ, ಬಹುಪತ್ನಿತ್ವ ಮುಂತಾದ ಸಂಗತಿಗಳು ಅತ್ಯಂತ ಕೆಟ್ಟ ಪರಿಣಾಮವನ್ನು ಉಂಟು ಮಾಡುತ್ತಿದ್ದುದನ್ನು ಅವರು ಗಮನಿಸಿದರು. ಅವುಗಳಲ್ಲಿ ಸುಧಾರಣೆಯನ್ನು ಮಾಡುವ ಮೊದಲು ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ಅಭಿಪ್ರಾಯವನ್ನು ಮಂಡಿಸಿದರು. ಜನಜಾಗೃತಿಗಾಗಿ ಸರಕಾರದೊಂದಿಗೆ ಚರ್ಚಿಸಿ ಸತಿ ಪದ್ಧತಿಯನ್ನು ದೂರವಾಗಿಸಲು ಕಾನೂನುರಚನೆಗೆ ನೆರವಾದರು. ರಾಜಾರಾಮ್ ಮೋಹನ್ ರಾಯ್ ರವರು 1828ರಲ್ಲಿ ಬ್ರಹ್ಮ ಸಮಾಜವನ್ನು ಸ್ಥಾಪಿಸಿ ತಮ್ಮೆಲ್ಲ ಹೋರಾಟವನ್ನು ಮುಂದುವರಿಸಿದರು. ಇಂಗ್ಲಿಷ್ ಶಿಕ್ಷಣ, ವಿಜ್ಞಾನ, ರಾಜಕಾರಣ, ಸಮಾನತೆ ಸಾಮಾಜಿಕ ಜಾಗೃತಿಯಂತಹ ಕ್ಷೇತ್ರಗಳಲ್ಲಿ ಚಿಂತನೆಯನ್ನು ಆರಂಭಿಸಿದರು. ಆದುದರಿಂದಲೇ ಇಂಗ್ಲಿಷ್ ಶಿಕ್ಷಣವು ನಮಗೆ ಅನಿವಾರ್ಯವೆಂದು ರಾಜರಾಮ್ ಮೋಹನ್ ರಾಯ್ ವಾದಿಸಿದರು. 1823ರಲ್ಲಿ ಪತ್ರಿಕಾ ಸ್ವಾತಂತ್ರ್ಯ ಹೋರಾಟ ನಡೆಸಿದರು. ಈ ರೀತಿಯ ಚಿಂತನೆಗಳ ಫಲವಾಗಿಯೇ ಭಾರತದಲ್ಲಿ1885ರಲ್ಲಿ ಕಾಂಗ್ರೆಸ್ ಸಂಸ್ಥೆ ಆರಂಭಗೊಂಡಿತು. ಬಂಗಾಳಿ ಸಾಹಿತ್ಯದಲ್ಲಿ ಗದ್ಯದಲ್ಲಿ ಅಪಾರ ಲೇಖನಗಳನ್ನು ಬರೆದು ಜನಸಾಮಾನ್ಯರಿಗೆ ತಿಳಿಯುವಂತೆ, ತಲುಪುವಂತೆ ಮಾಡಿದರು. ಬಂಗಾಳಿ ಸಾಹಿತ್ಯದಲ್ಲಿ ಹೊಸ ಪ್ರತಿಭೆಗಳು ಉದಯಿಸುವಂತೆ ಮಾಡಿದ ರಾಜಾರಾಮ್ ಮೋಹನ್ ರಾಯರು ಚಿಂತನಶೀಲರು ಹೆಚ್ಚಾಗುವಂತೆ ಮಾಡಿದರು. ಬಂಗಾಳದಲ್ಲಿ ಅನೇಕ ಚಿಂತಕರು ಸೇರಿ ಚರ್ಚೆ ನಡೆಸಿದರು. ಬ್ರಹ್ಮಸಮಾಜ ಪ್ರತಿ ವಾರ ನಿರ್ದಿಷ್ಟ ಕಾರ್ಯ ನಡೆಸುತ್ತಿತ್ತು. ವಿವೇಕಾನಂದರು ಸಹ ಬ್ರಹ್ಮಸಮಾಜದ ಸದಸ್ಯರಾಗಿದ್ದರು.

ರಾಜಾರಾಮ್ ಮೋಹನ್ ರಾಯರಿಗೆ ಇಂಗ್ಲೆಂಡಿನಲ್ಲಿ ಅನೇಕ ಮಿತ್ರರಿದ್ದರು.ಒಮ್ಮೆ ರಾಜಾರಾಮ್ ಮೋಹನ್ ರಾಯರು 1833ರಲ್ಲಿ ಇಂಗ್ಲೆಂಡಿನ ಪ್ರವಾಸದಲ್ಲಿದ್ದರು. ಅವರು ಪ್ರವಾಸದ ನಡುವೆ ಬ್ರಿಸ್ಟಲ್ ನಗರದಲ್ಲಿ ಸೆಪ್ಟೆಂಬರ್ 27ರಂದು ನಿಧನರಾದರು. ಅಲ್ಲಿಯೇ ರಾಜರ ಮೋಹನ್ ರಾಯರ ಸಮಾಧಿ ಮಾಡಲಾಯಿತು. ಭಾರತದಲ್ಲಿ ಹೊಸ ಬೆಳಕು ಮೂಡಿ ಬರಲು ರಾಜರಾಮ್ ಮೋಹನ್ ರಾಯರು ಪ್ರಯತ್ನ ಅಸಾಮಾನ್ಯವಾದುದು.

## ನಾರಾಯಣ ಗುರು

ಕೇರಳರಾಜ್ಯದಲ್ಲಿ ಜಾತಿ, ಮತಭೇದಗಳು ಹೆಚ್ಚಾಗಿದ್ದ ಕಾಲದಲ್ಲಿ 'ನಾರಾಯಣ ಗುರು,' ವೆಂಬ, ಒಬ್ಬ ಸಮಾಜಕ ಸುಧಾರಕ, ಉದಯಿಸಿ, ಸಮಾಜದ ತಾರತಮ್ಯಗಳನ್ನು ಕಡಿಮೆಮಾಡಲು ಇಡೀಜೀವನವನ್ನು ಮುಡಿಪಾಗಿಟ್ಟರು. ಅವರು ಪ್ರತಿಪಾದಿಸಿದ ತತ್ವ, ಜಗತ್ತಿನಲ್ಲಿರುವುದು, " ಒಂದೇಜಾತಿ, ಒಂದೇ ಮತ, ಹಾಗೂ ಒಂದೇ ದೇವರು," ಎಂಬ ಸತ್ಯವಾಕ್ಯವನ್ನು. ಸಂಸ್ಕೃತ-ಭಾಷೆಯಲ್ಲಿ ಅದ್ವಿತೀಯ ಪಂಡಿತರಾಗಿದ್ದ ನಾರಾಯಣ ಗುರುಗಳು, ಕೇರಳ ಸಮಾಜದಲ್ಲಿ ಅಸ್ಪೃಶ್ಯತೆಯ ಪಿಡುಗಿಗೆ ತಮ್ಮದೇ ಆದ ನಿಲುವಿನಲ್ಲಿ, ಸಮಾಧಾನಕರವಾದ ಉಪಾಯಗಳನ್ನು ಕಂಡುಕೊಂಡರು. ಅವರು ಬೋಧಿಸಿದ್ದು, ದೇಶಸೇವೆಯೇ ಈಶ ಸೇವೆಯೆಂದು. 12ನೇ ಶತಮಾನದ ಬಸವಣ್ಣನ ಕಾಲದ ಕ್ರೌರ್ಯಕ್ಕಿಂತ ಇಮ್ಮಡಿ, ಮುಮ್ಮಡಿಯಾದ ಕ್ರೌರ್ಯ, ದೌರ್ಜನ್ಯ, ಹಿಂಸೆ, ಬುದ್ಧಿ ಜೀವಿಗಳ ನಾಡಾದ ಕೇರಳದಲ್ಲಿ ೧೯ನೆ ಶತಮಾನದ ಅಂತ್ಯ ಮತ್ತು ೨೦ನೆ ಶತಮಾನದ ಆರಂಭದಲ್ಲಿ ನಡೆದಿತ್ತು. ಆಗಿನ ಕೇರಳದಲ್ಲಿ ಇಡೀ ಭಾರತದಲ್ಲಿಯೇ ಕಂಡರಿಯದ ಅಮಾನುಷ ವರ್ತನೆ ನಂಬೂದರಿ ಎಂಬ ಬ್ರಾಹ್ಮಣ ವರ್ಗದಿಂದ ಶೂದ್ರರ ಮೇಲೆ, ಅಸ್ಪ್ರಷ್ಯರ ಮೇಲೆ ಮತ್ತು ಸ್ತ್ರೀಯರ ಮೇಲೆ ನಡೆದಿತ್ತು. ಅಂತಹ ಜಾತೀಯತೆ, ಅಸ್ಪ್ರಶ್ಯತೆ ಎಂಬ ವಿಷ ವೃಕ್ಷವು ಇಡೀ ಶೂದ್ರ ಜನಸಮೂಹವನ್ನು ಉಸಿರುಗಟ್ಟಿ ಸಾಯುಸಿತ್ತಿರುವ ಘೋರ ಕ್ರೌರ್ಯದ ತುರಿಯಾವಸ್ಥೆಯಲ್ಲಿ `ಈಳವ' ಎಂಬ

ಅಸ್ಪೃಶ್ಯ ಜಾತಿಯಲ್ಲಿ ನಾರಾಯಣ ಗುರು ಎಂಬ ಪವಿತ್ರಾತ್ಮನ ಜನ್ಮವಾಯಿತು. ಇಂತಹ ಜಾತೀಯತೆ, ಅಸ್ಪೃಶ್ಯತೆ ಎಂಬ ಕೊಳ_ಕಿನಿಂದ ಸಮಾಜ ಕೊಳೆಯುತ್ತಿರುವಾಗ ನಾರಾಯಣ ಗುರುಗಳು ಅವತಾರ ಪುರುಷರಂತೆ, ಪ್ರವಾದಿಯಂತೆ ಜನ್ಮ ತಾಳುತ್ತಾರೆ. ಅನ್ಯ ಧರ್ಮಗಳನ್ನು ಖಂಡಿಸಿ ಅದ್ವೈತ ಮತ ಸ್ಥಾಪನಾಚಾರ್ಯರೆಂದು ಪ್ರಸಿದ್ಧಿ ಪಡೆದ ಶ್ರೀ ಶಂಕರಾಚಾರಾಚಾರ್ಯರು ತಮ್ಮ ಅದ್ವೈತ ಸಿದ್ಧಾಂತಕ್ಕೆ ಓರ್ವ ಹರಿಜನ ಗುರು ಎಂದು ಸ್ವೀಕರಿಸಿಕೊಂಡರೆ, ಕಾಲಕ್ರಮದಲ್ಲಿ ಅವರ ಹುಟ್ಟೂರಾದ ಕೇರಳವು ಜಾತಿಭೇದ ಮತ್ತು ಅಸ್ಪೃಶ್ಯತೆಯ ಹುಚ್ಚರ ಸಂತೆಯಾಯಿತು. ಅಂತಹ ಗೊಂದಲಮಯ ವಾತಾವರಣದಲ್ಲಿ ನಾರಾಯಣ ಗುರುಗಳ ಜನನವಾಯಿತು. ಈಳವ ಜಾತಿ ಕೇರಳದ ಅಸ್ಪೃಶ್ಯ ಜಾತಿಗಳಲ್ಲಿ ಒಂದಾಗಿದ್ದಿತು. ಕೇರಳದಲ್ಲಿ ಆ ಜಾತಿಯ ಜನ 30% ಇದ್ದರು. ನಾರಾಯಣ ಗುರುಗಳು ಕೇವಲ ಈಳವ ಜಾತಿಯವರನ್ನಲ್ಲದೆ, ಸಮಸ್ತ ಅಸ್ಪೃಶ್ಯ, ನಿಮ್ನ ವರ್ಗದವರನ್ನು ಎಲ್ಲ ಸ್ತರಗಳ-ಲ್ಲಿ ಮೇಲೆ ತರಲು ಮಾಡಿದ ಅವರ ಪ್ರಯತ್ನವನ್ನು ಅವರ ಬದುಕಿನ ಮಹತ್ಸಾಧನೆ ಎನ್ನಬಹುದು. ನಾರಾಯಣ ಗುರುಗಳನ್ನು ಒಂದು ನಿರ್ದಿಷ್ಟ ಜಾತಿಯ ಗುರುವೆಂದು ಭಾವಿಸುವುದು ಸಂಕುಚಿತ ಮನೋಭಾವದ ಪ್ರತೀಕವೆನಿಸುವುದು.

ಪ್ರಾಚೀನ ಮೌಲ್ಯಾದರ್ಶಗಳನ್ನು, ಸತ್ಯವನ್ನು, ಅರಸಿಕೊಂಡು ಹೋಗಿ ಮನೆಯನ್ನು ತ್ಯಜಿಸಿ, ತಪಸ್ಸು ಮಾಡುತ್ತ ಗುಡ್ಡ, ಗಿರಿ, ಬೆಟ್ಟ, ಕಂದರ, ದಟ್ಟಾರಣ್ಯ, ಗುಹೆ, ಪರ್ಣಶಾಲೆಗಳಲ್ಲಿದ್ದು ಅನೇಕ ವರ್ಷ ಸಾಧನೆ ಮಾಡಿದರು. ಗುರುಗಳ ಸಮಾಧಿಯ ಬಳಿಕ ಥಿಯೋಸೊಫಿಕಲ್ ಸೊಸೈಟಿಯ ಅಧ್ಯಕ್ಷೆಯಾಗಿದ್ದ ಎನಿಬೆಸಂಟರು ಪತ್ರಿಕೆಯಲ್ಲಿ ಹೀಗೆ ಬರೆದಿದ್ದರು:` ನಾರಾಯಣ ಗುರುಗಳ ಬದುಕೇ ಸನಾತನ ಧರ್ಮದಂತಿದ್ದು, ಅವರ ಸೇವಾ ವ್ಯಾಪ್ತಿ ವಿಶಾಲವಾಗಿತ್ತು. ಚಿಂತನೆಗಳು ಅಮೂಲ್ಯವಾಗಿದ್ದವು. ಯಾವುದೇ ಲೋಪ ದೋಷಗಳಿರದ ಜನಪರ ಕಾಳಜಿ ಅವರಿಗೆ ಇತ್ತು. ಇತ್ತೀಚಿಗಿನ ಶತಮಾನದಲ್ಲಿ ಇಂತಹ ಗೌರವ, ಮಾನ್ಯತೆಗಳನ್ನು ಪಡೆದ ಸ್ವಾಮಿಗಳು ಯಾರೂ ಇರಲಿಲ್ಲ. ಯೋಗದಲ್ಲಿ ಅವರು ಪತಂಜಲಿ, ಜ್ಞಾನದಲ್ಲಿ ಶಂಕರ, ಅಹಿಂಸೆಯಲ್ಲಿ ಬುದ್ಧ, ಮಾನ-ವೀಯತೆಯಲ್ಲಿ ಏಸುಗಳೆಲ್ಲರಂತೆ ಇದ್ದರು. ಅವರೊಬ್ಬ ದೇವರ ಅವತಾರವೇ ಆಗಿದ್ದರು. ಭವಿಷ್ಯದಲ್ಲಿ ಅವರನ್ನು ದೇವರೆಂದು ಆರಾಧಿಸುವರು.

✍ **ಘೋಷವಾಕ್ಯ ರಚಿಸಿರಿ**

1. ಜಾತಿ ಭೇದ ಅಳಿಯಲಿ ಮಾನವೀಯತೆ ಬೆಳೆಯಲಿ.
2. ಹುಟ್ಟಿನಿಂದ ನಾವೆಲ್ಲ ಮನುಜರಲ್ಲವೇ?
3. ಒಟ್ಟಿನಲ್ಲಿ ಒಂದಾಗಿ ಬದುಕಬೇಡವೇ?
4. ಮೇಲು-ಕೀಳು ಯಾತಕ್ಕಾಗಿ ನಮ್ಮ ಒಳಗೆ
5. ಹರಿವ ರಕ್ತ ಒಂದೇ ಅಲ್ಲವೇ ದೇಹದೊಳಗೆ
6. ಹುಟ್ಟಿ ಬೆಳೆದು ಇರುವರೆಲ್ಲ ಭೂಮಿಯಲ್ಲಿ
7. ಪೆಟ್ಟು ಜಗಳ ಕಲಹ ಬೇಕೆ ಮನುಜರಲ್ಲಿ?

✍ **ಕಿರು ಭಾಷಣ**

- ಮಕ್ಕಳಿಗೆ ತಿಳಿದಿರುವ ವಿಷಯಗಳನ್ನು ಹೇಳಿ ಭಾಷಣವನ್ನು ಮಂಡಿಸಲಿ.
- ನಂತರ ತರಗತಿಯಲ್ಲಿರುವ ಇತರರು ಹೇಳಿದ ವಿಷಯಗಳನ್ನು ಸೇರಿಸಿ ಅದನ್ನು ಉತ್ತಮಪಡಿಸಲಿ.
- ಕೆಲವೊಂದು ವಿಷಯಗಳನ್ನು ಅಧ್ಯಾಪಕರು ಸೇರಿಸಲು ಸಹಾಯ ಮಾಡುವುದು.
- ಕೆಲವರಿಂದ ಮಂಡಿಸಲು ತಿಳಿಸುವುದು.
- ಬಳಿಕ ಅಧ್ಯಾಪಕ ಮಾದರಿಯನ್ನು ಪ್ರದರ್ಶಿಸುವುದು.

**ಕಿರು ಭಾಷಣ ಹೀಗೂ ಇರಬಹುದಲ್ಲವೇ**

ವೇದಿಕೆಯಲ್ಲಿರುವ ಅಧ್ಯಕ್ಷರೇ ಹಾಗೂ ಸಭಿಕರೇ, ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆಯು ಗತಶತಮಾನಗಳಿಂದಲೂ ನೆಲೆ ನಿಂತಿದೆ. ವೇದಕಾಲದಲ್ಲಿ ಕಸುಬಿನ ಆಧಾರದಲ್ಲಿ ಜನರನ್ನು ಕ್ಷತ್ರಿಯ, ಬ್ರಾಹ್ಮಣ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳಾಗಿ ವಿಂಗಡಿಸಲಾಯಿತು. ಮುಂದೆ ಇದು ಮೇಲು ಕೀಳು ಎಂಬ ವ್ಯತ್ಯಾಸಗಳಿಗೆ ಅಸ್ಪೃಶ್ಯತೆ, ಅಸಮಾನತೆಗಳಿಗೂ ಕಾರಣವಾಯಿತು. ಸವರ್ಣೀಯ ಎಂದು ಕರೆಯಲ್ಪಡುವವರು. ತಮ್ಮಿಂದ ಕೆಳ ಜಾತಿಯವರನ್ನು ಎಲ್ಲಾ ರೀತಿಯಲ್ಲಿ ತಾತ್ಸಾರದಿಂದ ನೋಡಿದರೆ ಅದಕ್ಕಿಂತ ಕೆಳಗಿನವರು ತಮಗಿಂತ ಕೆಳಗಿನವರನ್ನು ತಿರಸ್ಕಾರದಿಂದ ನೋಡುತ್ತಾರೆ. ಭಾರತದಲ್ಲಿ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಗಳು ಈ ದೇಶದ ಅಭಿವೃದ್ಧಿಗೆ ಮಾರಕವಾಗಿ ಪರಿಣಮಿಸಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಕೆಳಜಾತಿ ಎಂದೆನಿಸಲ್ಪಟ್ಟವರಿಗೆ ಶಿಕ್ಷಣವು ನಿಷೇಧಿಸಲ್ಪಟ್ಟಿತು. ಮಾತ್ರವಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ ಸಂಚಾರ ಸಾಧ್ಯವಿರಲಿಲ್ಲ. ಅನೇಕ ಸಮಾಜ ಸುಧಾರಕರ ಹೋರಾಟದ ಫಲವಾಗಿ ಈ ಅನಿಷ್ಟ ಪದ್ಧತಿಗಳೆಲ್ಲ ನಿಧಾನವಾಗಿ ಸಮಾಜದಲ್ಲಿ ಇಲ್ಲದಾಗುತ್ತಾ ಬರುತ್ತಿವೆ. ಆದರೆ ಇಂದಿಗೂ ಭಾರತೀಯರಲ್ಲಿ ಆಳವಾಗಿ ಬೇರೂರಿ ಇರುವ ಈ ಜಾತಿ ಪದ್ಧತಿ ಎಂಬ ಕೆಟ್ಟವ್ಯವಸ್ಥೆಯು ಅನೇಕ ವಿದ್ಯಾರ್ಥಿಗಳ ಮತ್ತು ಯುವಕರ ಅವಕಾಶಗಳನ್ನು ಕಸಿದುಕೊಂಡಿದೆ. ಇಷ್ಟು ಮಾತ್ರವಲ್ಲದೆ ಕಡೆಗಣಿಸಲ್ಪಟ್ಟವರು ಸರಕಾರಗಳಿಂದ ಸಿಗುವ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಳ್ಳದೆ ಅದನ್ನು ದುರ್ಬಳಕೆ ಮಾಡುವುದನ್ನು ನೋಡುತ್ತಿದ್ದೇವೆ. ಕೆಳ ಜಾತಿಯವರಲ್ಲಿ ಕೆಲವರು ಸಮಾಜದ ಮುಖ್ಯವಾಹಿನಿಗೆ ಬರಲು ಹಿಂದೇಟು ಹಾಕುವುದನ್ನು ನೋಡುತ್ತಿದ್ದೇವೆ. ಊರಾಚೆಯ ಕಾಲೋನಿಗಳಲ್ಲಿ ಕಾಡುಗಳ ಬದಿಗಳಲ್ಲಿ ಕೊಳಚೆ ಪ್ರದೇಶಗಳಲ್ಲಿ ಕೆಲವರು ಅಲೆಮಾರಿಗಳಾಗಿ ತಮ್ಮದಾದ ಶೈಲಿಯಲ್ಲಿ ಜೀವಿಸುತ್ತಿದ್ದಾರೆ. ಇವರನ್ನು ಒಳಗೊಂಡ ಒಂದು ಸಶಕ್ತ ಸಮಾಜವನ್ನು ರೂಪಿಸಲು ಸರಕಾರ ವರ್ಷವೂ ಅನೇಕ ಕೋಟಿ ಹಣವನ್ನು ವೆಚ್ಚ ಮಾಡುತ್ತಿದ್ದರೂ ಅವುಗಳು ಯಶಸ್ವಿಯಾಗುತ್ತಿಲ್ಲ. ಇದು ಸರಕಾರಗಳಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಶತಮಾನಗಳ ಹಿಂದೆ ರಾಜಾರಾಮ್ ಮೋಹನ್ ರಾಯ್ ಸ್ವಾಮಿ ವಿವೇಕಾನಂದ ನಾರಾಯಣ ಗುರು ಮಹಾತ್ಮ ಗಾಂಧಿ ಇತ್ಯಾದಿ ಅನೇಕ ಸಾಮಾಜಿಕ ಸುಧಾರಕರು ಜಾತಿ ವ್ಯವಸ್ಥೆಯ ಅಸಮಾನತೆಯ ಕೆಟ್ಟ ಪರಿಣಾಮಗಳ ಬಗ್ಗೆ ಜನರಲ್ಲಿ ಜಾಗೃತಿ ಉಂಟು ಮಾಡಿದರು. ಇಂದಿಗೂ ನಮ್ಮ ದೇಶದಲ್ಲಿ ಅದು ಮುಂದುವರಿಯುತ್ತಿರುವುದು ಖೇದಕರವಾಗಿದೆ. ಇನ್ನಾದರೂ ಯುವ ಜನಾಂಗ ಮತ್ತು ವಿದ್ಯಾರ್ಥಿಗಳು ಎಚ್ಚೆತ್ತುಕೊಂಡು ಜಾತಿ ಆಧರಿತ ಸಮಾಜವನ್ನು ಇಲ್ಲದಾಗಿಸಿ 'ಎಲ್ಲರಿಗೂ ಸಮಬಾಳು ಎಲ್ಲರಿಗೂ ಸಮಪಾಲು' ಎಂಬ ನೀತಿಯನ್ನು ಎತ್ತಿ ಹಿಡಿದು ಸಮಾನತೆ ಸಹೋದರತೆ ಮತ್ತು ಸೌಹಾರ್ದವಾಗಿ ಬದುಕಿದಲ್ಲಿ ನಮ್ಮ ದೇಶವು ಅಭಿವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ.

✍ **ಪಟ್ಟಿ ಮಾಡಿರಿ**

ಅನ್ಯದೇಶೀಯ ಪದಗಳು

ಪೆನ್ನು , ಬಸ್ಸು, ಬ್ಲೇಡು, ಮೊಬೈಲು, ..... ಇತ್ಯಾದಿ ಇಂಗ್ಲೀಷ್ ಪದಗಳಲ್ಲದೆ ಮಲಯಾಳ, ತುಳು, ಅರಬಿಕ್ ಇತ್ಯಾದಿ ಭಾಷೆಗಳಿಂದಲೂ ಕನ್ನಡ ಸಾಹಿತ್ಯದಲ್ಲಿ ಬಳಸಲ್ಪಡುವ ಶಬ್ದಗಳನ್ನು ಅನ್ಯದೇಶೀಯ ಪದಗಳು ಎನ್ನುತ್ತಾರೆ.

ಪಳ್ಳಿ, ತಾಪು, ಬಾಂಗ್, ...... ಇತ್ಯಾದಿ.

✍ **ಬದಲಾಯಿಸಿ ಬರೆಯಿರಿ**

ಪಾಠಪುಸ್ತಕದಲ್ಲಿನೀಡಿದ ಮಾದರಿಗಳ ಆಧಾರದಲ್ಲಿ ಮಕ್ಕಳೇ ವಾಕ್ಯಗಳನ್ನು ಬದಲಾಯಿಸಿ ಬರೆಯಲು ಪ್ರೋತ್ಸಾಹ ನೀಡುವುದು. ಪರಸ್ಪರ ಅಥ್ವಾ ಅಧ್ಯಾಪಕರು ಮೌಲ್ಯಮಾಪನ ಮಾಡುವರು.

- ❐ ಅವಳ ಮಗಳು ಅದೇ ಶಾಲೆಯಲ್ಲಿ ಕಲಿಯುತ್ತಿದ್ದಾಳೆ.
- ❐ ಹಿಂದಿನ ಕಾಲದಲ್ಲಿ ಸ್ಲೇಟಿನಲ್ಲಿ ಕಡ್ಡಿಯಿಂದ ಬರೆಯುತ್ತಿದ್ದರು.
- ❐ ಇಂದು ಪೆನ್ನನ್ನು ಉಪಯೋಗಿಸಿ ಬರೆಯುತ್ತಾರೆ.

✍ **ಕಿರುಟಿಪ್ಪಣಿ**

ಮೂಢನಂಬಿಕೆಯ ಬಗ್ಗೆ ಮಕ್ಕಳು ತಮ್ಮ ಅಭಿಪ್ರಾಯಗಳನ್ನು ಮಂಡಿಸಲಿ. ಮೂಢನಂಬಿಕೆಗಳ ಪಟ್ಟಿ ಮತ್ತು ಮೂಢನಂಬಿಕೆಗಳಿಂದ ಉಂಟಾಗುವ ದೋಷಗಳ ಕುರಿತು ತರಗತಿಯಲ್ಲಿ ಚರ್ಚಿಸಿ ಗುಂಪಿನಲ್ಲಿ ಕಿರುಟಿಪ್ಪಣಿಯನ್ನು ತಯಾರಿಸಲಿ. ಕೆಲವರಿಂದ ಮಂಡನೆಯಾದ ಬಳಿಕ ಬಿಟ್ಟುಹೋದವುಗಳನ್ನು ಸೇರಿಸಿ ಮತ್ತೊಮ್ಮೆ ಉತ್ತಮ ಪಡಿಸಲಿ. ಬಳಿಕ ಅಧ್ಯಾಪಕ ಮಾದರಿಯನ್ನು ಪ್ರದರ್ಶಿಸುವುದು. ಚರ್ಚೆಗೆ ಪಾಠಪುಸ್ತಕದಲ್ಲಿ ನೀಡಿದ ಸೂಚನೆಗಳನ್ನು ಬಳಸಬಹುದು. ಚರ್ಚೆಯಲ್ಲಿ ಕಂಡುಕೊಂಡ ವಿಚಾರಗಳನ್ನು ಟಿಪ್ಪಣಿ ರೂಪದಲ್ಲಿ ಬರೆಯುವುದು.

**ಮೂಢನಂಬಿಕೆಗಳು**

ನಮ್ಮ ಸುತ್ತಮುತ್ತ ,ನಮ್ಮ ಮನೆಗಳಲ್ಲಿ ನೆರೆಕೆರೆಯಲ್ಲಿ ನಾವು ತಿಳಿದೋ ತಿಳಿಯದೆಯೋ ಪಾಲಿಸಿಕೊಂಡು ಬರುತ್ತಿರುವ ಅನೇಕ ಮೂಢನಂಬಿಕೆಗಳಿವೆ. ಮಾಡಿನಿಂದ ಹಲ್ಲಿ ತಲೆಗೆ ಬಿದ್ದಲ್ಲಿ ಮರಣ , ಗೂಬೆ ಕೂಗುವುದು ಕೇಳಿದರೆ ಅಪಶಕುನ, ಬೆಳಗ್ಗೆದ್ದು ಹಿಡಿಸೂಡಿ ಕಂಡಲ್ಲಿ ಕಷ್ಟ ತಪ್ಪದ್ದು, ಬೆಳಗ್ಗೆ ಎಲ್ಲಿಯಾದರೂ ಹೊರಟಾಗ ವಿಧವೆಯರನ್ನು ಕಂಡರೆ ಕೇಡು ಇತ್ಯಾದಿ ಅನೇಕ ಮೂಢನಂಬಿಕೆಗಳು ನಮ್ಮ ನಾಡಿನ್ಲಲಿ ಸಾಕಷ್ಟಿದೆ. ಕೆಲವನ್ನು ಅನುಸರಿಸುವುದರಿಂದ ನಮಗೆ ಏನೂ ತೊಂದರೆಗಳು ಆಗುವುದಿಲ್ಲ. ಆದರೆ ಕೆಲವೊಂದು ಮೂಢನಂಬಿಕೆಗಳು ನಮಗೆ ಅಥಾವ ಇತರರಿಗೆ ತುಂಬಾ ತೊಂದರೆಗಳನ್ನು ಉಂಟು ಮಾಡಬಹುದು. ಕೆಲವು ಮೂಢನಂಬಿಕೆಗಳು ಮಾರಣಾಂತಿಕವೂ ಆಗಿರಬಹುದು. ಉದಾಹರಣೆಗೆ ಹಾವು ಕಚ್ಚಿದಾಗ ಮಂತವಾದಕ್ಕೆ ಹೋಗುವುದು, ಬಿಸಿನೀರು/ಬೆಂಕಿ ತಾಗಿದಾಗ ಉರಿ ತೆಗೆಯುವುದು ಇತ್ಯಾದಿ ನಂಬಿಕೆಗಳು ನಮಗೆ ತುಂಬಾ ನಷ್ಟವನ್ನು ಉಂಟು ಮಾಡುತ್ತವೆ. ಮನೆಯಲ್ಲಿ ಯಾವುದಾದರೂ ಕಿರಿಕಿರಿ ಉಂಟಾದರೆ ದೋಷ ಪರಿಹಾರ, ಮಂತ್ರವಾದ ಎಂದು ಹೇಳಿ ಧಾರಾಳ ಹಣ ಖರ್ಚು ಮಾಡುವವರು ಇದ್ದಾರೆ. ಕಟ್ಟಿದ ಮನೆಯೆನ್ನೋ ಅಥವಾ ಮನೆಯ ಭಾಗವನ್ನೋ ಮುರಿಯುವುದು, ಮತ್ತೆ ಮತ್ತೆ ಮನೆ ಬದಲಾಯಿಸುವುದು ಇತ್ಯಾದಿ ವಾಸ್ತು ಸಂಬಂಧ ನಂಬಿಕೆಗಳು ಆರ್ಥಿಕವಾಗಿ ಜನರು ತೊಂದರೆಗೆ ಒಳಗಾಗುವಂತೆ ಮಾಡುತ್ತವೆ. ಜನರನ್ನು ದೂರ ಮಾಡುವುದು, ಸ್ಪರ್ಶಿಸದಿರುವುದು ಅವರಿಗೆ ನೋವು ಉಂಟು ಮಾಡುತ್ತವೆ. ಕೆಲವೊಂದು ನಂಬಿಕೆಗಳಿಗೆ ವೈಜ್ಞಾನಿಕ ಆಧಾರಗಳೂ ಇವೆ. ಅವುಗಳನ್ನು ಮೂಢನಂಬಿಕೆ ಎನ್ನಲಾಗದು. ಉದಾಹರಣೆಗೆ ಉತ್ತರ ಭಾಗಕ್ಕೆ ತಲೆ ಹಾಕಿ ಮಲಗ ಬಾರದು ಎಂಬುದು ಭೂಮಿಯ ಗುರುತ್ವಾಕರ್ಷಣಾ ಶಕ್ತಿಗೆ ಸಂಬಂಧಿಸಿದುದಾಗಿದೆ. ಏನಿದ್ದರೂ ವೈಜ್ಞಾನಿಕ ಆಧಾರವಿಲ್ಲದ, ಎಷ್ಟೋ ಕಾಲದಿಂದ ನಡೆದುಕೊಂಡು ಬರುತ್ತಿರುವ ನಂಬಿಕೆಗಳನ್ನು ನಾವು ತೊಡೆದುಹಾಕಬೇಕು.

# ಆಸೆ

**ಓದುವಿಕೆ - ಹಂತ 1**

ಮೊದಲಿಗೆ ಮಕ್ಕಳು ವೈಯಕ್ತಿಕವಾಗಿ ಮೌನವಾಗಿ ಪದ್ಯವನ್ನು ಓದುವರು.
ಉತ್ತಮವಾದ ರಾಗ ಸಂಯೋಜನೆಯೊಂದಿಗೆ ವೈಯಕ್ತಿಕವಾಗಿ ಹಾಡಲು ಅವಕಾಶ ನೀಡುವುದು.
ಅಧ್ಯಾಪಕರು ರಾಗ, ತಾಳ ಬದ್ಧವಾಗಿ ಹಾಡುವುದು.
ಐ.ಸಿ.ಟಿ ಸಾಧ್ಯತೆ ಉಪಯೋಗಿಸಿ ಹಾಡನ್ನು ಕೇಳಿಸುವುದು.
ಉತ್ತಮವಾದ ರಾಗವನ್ನು ಹೊಂದಿರುವುದನ್ನು ಆಯ್ಕೆ ಮಾಡುವುದು.

**ಹಂತ 2**

ಪದ್ಯವನ್ನು ಗಟ್ಟಿಯಾಗಿ ಓದಲು ಹೇಳುವುದು.
ಪದ್ಯದಲ್ಲಿ ಬಂದಿರುವ ಕಠಿಣ ಪದಗಳ ಅರ್ಥವನ್ನು ಪದಕೋಶದ ಸಹಾಯದಿಂದ ಕಂಡುಹಿಡಿಯಲು ಅಧ್ಯಾಪಕರು ಸಹಕರಿಸುವುದು. ಹಾಗೆಯೇ ಪ್ರಾಸ ಪದಗಳು, ವಿರೋಧಾರ್ಥ ಪದಗಳನ್ನು ಗುರುತಿಸುವುದು. ಈ ಮೂಲಕ ತಪ್ಪುಗಳನ್ನು ತಿದ್ದಲು ಸಹಕರಿಸುವುದು. ಪದ್ಯದ ಪ್ರಧಾನ ಆಶಯವಾದ ದೇಶಭಕ್ತಿಯ ಕುರಿತು ಮಾಹಿತಿಯನ್ನು ತಿಳಿಯುವುದು .

✍ **ಹಾಡಿರಿ**

ಮಕ್ಕಳು ವೈಯಕ್ತಿಕವಾಗಿ ಆಸೆ ಪದ್ಯವನ್ನು ಓದಲಿ. ಬಳಿಕ ಗುಂಪುಗಳಲ್ಲಿ ಕುಳಿತು ಆ ಕವಿತೆಗೆ ಸೂಕ್ತವಾದ ರಾಗ, ತಾಳ, ಲಯವನ್ನು ಕಂಡುಕೊಳ್ಳಲಿ. ಅನಂತರ ಪ್ರತಿಯೊಂದು ಗುಂಪುಗಳು ರಾಗ, ತಾಳದೊಂದಿಗೆ ಹಾಡಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಾಯ ಮಾಡುವುದು.

✍ **ಸ್ವಾರಸ್ಯ ಬರೆಯಿರಿ**

ಕವಿತೆಯ ಸ್ವಾರಸ್ಯ ಬರೆಯುವ ಚಟುವಟಿಕೆಯು ಕವಿತೆಯಲ್ಲಿ ತಮಗೆ ಸಿಕ್ಕಿರುವ ಸ್ವಾರಸ್ಯಕರವಾದ ಅಂಶಗಳನ್ನು ಗುರುತಿಸಲಿರುವ ಒಂದು ಸಂದರ್ಭವಾಗಿದೆ. ಕೊಟ್ಟಿರುವ ಕವಿತೆಯ ನೇರವಾದ ಅರ್ಥವನ್ನು ಬರೆದು ನಂತರ ಕವಿತೆಯ ಸೌಂದರ್ಯವು ತಮಗೆ ಯಾವ ರೀತಿಯಲ್ಲಿ ಸ್ವಾರಸ್ಯಕರವಾಗಿದೆ ಮತ್ತು ಅದು ಯಾಕೆ ಇಷ್ಟವಾಗಿದೆ ಎಂಬುದನ್ನು ಬರೆಯಬೇಕು. ವಿದ್ಯಾರ್ಥಿಗಳು ಇಲ್ಲಿ ಕೊಟ್ಟಿರುವ ಪದ್ಯದ ಭಾಗವನ್ನು ಗಮನಿಸುವರು.

ತೋಟದ ಕಂಪಿನ ಉಸಿರಲ್ಲಿ ತೇಲುವ
ಜೇನಾಗುವ ಆಸೆ
ಕಡಲಿನ ನೀಲಿಯ ನೀರಲಿ ಬಳುಕುವ
ಮೀನಾಗುವ ಆಸೆ

**ಸ್ವಾರಸ್ಯವನ್ನು ಹೀಗೂ ಬರೆಯಬಹುದಲ್ಲವೇ**

ಇವು ಕೆ.ಎಸ್ ನರಸಿಂಹಸ್ವಾಮಿ ಅವರ ಬರೆದ ಆಸೆ ಎಂಬ ಕವನದ ಕೆಲವು ಸಾಲುಗಳಾಗಿವೆ. ಇಲ್ಲಿ ಕವಿಯು ತಾನು ಒಂದು ಮಗುವಾಗಿ ತನ್ನ ಆಸೆಗಳೇನು ಎಂಬುದನ್ನು ತುಂಬಾ ಸೊಗಸಾಗಿ ನಿರೂಪಿಸಿದ್ದಾರೆ. ಗಿಡ ಮರ ಬಳ್ಳಿಗಳು ಇರುವ ಸುಂದರವಾದ ತೋಟದಲ್ಲಿ ಅರಳಿರುವ ಹೂವಿನಲ್ಲಿ ಅಡಗಿರುವ ಮಕರಂದವಾಗಲು ನನಗೆ ಆಸೆ ಇದೆ. ಸ್ವತಂತ್ರವಾಗಿ ವಿಶಾಲವಾದ ಕಡಲಿನ ನೀರಿನಲ್ಲಿ ಈಜಾಡುವ ಆಸೆ ಇದೆ ಎಂದು ಹೇಳುತ್ತಾರೆ. ಪ್ರಕೃತಿಯ ವರದಾನವಾಗಿರುವ ಮರ, ಗಿಡ, ಹೂ, ಜೇನು ಇತ್ಯಾದಿಗಳನ್ನು ಅವರು ಇಷ್ಟಪಡುತ್ತಾರೆ ಎಂಬುದು ಮಾತ್ರವಲ್ಲ, ಸಿಹಿಯಾದ ಜೇನು ತಾನಾಗಬೇಕು ಎಂದು ಆಸೆ ಪಡಲು ಬೇರೊಂದು ಕಾರಣವೂ ಇದೆ ಎಂಬುದನ್ನು ನಾವು ಊಹಿಸಬಹುದು. ಒಂದು ಸುಮಧುರವಾದ ವಸ್ತು ತನ್ನನ್ನು ಇತರರು ಇಷ್ಟಪಟ್ಟು ತಿನ್ನಲಿ ನನ್ನಿಂದ ಪರರಿಗೆ ಉಪಕಾರವಾಗಲಿ ಎಂಬ ಆಸೆ ಇಟ್ಟುಕೊಂಡಿರುತ್ತವೆ ಎಂದು ಊಹಿಸಬಹುದು. ಮಾತ್ರವಲ್ಲದೆ ಸಮುದ್ರದಲ್ಲಿ ಸ್ವಚ್ಛಂದವಾಗಿ ಈಜಾಡುವುದು ಎಂದರೆ ಅದೊಂದು ಸ್ವಾತಂತ್ರ್ಯದ ಸಂಕೇತ. ಕಡಲಿನ ವಿಸ್ಮಯವನ್ನು ಹುಡುಕುತ್ತಾ ಎಲ್ಲೆಂದರಲ್ಲಿ ಸ್ವಚ್ಛಂದವಾಗಿ ವಿಹರಿಸಬೇಕು ಎಂದರೆ ಭೂಮಿಯಲ್ಲಿ ತನಗೆ ಯಾವುದೇ ಮಿತಿಗಳಿರಬಾರದು ಎಂಬುದನ್ನು ಸೂಚಿಸುತ್ತದೆ.

✍ **ಆಸ್ವಾದನಾ ಟಿಪ್ಪಣಿ ಬರೆಯಿರಿ**

ಕವಿತೆಯ ಸಾರಾಂಶವು ಸ್ವಾರಸ್ಯವೂ ಬೇರೆ ಬೇರೆಯಾಗಿದೆಯೆಂದು ಅಧ್ಯಾಪಕರು ವಿವರಿಸಬೇಕು.

ಸಾರಾಂಶ ಎಂದರೆ ಪದ್ಯದಲ್ಲಿ ಮೇಲ್ಮಟ್ಟಕ್ಕೆ ಕಾಣುವ ಅರ್ಥ ಮಾತ್ರವಾಗಿದೆ. ಆಸ್ವಾದನಾ ಟಿಪ್ಪಣಿ ಎಂದರೆ ಓದುಗರು ಆ ಪದ್ಯವನ್ನು ತಾವು ಅರ್ಥೈಸಿದಂತೆ ಅಥವಾ ತಮಗೆ ಅರ್ಥವಾದಂತೆ ವ್ಯಾಖ್ಯಾನಿಸಿಕೊಳ್ಳಬಹುದು.

**ಈ ಪದ್ಯದ ಆಸ್ವಾದನ ಟಿಪ್ಪಣಿ ಹೀಗೂ ಇರಬಹುದಲ್ಲವೇ**

ಕೆ ಎಸ್ ನರಸಿಂಹಸ್ವಾಮಿಗಳು ಬರೆದ ಆಸೆ ಕವನದಲ್ಲಿ ಹುಡುಗಿಯೊಬ್ಬಳು ತನ್ನ ಹಲವು ಆಸೆಗಳನ್ನು ಪ್ರಕಟಗೊಳಿಸುತ್ತಿದ್ದಾಳೆ. ಹಕ್ಕಿಯ ಹಾಡನ್ನು ಆಲಿಸುತ್ತಾ ಅದಕ್ಕೆ ಮೆಚ್ಚುಗೆಯಾಗಿ ತಲೆದೋಗುತ್ತಿರುವ ಹೂವು ತಾನಾಗಬೇಕು. ದನದ ಕೊರಳಿಗೆ ಕಟ್ಟಿದ ಹೆಜ್ಜೆಯಿಂದ ಹೊರಹೊಮ್ಮುವ ಇಂಪಾದ ದನಿಯಾಗಿ ಅದನ್ನು ಕೇಳುವ ಜನರ ಮನಸ್ಸಿಗೆ ಮನಸ್ಸಿಗೆ ಸಂತೋಷವನ್ನು ನೀಡಲು ನನ್ನಿಂದ ಸಾಧ್ಯವಾಗಬೇಕು. ಏಳು ವರ್ಣಗಳ ಕಾಮನಬಿಲ್ಲಿನೊಂದಿಗಿರುವ ಮೋಡವಾಗಿ ಮಳೆ ನೀರನ್ನು ಸುರಿಸಿ ಭೂಮಿಗೆ ತಂಪಾಗಿಸಿ ಭೂಮಿಯ ಮೇಲೆ ಹಸಿರು ಹೊದಿಕೆಯನ್ನು ಸೃಷ್ಟಿಸುವವಳಾಗಬೇಕು. ಚಿನ್ನದ ಬಣ್ಣದಿಂದ ಕಂಗೊಳಿಸುವ ಜಿಂಕೆಯ ಕಣ್ಣಿನಿಂದ ಮಿರ ಮಿರನೆ ಹೊರಹೊಮ್ಮುವ ಮಿಂಚಾಗಿ ನಾನು ಶೋಭಿಸುವ ಆಸೆ ನನ್ನದು. ಹಾಗೆ ನನ್ನ ವ್ಯಕ್ತಿತ್ವವು ಹೊರಹೊಮ್ಮಬೇಕು ಸುತ್ತಮುತ್ತಲಿನ ಪ್ರಕೃತಿಯ ಪರಿಮಳಯುಕ್ತ ಹೂಗಳಿಂದ ಸಿಗುವ ಮಕರವಂದವನ್ನು ಹೀರಿ ದುಂಬಿಗಳು ಯಾವ ರೀತಿಯಲ್ಲಿಸುಮಧುರವಾದ ಜೇನು ತುಪ್ಪವನ್ನು ಒದಗಿಸುತ್ತವೆ. ಅದೇ ರೀತಿಯಲ್ಲಿನನ್ನಿಂದ ಈ ಜಗತ್ತಿಗೆ ಸುಮಧುರವಾದ ಅನುಭವಗಳು ಸಿಗಲಿ ಎಂಬುದು ನನ್ನ ಆಸೆ. ಸಾಗರದ ಆಳದಲ್ಲಿರುವ ಮೀನಿನಂತೆ ಈಜಾಡುತ್ತಾ ಅಲ್ಲಿನ ಅದ್ಭುತಗಳನ್ನು ಹುಡುಕಿಕೊಂಡು ಆ ವಿಸ್ಮಯಗಳನ್ನು ಜಗತ್ತಿಗೆ ತಿಳಿಸುವ ಆಸೆ, ಸಿಡಿಲು ಗುಡುಗು ಏನೇ ಇರಲಿ ಬಿರುಗಾಳಿಯೊಂದಿಗೆ ಆರ್ಭಟಿಸುವ ಮಳೆಯೇ ಇರಲಿ ಅದನ್ನು ಲೆಕ್ಕಿಸದೆ ಧೈರ್ಯದಿಂದ ಎದೆಯೊಡ್ಡಿ ಮುಂದೆ ಸಾಗ ನನಗಿಷ್ಟ. ಅಂದರೆ ಜೀವನದಲ್ಲಿ ಎದುರಾಗುವ ಯಾವುದೇ ಸವಾಲುಗಳಿಗೆ ಜಗ್ಗದೆ ಎದುರಿಸಿಕೊಂಡು ಹೋಗಲು ಅವಳು ಆಶಿಸುತ್ತಾಳೆ. ಮುಂದೆ ಬರಬಹುದಾದ ಕಷ್ಟಗಳೆಂಬ ಕತ್ತಲನ್ನು ನಿವಾರಿಸಿ ಸುಖವನ್ನು ಸಂತೋಷವನ್ನು ಜೀವನದಲ್ಲಿ ಬೆಳಗುವಂಥ ಆಸೆ ಅವಳಿಗೆ. ಈ ಪ್ರಕೃತಿ ಈ ಮಣ್ಣು ಇಲ್ಲಿನ ಕಷ್ಟ ಸಂತೋಷಗಳು ಸುಖಗಳು ಒಳಗೊಂಡ ಮಾನವ ಜೀವನವನ್ನು ಪ್ರತಿಬಿಂಬಿಸಬೇಕು. ಎಂಬುದು ನನ್ನ ದೊಡ್ಡ ಆಸೆ ಮನುಷ್ಯನ ಅಂತರಂಗದಲ್ಲಿ ಯಾವತ್ತೂ ಇರಬೇಕಾದ ಪ್ರೀತಿ ಕರುಣೆ ಮಾನವೀಯತೆಗಳೊಂದಿಗೆ ತಾನು ಮಿಡಿಯಬೇಕೆಂಬ ಆಸೆ ಈ ಹುಡುಗಿಯದ್ದು. ಈ ಪದ್ಯದಲ್ಲಿ ಕವಿಯು ಪ್ರಪಂಚದ ಉತ್ತಮ ಅಂಶಗಳಲ್ಲಿ ತಾನಿದ್ದುಕೊಂಡು ಅದನ್ನು ಹೊರ ಜಗತ್ತಿಗೆ ನೀಡಬಯಸುತ್ತಾಳೆ. ಮಾತ್ರವಲ್ಲದೆ ಈ ಪ್ರಪಂಚದ ಸರ್ವಜನರ ನೋವು ನಲಿವುಗಳಲ್ಲಿ ತಾನು ಭಾಗಿಯಾಗಬೇಕು ಎಂಬ ಆಸೆ ಇಲ್ಲಿನ ಪ್ರಧಾನ ಆಶಯವಾಗಿದೆ.

✍ **ಸಾಲು ಗುರುತಿಸಿರಿ**

- ಮುಂದಿನ ಬದುಕಿನ ಕಷ್ಟಗಳ ಕತ್ತಲೆಗೆ ಬೆಳಕಾಗುವುದು

 - ನಾಳೆಯ ಬದುಕಿನ ಇರುಳಿನ ತಿರುಳಿಗೆ ದೀಪವನಿಡುವಾಸೆ

- ಪ್ರಕೃತಿ ನೀಡಿದ ಉಡುಗೊರೆ ,ಕಷ್ಟ ಸುಖಗಳನ್ನು ಗುರುತಿಸುವುದು

 - ಮಣ್ಣಿನ ಕೊಡುಗೆಗೆ ನೋವಿಗೆ ನಲಿವಿಗೆ ಕನ್ನಡಿ ಹಿಡಿವಾಸೆ

- ಮನುಷ್ಯನ ಹೃದಯದಲ್ಲಿರುವ ಸ್ನೇಹ ಕರುಣೆಗಳನ್ನು ಅಳವಡಿಸಿಕೊಳ್ಳುವುದು.

 - ಮಾನವ ಹೃದಯದ ಕರುಣೆಗೆ ಒಲವಿಗೆ ದನಿಗೂಡಿಸುವ ಆಸೆ.

✍ **ಭರ್ತಿಗೊಳಿಸಿರಿ**

ಆವರಣದಿಂದ ಸೂಕ್ತವಾದ ಪದವನ್ನು ಆರಿಸಿ ಬರೆಯಿರಿ.

(ಮಿಂಚು, ಜೇನು, ಹೂವು, ಮುಗಿಲು)

| | |
|---|---|
| ತೋಟದ ಕಂಪಿನ ಉಸಿರಲಿ ತೇಲುವ | ಜೇನು |
| ಹಕ್ಕಿಯ ಹಾಡಿಗೆ ತಲೆದೂಗುವ | ಹೂ |
| ಹಬ್ಬಿದ ಕಾಮನ ಬಿಲ್ಲಿನ ಮೇಲಿನ | ಮುಗಿಲು |
| ಚಿನ್ನದ ಬಣ್ಣದ ಜಿಂಕೆಯ ಕಣ್ಣಿನ | ಮಿಂಚು |

✍ **ಸಾಲು ಸೇರಿಸಿರಿ**

ಪಾಠಪುಸ್ತಕದಲ್ಲಿ ನೀಡಿರುವ ಸಾಲುಗಳನ್ನು ವೈಯಕ್ತಿಕವಾಗಿ ಓದುವರು. ಸಾಲುಗಳಲ್ಲಿನ ಪ್ರಧಾನ ಆಶಯ, ಅದರ ವಿಶೇಷತೆಗಳು ಇತ್ಯಾದಿಗಳನ್ನು ಚರ್ಚೆಯ ಮೂಲಕ ತಿಳಿದುಕೊಳ್ಳುವರು. ಬಳಿಕ ಆಶಯಕ್ಕೆ ಹೊಂದಿಕೊಂಡು ವೈಯಕ್ತಿಕವಾಗಿ ಸಾಲುಗಳನ್ನು ಸೇರಿಸುವರು. ಬರವಣಿಗೆ ಹಂತಗಳನ್ನು ಪಾಲಿಸಿಕೊಂಡು ಸಾಲುಗಳನ್ನು ಮುಂದುವರಿಸುವುದು. ಸಹಪಾಠಿಗಳ ಮತ್ತು ಅಧ್ಯಾಪಕರ ಸಹಾಯದಿಂದ ಸೂಕ್ತ ಬದಲಾವಣೆಗಳನ್ನು ನಡೆಸುವುದು. ಉತ್ತಮವಾಗಿ ಸಾಲುಗಳನ್ನು ಸೇರಿಸಿದವರನ್ನು ಅಧ್ಯಾಪಕರು ಅಭಿನಂದಿಸುವುದು.

✍ **ಸಂಗ್ರಹಿಸಿ ಹಾಡಿರಿ**

ಕೆ.ಎಸ್ ನರಸಿಂಹಸ್ವಾಮಿಯವರು ಬರೆದ 'ದೀಪವು ನಿನ್ನದೆ ಗಾಳಿಯು ನಿನ್ನದೆ......' ಎಂಬ ಭಾವಗೀತೆಯೊಂದಿಗೆ ಇತರ ಭಾವಗೀತೆಗಳನ್ನು ಸಂಗ್ರಹಿಸಿ ಹಾಡಲು ಮಕ್ಕಳನ್ನು ಪ್ರೋತ್ಸಾಹಿಸುವುದು.

**ಸಂಗ್ರಹಿಸಿ ಹಾಡಿರಿ**

ದೀಪವು ನಿನ್ನದೇ, ಗಾಳಿಯು ನಿನ್ನದೇ
ಆರದಿರಲಿ ಬೆಳಕು
ಕಡಲು ನಿನ್ನದೇ, ಹಡಗು ನಿನ್ನದೇ
ಮುಳುಗದಿರಲಿ ಬದುಕು
ದೀಪವು ನಿನ್ನದೇ, ಗಾಳಿಯು ನಿನ್ನದೇ
ಆರದಿರಲಿ ಬೆಳಕು
ಬೆಟ್ಟವು ನಿನ್ನದೇ ಬಯಲು ನಿನ್ನದೇ
ಹಬ್ಬಿನಗಲಿ ಪ್ರೀತಿ
ಬೆಟ್ಟವು ನಿನ್ನದೇ, ಬಯಲು ನಿನ್ನದೇ
ಹಬ್ಬಿನಗಲಿ ಪ್ರೀತಿ
ನೆಳಲೋ, ಬಿಸಿಲೋ ಎಲ್ಲವು ನಿನ್ನದೇ
ನೆಳಲೋ, ಬಿಸಿಲೋ ಎಲ್ಲವು ನಿನ್ನದೇ
ಇರಲಿ ಏಕರೀತಿ
ದೀಪವು ನಿನ್ನದೇ, ಗಾಳಿಯು ನಿನ್ನದೇ
ಆರದಿರಲಿ ಬೆಳಕು
ಆಗೊಂದು ಸಿಡಿಲು, ಈಗೊಂದು ಮುಗಿಲು
ನಿನಗೆ ಅಲಂಕಾರ
ಆಗೊಂದು ಸಿಡಿಲು, ಈಗೊಂದು ಮುಗಿಲು
ನಿನಗೆ ಅಲಂಕಾರ
ಅಲ್ಲೊಂದು ಹಕ್ಕಿ, ಇಲ್ಲೊಂದು ಮುಗುಳು
ಅಲ್ಲೊಂದು ಹಕ್ಕಿ, ಇಲ್ಲೊಂದು ಮುಗುಳು
ನಿನಗೆ ನಮಸ್ಕಾರ
ದೀಪವು ನಿನ್ನದೇ, ಗಾಳಿಯು ನಿನ್ನದೇ
ಆರದಿರಲಿ ಬೆಳಕು
ಅಲ್ಲಿ ರಣದುಂದುಭಿ
ಇಲ್ಲೊಂದು ವೀಣೆ
ನಿನ್ನ ಪ್ರತಿಧ್ವನಿ
ಆ ಮಹಾಕಾವ್ಯ, ಈ ಭಾವಗೀತೆ
ಆ ಮಹಾಕಾವ್ಯ, ಈ ಭಾವಗೀತೆ
ನಿನ್ನ ಪದಧ್ವನಿ
ದೀಪವು ನಿನ್ನದೇ, ಗಾಳಿಯು ನಿನ್ನದೇ
ಆರದಿರಲಿ ಬೆಳಕು
ಕಡಲು ನಿನ್ನದೇ, ಹಡಗು ನಿನ್ನದೇ
ಮುಳುಗದಿರಲಿ ಬದುಕು
ದೀಪವು ನಿನ್ನದೇ, ಗಾಳಿಯು ನಿನ್ನದೇ
ಆರದಿರಲಿ ಬೆಳಕು

# ಹಂಚಿ ತಿಂದ ಗೆಳೆಯರು

✍ **ಸಂದರ್ಭ ಬರೆಯಿರಿ**

- "ಮನೆಯಲ್ಲಿ ಅಕ್ಕಿ ಮುಗಿದಿದೆ. ಗಂಜಿ ಮಾಡಿಲ್ಲ, ಮತ್ತೆ ಹೇಗೆ ತರಲಿ? ಏನನ್ನು ತರಲಿ?"

  ಮಧ್ಯಾಹ್ನದ ಊಟಕ್ಕಾಗಿ ಮಕ್ಕಳನ್ನು ಶಾಲೆಯಿಂದ ಹೊರ ಬಿಟ್ಟಾಗ ಯಾವಾಗಲೂ ಜೊತೆಗೆ ಬರುತ್ತಿದ್ದು ಈಗ ಎರಡು ದಿನದಿಂದ ಬುತ್ತಿ ತರದಿರುವ ಇರ್ಷಾದ್ ನಲ್ಲಿ ಗೋಪಿ ಕೇಳುತ್ತಾನೆ "ಯಾಕೆ ಬುತ್ತಿ ತಂದಿಲ್ಲ ಹೇಳು?" ಎಂದು ಒತ್ತಾಯ ಮಾಡಿದಾಗ ಈ ಮಾತನ್ನು ಇರ್ಷಾದನು ಗೋಪಿಗೆ ಹೇಳಿದನು.

- "ಮಗೂ, ನೀನು ಸತ್ಯವನ್ನೇ ಆಡಿದ್ದೀಯಾ ನಿಜಕ್ಕೂ ನನಗೆ ಸಂತೋಷವಾಗಿದೆ. ನಮಗೆ ಶಕ್ತಿ ಇರುವಷ್ಟು ಕಾಲ ಇಂಥ ಕೆಲಸ ನಡೆಯುತ್ತಿರಲಿ"

  ಈ ಮಾತನ್ನು ಗೋಪಿಯ ತಾಯಿಯು ಗೋಪಿಯೊಡನೆ ಹೇಳಿದರು. ಬುತ್ತಿ ತಾರದೆ ಹಸಿದಿರುತ್ತಿದ್ದ ಇರ್ಷಾದನಿಗೆ ತನ್ನ ಬುತ್ತಿಯಿಂದ ಸ್ವಲ್ಪ ಆಹಾರವನ್ನು ಕೊಟ್ಟು ಹಂಚಿ ತಿನ್ನುವ ವಿಷಯವನ್ನು ಗೋಪಿಯು ಅಮ್ಮನಲ್ಲಿ ಹೇಳಿದಾಗ ಅಮ್ಮನು ಗೋಪಿಯೊಡನೆ ಹೇಳಿದ ಮಾತು ಇದಾಗಿದೆ.

✍ **ಸಂಭಾಷಣೆಯನ್ನು ಬರೆದು ಅಭಿನಯಿಸಿರಿ**

ಪುಸ್ತಕದಲ್ಲಿರುವ ಸಂಭಾಷಣೆ ಮತ್ತು ಸಾಂದರ್ಭಿಕವಾಗಿ ಸೇರಿಸಬಹುದಾದ ಮಾತುಗಳನ್ನು ಸೇರಿಸಿ ಮಕ್ಕಳು ವೈಯಕ್ತಿಕವಾಗಿ ಸಂಭಾಷಣೆಯನ್ನು ಬರೆಯುವರು. ಅದನ್ನು ಕೆಲವರಿಂದ ಮಂಡಿಸಲು ತಿಳಿಸುವುದು. ಬಳಿಕ ಗುಂಪಿನಲ್ಲಿ ಉತ್ತಮಪಡಿಸಿ, ಕೆಲವು ಗುಂಪಿನ ಒಬ್ಬರು ಮಂಡಿಸಲಿ. ಅಗತ್ಯದ ಬದಲಾವಣೆಗಳನ್ನು ಅಧ್ಯಾಪಕರು ತಿಳಿಸಿದ ಮೇಲೆ ಉತ್ತಮಪಡಿಸಲಿ.

**ಸಂಭಾಷಣೆ ಹೀಗೂ ಇರಬಹುದಲ್ಲವೇ**

ಗೋಪಿ ಮತ್ತು ಇರ್ಷಾದ್

(ಮಧ್ಯಾಹ್ನದ ಊಟಕ್ಕೆ ಗಂಟೆ ಬಾರಿಸುತ್ತದೆ)

**ಗೋಪಿ:** ಬಾರೋ ಇರ್ಷಾದ್, ಜೊತೆಯಲ್ಲಿ ಕುಳಿತು ಊಟ ಮಾಡೋಣ .

**ಇರ್ಷಾದ್:** ನಾನು ಬುತ್ತಿ ತಂದಿಲ್ಲ.ನೀನು ಊಟ ಮಾಡು.

**ಗೋಪಿ:** ಅದೇನು ನಿಮಗೆ ಇವತ್ತು ಉಪವಾಸವೇ?

**ಇರ್ಷಾದ್ :** ಅಲ್ಲ ನನಗೆ ಹಸಿವಿಲ್ಲ ಅಷ್ಟೇ .

**ಗೋಪಿ :** ಇದೊಳ್ಳೆ ತಮಾಷೆ. ನಿನಗೆ ಮಧ್ಯಾಹ್ನ ಹಸಿವು ಆಗುವುದಿಲ್ಲ ಎಂದು ಬೆಳಗ್ಗೆಯೇ ಗೊತ್ತಿತ್ತಾ? ಮತ್ಯಾಕೆ ಬುತ್ತಿ ತಂದಿಲ್ಲ?

**ಇರ್ಷಾದ್ :** ಹೌದು ಬೆಳಿಗ್ಗೆನೇ ಹಸಿವಿಲ್ಲ. ಹಾಗೆ ತಂದಿಲ್ಲ.

**ಗೋಪಿ:** ನಿನಗೆ ಹಸಿವಿಲ್ಲವೆಂದು ನೀನು ಸುಳ್ಳು ಹೇಳುತ್ತಿರುವೆ ನಿನ್ನನ್ನು ನಾನು ಬೆಳಗಿನಿಂದಲೇ ಗಮಿಸುತ್ತಿದ್ದೇನೆ . ನಿನಗೇನೋ ಸಮಸ್ಯೆ ಇದೆ.ನೀನು ನನ್ನ ದೋಸ್ತಿ ಅಲ್ಲವೇನೋ? ನನ್ನಲ್ಲಿ ಯಾಕೆ ಗುಟ್ಟು ?ಏನು ವಿಷಯ? ಹೇಳು

**ಇರ್ಷಾದ್ :** (ಅಳುತ್ತಾ) ಎರಡು ಮೂರು ದಿನಗಳಿಂದ ಅಪ್ಪನಿಗೆ ಕೆಲಸ ಇಲ್ಲ. ಮನೆಯಲ್ಲಿ ಅಕ್ಕಿ ಮುಗಿದಿದೆ .ಗಂಜಿ ಮಾಡಿಲ್ಲ ಮತ್ತೆ ಹೇಗೆ ತರಲಿ ?ಏನನ್ನು ತರಲಿ?

**ಗೋಪಿ :** ಹಾಗಾದರೆ ನೀನು ಬೆಳಗ್ಗೆನೂ ಏನೂ ತಿಂದಿಲ್ಲವೇ

**ಇರ್ಷಾದ್ :** ಇಲ್ಲ.

**ಗೋಪಿ :** ಆಯಿತು ಅಳಬೇಡ ನೀನು ಬುತ್ತಿ ತರದಿದ್ದರೇನು ?ನಾನು ತಂದಿದ್ದೇನೆ ಅಲ್ವಾ ಸದ್ಯ ಇರೋದನ್ನು ಹಂಚಿ ತಿನ್ನೋಣ.

**ಇರ್ಶಾದ್ :** ಬೇಡ ಬೇಡ ನೀನು ತಿನ್ನು ನಾನು ಬರುವುದಿಲ್ಲ.

**ಗೋಪಿ :** ಆಯ್ತು ಹಾಗಾದರೆ ನೀನು ಬರೆದಿದ್ದರೆ ನಾನೂ ಬುತ್ತಿಯನ್ನು ಊಟ ಮಾಡುವುದಿಲ್ಲ.

**ಇರ್ಷಾದ್ :** ಯಾಕೆ ಸುಮ್ಮನೆ ಹಠ ಮಾಡಬೇಡ ನೀನಂತು ಬುತ್ತಿ ತಂದಿದ್ದೀಯಾ ಮತ್ತೆ ನೀನೇಕೆ ಉಪವಾಸ ಮಾಡಬೇಕು ?

**ಗೋಪಿ :** ನಾವಿಬ್ಬರು ಒಟ್ಟಿಗೆ ಶಾಲೆಗೆ ಬರುವವರು, ಒಂದೇ ತರಗತಿ .ನಿನಗೆ ನನ್ನ ಮೇಲೆ ಪ್ರೀತಿ ಇಲ್ಲವೇ? ನೀನು ಉಪವಾಸವಿದ್ದು ನಾನು ಮಾತ್ರ ತಿನ್ನುವುದು ಸರಿಯೇ ಹಾಗೆ ನನಗೂ ಬೇಡ ?

**ಇರ್ಷಾದ್ :** ಸರಿ ಹಾಗಾದರೆ ನಾನು ಬರುತ್ತೇನೆ.

(ಇಬ್ಬರು ಕೈತೊಳೆದು ಬರುತ್ತಾರೆ )

**ಗೋಪಿ :** ಇದರಲ್ಲಿ ಎರಡು ಇಡ್ಲಿಗಳಿವೆ. ನಿನಗೊಂದು ನನಗೊಂದು .

**ಇರ್ಶಾದ್ :** ನನ್ನಿಂದಾಗಿ ನಿನಗೆ ಅರೆ ಹೊಟ್ಟೆಯಾಯಿತು.

**ಗೋಪಿ :** ಇಲ್ಲ ನಿನ್ನನ್ನು ಬಿಟ್ಟು ತಿಂದಿದ್ದರೆ ತಿಂದದ್ದು ನನಗೆ ಜೀರ್ಣವಾಗುತ್ತಿರಲಿಲ್ಲ.

**ಇರ್ಶಾದ್ :** ಧನ್ಯವಾದಗಳು ಗೋಪಿ.

✍ **ಶೀರ್ಷಿಕೆಯನ್ನು ಬದಲಾಯಿಸಿರಿ.**

ಶೀರ್ಷಿಕೆ ಎಂಬುದು ಯಾವುದೇ ಒಂದು ಸಾಹಿತ್ಯ ಪ್ರಕಾರದ ಒಟ್ಟು ಆಶಯವನ್ನು ಸ್ಪಷ್ಟಪಡಿಸುತ್ತದೆ .ಕಥೆ, ಕವಿತೆ ,ಪ್ರಬಂಧ ಇತ್ಯಾದಿಗಳ ಶೀರ್ಷಿಕೆ ಬದಲಾಯಿಸಿ ಬರೆಯಲು ಮಕ್ಕಳಿಗೆ ಸಾಧ್ಯವಾದರೆ ಮತ್ತು ಶೀರ್ಷಿಕೆ ಅದಕ್ಕೆ ಸೂಕ್ತವಾಗಿದ್ದರೆ ಆಶಯ ಗ್ರಹಣ ಪೂರ್ಣವಾಗಿದೆ ಎಂದು ಅರ್ಥ .ಈ ಕಥೆಗೆ ಈ ಕೆಳಗಿನ ಶೀರ್ಷಿಕೆಗಳು ಸೂಕ್ತವಾಗಿವೆ.

1. ಮಾನವೀಯತೆ
2. ಹೃದಯವಂತ ಗೆಳೆಯ
3. ಹಂಚಿ ಉಂಡರೆ ಹಸಿವಿಲ್ಲ
4. ಕೂಡಿ ಬಾಳಿದರೆ ಸ್ವರ್ಗ
5. ಬೆಸುಗೆ

✍ **ಕಥೆ ಮುಂದುವರಿಸಿ ಬರೆಯಿರಿ**

ಒಂದು ದಿನ ಇರ್ಷಾದ್ ಗೋಪಿಯ ಮನೆಗೆ ಬಂದು ತಾನು ದುಬೈಗೆ ಹೋಗು ಹೋಗಲು ತನ್ನ ಭಾವನವರು ಎಲ್ಲ ವ್ಯವಸ್ಥೆ ಮಾಡಿದ್ದಾರೆ ತಾನು ಎರಡು ದಿವಸಗಳೊಳಗೆ ಹೋಗುವುದಾಗಿ ತಿಳಿಸಿದ. ಗೋಪಿಗೆ ತನ್ನ ಗೆಳೆಯನನ್ನು ದೂರ ಕಳುಹಿಸಲು ಬೇಸರವಾದರೂ ಹೇಗಾದರೂ ಒಳ್ಳೆಯ ಸ್ಥಿತಿಗೆ ತಲುಪಲಿ ಎಂದು ಅವನನ್ನು ಶುಭ ಹಾರೈಸಿ ಕಳುಹಿಸಿದ. ಹಾಗೆ ಇರ್ಷಾದ್ ದುಬಾಯಿಗೆ ಹೋಗಿ ಅಲ್ಲಿ ಒಂದು ದೊಡ್ಡ ಮಳಿಗೆಯಲ್ಲಿ ಕೆಲಸಕ್ಕೆ ಸೇರಿ ತುಂಬಾ ಸ್ಥಿತಿವಂತನಾದ. ಆದರೆ ಗೋಪಿಗೆ ತಾನು ಎಣಿಸಿದಂತೆ ಜೀವನದಲ್ಲಿ ಮುಂದೆ ಸಾಗಲು ಸಾಧ್ಯವಾಗಲಿಲ್ಲ ದೌರ್ಭಾಗ್ಯ ವಸತಿ ಅವನ ಅಪ್ಪನು ಅಸೌಖ್ಯದಿಂದ ಹಾಸಿಗೆ ಹಿಡಿದರು ಹಲವಾರು ವರ್ಷಗಳ ಚಿಕಿತ್ಸೆ ನಡೆಸಿದರೂ ರೋಗ ವಾಸಿಯಾಗಲಿಲ್ಲ .ಅಪ್ಪನ ಆರೋಗ್ಯಕ್ಕಾಗಿ ಅವರ ಎಲ್ಲಾ ಸಂಪತ್ತು ಮುಗಿದು ಹೋಯಿತು.ಆದರೂ ಚಿಕಿತ್ಸೆ ಫಲಕಾರಿಯಾಗದೆ ಒಂದು ದಿನ ಅವನ ಅಪ್ಪ ತೀರಿಕೊಂಡರು ಗೋಪಿಯ ಶಿಕ್ಷಣ ಅರ್ಧದಲ್ಲಿ ನಿಂತಿತು ಅವರ ಅಕ್ಕನ ಶಿಕ್ಷಣಕ್ಕೂ ತುಂಬಾ ಖರ್ಚಾಯಿತು. ವರ್ಷಗಳು ಕಳೆದಾಗ ಅಕ್ಕನ ಮದುವೆಗೆ ಎಂದು ತುಂಬಾ ಸಾಲ ಮಾಡಬೇಕಾಯಿತು ಮನೆಯಲ್ಲಿ ಮಾಡಿದ ತಿಂಡಿಯನ್ನು ನಮ್ಮ ಹೊರಗಡೆ ಮಾರಾಟ ಮಾಡಿ ಹೇಗಾದರೂ ಜೀವನ ಸಾಗಿಸುತ್ತಿದ್ದರು.ಇದು ಅವರ ಎಲ್ಲಾ ಖರ್ಚುಗಳಿಗೆ ಸಾಕಾಗುತ್ತಿರಲಿಲ್ಲ ಬೇರೆ ದಾರಿ ಇಲ್ಲದೆ ಗೋಪಿ ರೈಲುಗಳಲ್ಲಿ ಚಾ ಮಾರಲು ಆರಂಭಿಸಿದನು ಒಂದು ದಿನ ಚಾ ಮಾರುತ್ತಾ ರೈಲು ಒಂದರಲ್ಲಿ ಸಾಗುತ್ತಿರಬೇಕಾದರೆ... "ಒಂದು ಚಾ ಕೊಡಿಡ" ಎಂದು ಪರಿಚಿತ ಶಬ್ದವನ್ನು ಕೇಳಿದಂತಾಯಿತು. ಒಳ್ಳೆಯ ಕಟ್ಟು ಮತ್ತಿನ ಪ್ಯಾಂಟು ಕೂಟ ಧರಿಸಿದ ವ್ಯಕ್ತಿಗಳು ಅವನನ್ನು ಅವನು ಇವನನ್ನೇ ನೋಡಿದ ಇಬ್ಬರ ಕಣ್ಣಿನಲ್ಲಿ ನೀರು ತುಂಬಿತು ಇಬ್ಬರೂ ಪರಸ್ಪರ ಆಲಿಂಗನ ಮಾಡಿಕೊಂಡು ಇಬ್ಬರ ಬಾಯಿಂದಲೂ ಮಾತು ಹೊರಡಲಿಲ್ಲ ತುಂಬಾ ಹೊತ್ತದ ಮೇಲೆ ಇರ್ಷಾದ್ ಕೇಳಿದ "ಏನಾಯ್ತು ಗೋಪಿ ?ನಿನಗೆ ಏನಿದೆಲ್ಲ ನಿಮ್ಮ ಹೋಟೇಲು ಏನಾಯಿತು?" ಗೋಪಿ ಎಲ್ಲಾ ಕಥೆಗಳನ್ನು ಕೇಳಿದ. ಇರ್ಷಾದ್ ಈಗ ದೊಡ್ಡ ಶ್ರೀಮಂತನಾಗಿದ್ದು ಅವನಿಗೆ ಸ್ವಂತವಾಗಿ ದುಬೈಯಲ್ಲಿ ಅಂಗಡಿ ಇತ್ತು. ಗೋಪಿ ಮುಂದಿನ ರೈಲು ನಿಲ್ದಾಣದಲ್ಲಿ ಇಳಿಯುವಾಗ ಅವನ ಮನೆಯ ವಿಳಾಸ ಮತ್ತು ಫೋನ್ ನಂಬರ್ ಇರ್ಷಾದ್ ಕೇಳಿ ಪಡೆದುಕೊಂಡಿದ್ದ.ಇರ್ಷಾದ್ ಮರುದಿನವೇ

ಗೋಪಿಯ ಮನೆಗೆ ಬಂದು ಅವನ ತಾಯಿಯೊಡನೆ ಮಾತನಾಡಿದ. “ಎಲ್ಲವೂ ಸರಿ ಹೋಗುತ್ತದೆ. ನಾನು ನಾಳೆ ದುಬೈಗೆ ಹೋಗಿ ಫೋನ್ ಮಾಡುತ್ತೇನೆ” ಎಂದು ತಿಳಿಸಿ ಅವರನ್ನು ಸಮಾಧಾನ ಮಾಡಿ ಸ್ವಲ್ಪ ಹಣವನ್ನೂ ಅವರ ಕೈಗಿತ್ತು ಅಲ್ಲಿಂದ ಮರಳಿದ. ಅಂದಿನಿಂದ 10 ದಿವಸದ ಒಳಗೆ ಗೋಪಿಯನ್ನು ದುಬೈಗೆ ಬರಮಾಡಿಕೊಳ್ಳಲು ಎಲ್ಲಾ ವ್ಯವಸ್ಥೆಯನ್ನು ಇರ್ಷಾದ್ ಮಾಡಿದ್ದ. ಅವನ ಅವನಿಗೆ ಅಲ್ಲಿ ಉದ್ಯೋಗ ಒಂದನ್ನುವ್ಯವಸ್ಥೆ ಮಾಡಿದ್ದ.ತಾಯಿಯನ್ನು ಅಕ್ಕ ತನ್ನ ಮನೆಗೆ ಕರೆದುಕೊಂಡು ಹೋದಳು. ಇರ್ಷಾದ್ ತಿಳಿಸಿದಂತೆ ಗೋಪಿ ದುಬೈಯಲ್ಲಿ ಕೆಲಸಕ್ಕೆ ಸೇರಿಕೊಂಡ.ಹಲವಾರು ವರ್ಷಗಳ ಕಾಲ ಚೆನ್ನಾಗಿ ದುಡಿದು ತುಂಬಾ ಸ್ಥಿತಿವಂತನಾದ.ಅವನಿಗೆ ಇದ್ದ ಸಾಲವನ್ನು ಎಲ್ಲವನ್ನು ಮುಗಿಸಿ ಊರಲ್ಲಿ ಒಳ್ಳೆಯ ಮನೆ ಕಟ್ಟಿಸಿದ.ಹಲವಾರು ವರ್ಷಗಳು ದುಬೈಯ ವಾಸ ಕಳೆದಾಗ ಇರ್ಷಾದ್ ಮತ್ತು ಗೋಪಿ ಇಬ್ಬರೂ ಊರಿಗೆ ಮರಳಿ ಇಬ್ಬರು ಸೇರಿಕೊಂಡು ಒಂದು ದೊಡ್ಡ ಹೋಟೆಲ್ ವ್ಯಾಪಾರವನ್ನು ಆರಂಭಿಸಿದರು. ಮುಂದೆ ಇಬ್ಬರೂ ಕೂಡ ಹಲವಾರು ವರ್ಷ ಗೆಳೆಯರಾಗಿ ಸುಖವಾಗಿ ಬಾಳಿದರು ಒಂದು ದಿನ ಇರು ಶಾದಿ ಗೋಪಿಯ ಮನೆಗೆ ಬಂದು ತಾನು ದುಬೈಗೆ ಹೋಗು ಹೋಗಲು ತನ್ನ ಭಾವನವರು ಎಲ್ಲ ವ್ಯವಸ್ಥೆ ಮಾಡಿದ್ದಾರೆ ತಾನು ಎರಡು ದಿವಸಗಳೊಳಗೆ ಹೋಗುವುದಾಗಿ ತಿಳಿಸಿದ ಗೋಪಿಗೆ ತನ್ನ ಗೆಳೆಯನನ್ನು ದೂರ ಕಳುಹಿಸಲು ಬೇಸರವಾದರೂ ಹೇಗಾದರೂ ಒಳ್ಳೆಯ ಸ್ಥಿತಿಗೆ ತಲುಪಲಿ ಎಂದು ಅವನನ್ನು ಶುಭ ಹಾರೈಸಿ ಕಳುಹಿಸಿದ ಹಾಗೆ ಇಷಾದ್ ದುಬಾಯಿಗೆ ಹೋಗಿ ಅಲ್ಲಿ ಒಂದು ದೊಡ್ಡ ಮಳಿಗೆಯಲ್ಲಿ ಕೆಲಸಕ್ಕೆ ಸೇರಿ ತುಂಬಾ ಸ್ಥಿತಿವಂತನಾದ.ಆದರೆ ಗೋಪಿಗೆ ತಾನು ಎಣಿಸಿದಂತೆ ಜೀವನದಲ್ಲಿ ಮುಂದೆ ಸಾಗಲು ಸಾಧ್ಯವಾಗಲಿಲ್ಲ ದೌರ್ಭಾಗ್ಯ ವಸತಿ ಅವನ ಅಪ್ಪನು ಅಸೌಖ್ಯದಿಂದ ಹಾಸಿಗೆ ಹಿಡಿದರು ಹಲವಾರು ವರ್ಷಗಳ ಚಿಕಿತ್ಸೆ ನಡೆಸಿದರೂ ರೋಗ ವಾಸಿಯಾಗಲಿಲ್ಲ .ಅಪ್ಪನ ಆರೋಗ್ಯಕ್ಕಾಗಿ ಅವರ ಎಲ್ಲಾ ಸಂಪತ್ತು ಮುಗಿದು ಹೋಯಿತು.ಆದರೂ ಚಿಕಿತ್ಸೆ ಫಲಕಾರಿಯಾಗದೆ ಒಂದು ದಿನ ಅವನ ಅಪ್ಪ ತೀರಿಕೊಂಡರು ಗೋಪಿಯ ಶಿಕ್ಷಣ ಅರ್ಧದಲ್ಲಿ ನಿಂತಿತು ಅವರ ಅಕ್ಕನ ಶಿಕ್ಷಣಕ್ಕೂ ತುಂಬಾ ಖರ್ಚಾಯಿತು. ವರ್ಷಗಳು ( ತಿಂಡಿಯನ್ನು ನಮ್ಮ ಹೊರಗಡೆ ಮಾರಾಟ ಮಾಡಿ ಹೇಗಾದರೂ ಜೀವನ ಸಾಗಿಸುತ್ತಿದ್ದರು.ಇದು ಅವರ ಎಲ್ಲಾ ಖರ್ಚುಗಳಿಗೆ ಸಾಕಾಗುತ್ತಿರಲಿಲ್ಲ ಬೇರೆ ದಾರಿ ಇಲ್ಲದೆ ಗೋಪಿ ರೈಲುಗಳಲ್ಲಿ ಚಾ ಮಾರಲು ಆರಂಭಿಸಿದನು ಒಂದು ದಿನ ಚಾ ಮಾರುತ್ತಾ ರೈಲು ಒಂದರಲ್ಲಿ ಸಾಗುತ್ತಿರಬೇಕಾದರೆ... “ಒಂದು ಚಾ ಕೊಡಿಡ” ಎಂದು ಪರಿಚಿತ ಶಬ್ದವನ್ನು ಕೇಳಿದಂತಾಯಿತು. ಒಳ್ಳೆಯಕಟ್ಟುಮತ್ತಿನಪ್ಯಾಂಟುಕೂಟಧರಿಸಿದವ್ಯಕ್ತಿಗಳುಅವನನ್ನುಅವನುಇವನನ್ನೇನೋಡಿದಇಬ್ಬರಕಣ್ಣಿನಲ್ಲಿನೀರುತುಂಬಿತು ಇಬ್ಬರೂ ಪರಸ್ಪರ ಆಲಿಂಗನ ಮಾಡಿಕೊಂಡು ಇಬ್ಬರ ಬಾಯಿಂದಲೂ ಮಾತು ಹೊರಡಲಿಲ್ಲ ತುಂಬಾ ಹೊತ್ತದ ಮೇಲೆ ಇರ್ಷಾದ್ ಕೇಳಿದ “ಏನಾಯ್ತು ಗೋಪಿ ?ನಿನಗೆ ಏನಿದೆಲ್ಲ ನಿಮ್ಮ ಹೋಟೇಲು ಏನಾಯಿತು ಇತ್ತು. ಗೋಪಿ ಮುಂದಿನ ರೈಲು ನಿಲ್ದಾಣದಲ್ಲಿ ಇಳಿಯುವಾಗ ಅವನ ಮನೆಯ ವಿಳಾಸ ಮತ್ತು ಫೋನ್ ನಂಬರ್ ಇರ್ಷಾದ್ ಕೇಳಿ ಪಡೆದುಕೊಂಡಿದ್ದ.ಇರ್ಷಾದ್ ಮರುದಿನವೇ ಗೋಪಿಯ ಮನೆಗೆ ಬಂದು ಅವನ ತಾಯಿಯೊಡನೆ ಮಾತನಾಡಿದ. “ಎಲ್ಲವೂ ಸರಿ ಹೋಗುತ್ತದೆ. ನಾನು ನಾಳೆ ದುಬೈಗೆ ಹೋಗಿ ಫೋನ್ ಮಾಡುತ್ತೇನೆ” ಎಂದು ತಿಳಿಸಿ ಅವರನ್ನು ಸಮಾಧಾನ ಮಾಡಿ ಸ್ವಲ್ಪ ಹಣವನ್ನೂ ಅವರ ಕೈಗಿತ್ತು ಅಲ್ಲಿಂದ ಮರಳಿದ. ಅಂದಿನಿಂದ 10 ದಿವಸದ ಒಳಗೆ ಗೋಪಿಯನ್ನು ದುಬೈಗೆ ಬರಮಾಡಿಕೊಳ್ಳಲು ಎಲ್ಲಾ ವ್ಯವಸ್ಥೆಯನ್ನು ಇರ್ಷಾದ್ ಮಾಡಿದ್ದ. ಅವನ ಅವನಿಗೆ ಅಲ್ಲಿ ಉದ್ಯೋಗ ಒಂದನ್ನುವ್ಯವಸ್ಥೆ ಮಾಡಿದ್ದ.ತಾಯಿಯನ್ನು ಅಕ್ಕ ತನ್ನ ಮನೆಗೆ ಕರೆದುಕೊಂಡು ಹೋದಳು. ಇರ್ಷಾದ್ ತಿಳಿಸಿದಂತೆ ಗೋಪಿ ದುಬೈಯಲ್ಲಿ ಕೆಲಸಕ್ಕೆ ಸೇರಿಕೊಂಡ.ಹಲವಾರು ವರ್ಷಗಳ ಕಾಲ ಚೆನ್ನಾಗಿ ದುಡಿದು ತುಂಬಾ ಸ್ಥಿತಿವಂತನಾದ.ಅವನಿಗೆ ಇದ್ದ ಸಾಲವನ್ನು ಎಲ್ಲವನ್ನು ಮುಗಿಸಿ ಊರಲ್ಲಿ ಒಳ್ಳೆಯ ಮನೆ ಕಟ್ಟಿಸಿದ.ಹಲವಾರು ವರ್ಷಗಳು ದುಬೈಯ ವಾಸ ಕಳೆದಾಗ ಇರ್ಷಾದ್ ಮತ್ತು ಗೋಪಿ ಇಬ್ಬರೂ ಊರಿಗೆ ಮರಳಿ ಇಬ್ಬರು ಸೇರಿಕೊಂಡು ಒಂದು ದೊಡ್ಡ ಹೋಟೆಲ್ ವ್ಯಾಪಾರವನ್ನು ಆರಂಭಿಸಿದರು. ಮುಂದೆ ಇಬ್ಬರೂ ಕೂಡ ಹಲವಾರು ವರ್ಷ ಗೆಳೆಯರಾಗಿ ಸುಖವಾಗಿ ಬಾಳಿದರು.

✍ **ಲೇಖನ ಚಿಹ್ನೆ ಗುರುತಿಸಿರಿ ಮತ್ತು ಬಳಸಿರಿ**

ಪಾಠಪುಸ್ತಕದಲ್ಲಿ ನೀಡಲಾದ ಲೇಖನ ಚಿಹ್ನೆಗಳನ್ನು ಮತ್ತು ಅವುಗಳನ್ನು ಬಳಸುವ ಸಂದರ್ಭಗಳನ್ನು ಅಧ್ಯಾಪಕರು ಪರಿಚಯಿಸುವರು. ಈ ಮೊದಲು ಪಾಠಭಾಗಗಳಲ್ಲಿ ಬಂದಿರುವ ಲೇಖನ ಚಿಹ್ನೆಗಳನ್ನು ಬಳಸಿರುವ ಸಂದರ್ಭಗಳನ್ನು ಗುರುತಿಸಲಿರುವ ಅವಕಾಶ ನೀಡುವುದು. ಬಳಿಕ ಪಾಠಪುಸ್ತಕದಲ್ಲಿನ ಪ್ಯಾರಾಕ್ಕೆ ಲೇಖನ ಚಿಹ್ನೆಗಳನ್ನು ಬಳಸುವರು.

**ಹೀಗೂ ಆಗಬಹುದಲ್ಲವೇ?**

ಉಲ್ಲಾಸನು ಒಬ್ಬ ಪ್ರತಿಭಾವಂತ ಯುವಕನಾಗಿದ್ದನು. ಆದರೆ ಅವನು ಪಡೆದ ಶಿಕ್ಷಣಕ್ಕೆ ಸರಿಯಾಗಿ ಉದ್ಯೋಗ ಸಿಗಲಿಲ್ಲ. ಒಂದು ದಿನ ಅವನಿಗೊಂದು ದೂರವಾಣಿ ಕರೆ ಬಂತು. “ದುಬಾಯಿಗೆ ಬರುತ್ತೀಯಾ? ಬರುತ್ತಿಯಾದರೆ ಎಲ್ಲಾ ವ್ಯವಸ್ಥೆ ಮಾಡುತ್ತೇನೆ”. ಹಲವು ವರ್ಷಗಳ ನಂತರ ಆತನ ಗೆಳೆಯ ವಿಜೇತ ನಿರೀಕ್ಷೆ ಇಲ್ಲದೆಯೇ ಕರೆ ಮಾಡಿದ್ದ. ಉಲ್ಲಾಸನಿಗೆ ಆದ ಸಂತೋಷಕ್ಕೆ ಪಾರವೇ ಇಲ್ಲ. ಅಬ್ಬಾ! ಬಚಾವಾದೆ ಅಂದುಕೊಂಡು ತಂದೆ, ತಾಯಿ ಹಾಗೂ ಅಕ್ಕನಿಗೆ ಈ ಸುದ್ದಿಯನ್ನು ಮುಟ್ಟಿಸಿ ಅವರ ಅನುಮತಿಯನ್ನು ಕೇಳಲು ಓಡಿದನು.